ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 13 ಶನಿವಾರ 2022

ಸಂಪುಟ: 43 | ಸಂಚಿಕೆ: 119 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಎಸಿಬಿ ಬಂದ್‌ಗೆ ಸಿಎಂ ಸಹಮತ



ಬೆಂಗಳೂರು, ಆ.12(ಕೆಎಂಶಿ)– ಎಸಿಬಿಗೆ ಬೀಗ ಜಡಿದು ಲೋಕಾಯುಕ್ತವನ್ನೇ ಗಟ್ಟಿಗೊಳಿಸುವ ಇಂಗಿತವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ನಮ್ಮ ಬಿಜೆಪಿ ಪಕ್ಷ ಪ್ರಣಾಳಿಕೆಯಲ್ಲಿ ಎಸಿಬಿ ರದ್ದು ಮಾಡಿ, ಲೋಕಾಯುಕ್ತಕ್ಕೆ ಜೀವ ತುಂಬುವ ಭರವಸೆ ನೀಡಿತ್ತು. ಪ್ರಣಾಳಿಕೆಯ ಭರವಸೆಯನ್ನು ನಮ್ಮ ಸರ್ಕಾರ ಈಡೇರಿಸಲಿದೆ ಎಂದು ಹೇಳುವ ಮೂಲಕ ಎಸಿಬಿಗೆ ಕೊನೆ ಮೊಳೆ ಹೊಡೆದಿದ್ದಾರೆ. ಎಸಿಬಿ ರದ್ಧತಿ ಬಗ್ಗೆ ಹೈಕೋರ್ಟ್ ನೀಡಿರುವ ತೀರ್ಪನ್ನು ಅಧ್ಯಯನ ಮಾಡಿ ವರದಿ ನೀಡುವಂತೆ ▶ 8ನೇ ಪುಟಕ್ಕೆ

ನೆರೆ ನೀರು ಬಳಕೆಗೆ ನೂತನ ಜಲ ನೀತಿ

● ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ● ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರ ನೇಮಕ ವಯೋಮಿತಿ ಸಡಿಲ; ಪರಿಶಿಷ್ಟರಿಗೆ 47, ಹಿಂದುಳಿದವರಿಗೆ 45, ಸಾಮಾನ್ಯರಿಗೆ 42 ● ಅರ್ಹತಾ ಪರೀಕ್ಷೆ ಅಂಕವೂ ಶೇ.60 ರಿಂದ 50ಕ್ಕೆ ಇಳಿಕೆ

ಬೆಂಗಳೂರು, ಆ. 12 (ಕೆಎಂಶಿ)– ನೆರೆ ಬಂದ ಸಂದರ್ಭದಲ್ಲಿ ಹರಿದು ಹೋಗುವ ನೀರನ್ನು ಹಿಡಿದಿಟ್ಟು ಮರು ಬಳಕೆ ಮಾಡಿಕೊಳ್ಳುವ ನೂತನ ಜಲ ನೀತಿಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿರುವುದಲ್ಲದೆ, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನೇಮಕಾತಿಗೆ ನಿಗದಿಯಾಗಿದ್ದ ವಯೋಮಿತಿ ಸಡಿಲಿಸಿದೆ.





ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಿ, ಅದನ್ನು ವ್ಯವಸ್ಥಿತವಾಗಿ ಹಾಗೂ ಮಿತವ್ಯಯದಲ್ಲಿ ಬಳಕೆ ಮಾಡಿಕೊಳ್ಳಲು ಯೋಜನೆ ರೂಪಿಸಿ, ಹೊಸ ನೀತಿಗೆ ಅನುಮತಿ ನೀಡಲಾಗಿದೆ. ಚಾಲ್ತಿಯಲ್ಲಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಮತ್ತು ನೀರಾವರಿ ಸಾಮರ್ಥ್ಯ, ಸೃಷ್ಟಿ ಹಾಗೂ ಅವುಗಳ ಬಳಕೆ ನಡುವೆ ಇರುವ ಅಂತರವನ್ನು ನಿವಾರಿಸುವುದು. ಸಾಧ್ಯವಿರುವ ಕಡೆಗಳಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು, ನೀರಾವರಿ ವ್ಯವಸ್ಥೆಯಲ್ಲಿ ಕಾಲುವೆ ಯಾಂತ್ರೀಕರಣದ ಬಳಕೆ ಕಡ್ಡಾಯಗೊಳಿಸಿ, ತೂಬುಗಳಲ್ಲಿ ನಿಗದಿತ ಹರಿಯುವಿಕೆ ದೃಢೀಕರಿಸಲಾಗಿದೆ. ▶ 8ನೇ ಪುಟಕ್ಕೆ

ಮೈಸೂರು, ಚಾಮರಾಜನಗರದಲ್ಲಿ ಜಪಾನಿನ ಸುಜುಕಿ, ಹಿಟಾಚಿ ಸೇರಿದಂತೆ ಹಲವು ಬೃಹತ್ ಕಂಪನಿ ಸ್ಥಾಪನೆ

● ಬೃಹತ್ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮಾಹಿತಿ ● ಜಪಾನಿನ 9 ಕಂಪನಿಗಳಿಂದ ರಾಜ್ಯದ ವಿವಿಧ ಭಾಗದಲ್ಲಿ ಉದ್ಯಮ ಸ್ಥಾಪನೆ ● 60 ರಿಂದ 80 ಸಾವಿರ ಕೋಟಿ ಬಂಡವಾಳ ಹೂಡಿಕೆ



ಬೆಂಗಳೂರು, ಆ.12(ಕೆಎಂಶಿ)–ಜಪಾನ್ ಮೂಲದ ಸುಜುಕಿ ಮೋಟಾರ್ಸ್, ಹಿಟಾಚಿ ಸೇರಿದಂತೆ ಬೃಹತ್ ಕಂಪನಿಗಳು ಮೈಸೂರು, ಚಾಮರಾಜನಗರದಲ್ಲಿ ಸ್ಥಾಪಿತಗೊಳ್ಳಲಿವೆ.

ಈ ಸಂಸ್ಥೆಗಳಲ್ಲದೆ, ಜಪಾನಿನ 9 ಕಂಪನಿಗಳು, ರಾಜ್ಯದ ಪ್ರಮುಖ ಕೇಂದ್ರಗಳಲ್ಲಿ ಸ್ಥಾಪನೆ ಆಗಲಿವೆ. ಸುಮಾರು 60 ರಿಂದ 80 ಸಾವಿರ ಕೋಟಿ ರೂ. ಬಂಡವಾಳ ಹೂಡಲಿದ್ದು, ಇವರಿಗೆ ಅಗತ್ಯವಾದ ಭೂಮಿ ಮತ್ತು ಇತರೆ ಮೂಲ ಸೌಕರ್ಯ ಕಲ್ಪಿಸಿಕೊಡುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಇಂದಿಲ್ಲಿ ತಿಳಿಸಿದ್ದಾರೆ.

ನವೆಂಬರ್ 2 ರಿಂದ 4ರವರೆಗೆ ರಾಜಧಾನಿಯಲ್ಲಿ ನಡೆಯಲಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಅಂತಾರಾಷ್ಟ್ರೀಯ ರೋಡ್‌ಶೋನ ಭಾಗವಾಗಿ ಜಪಾನ್ ಪ್ರವಾಸ ಯಶಸ್ವಿಯಾಗಿದೆ. ಮೂರು ದಿನಗಳ ರೋಡ್‌ಶೋ ವೇಳೆ ಹಲವು ಕಂಪನಿಗಳ ಮುಖ್ಯಸ್ಥರನ್ನು ಭೇಟಿಯಾಗಿ, ಹೂಡಿಕೆದಾರರ ಸಮಾವೇಶಕ್ಕೆ ಆಹ್ವಾನ ನೀಡಿದ್ದೇನೆ ಎಂದಿದ್ದಾರೆ. ಟೋಕಿಯೋದಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ಟೊಯೊಟಾ, ಸುಜುಕಿ ಮೋಟಾರ್ ಕಾರ್ಪೊರೇಷನ್, ಮಿಟ್ಸುಯಿ, ಮೆರ್ಕರಿ, ಜೆಟ್ರೊ, ಹಿಟಾಚಿ, ಎನ್‌ಇಸಿ ಕಾರ್ಪ್‌ನ ಪ್ರತಿನಿಧಿಗಳನ್ನು ಭೇಟಿಯಾಗಿ ಚರ್ಚೆ ನಡೆಸಿದ ಸಂದರ್ಭದಲ್ಲಿ ರಾಜ್ಯದಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರಿವೆ. ಬೆಂಗಳೂರು ನಗರ ಮತ್ತು ಗ್ರಾಮಾಂತರದಲ್ಲಿ ಬೃಹತ್ ಕೈಗಾರಿಕಾ ಸ್ಥಾಪನೆಗೆ ಭೂಮಿಯ ಕೊರತೆ ಇರುವ ಕಾರಣ ▶ 8ನೇ ಪುಟಕ್ಕೆ



ಕಾಡಾನೆ ದಾಳಿಗೆ ಕೇರಳ ಮೂಲದ ರೈತ ಬಲಿ

● ರೊಚ್ಚಿಗೆದ್ದ ಗ್ರಾಮಸ್ಥರಿಂದ ಪ್ರತಿಭಟನೆ
● ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳ ಭೇಟಿ





ಸರಗೂರು, ಆ.12– ಕಾಡಾನೆ ದಾಳಿಗೆ ಕೇರಳ ಮೂಲದ ರೈತ ಬಲಿಯಾಗಿರುವ ದುರಂತ ತಾಲೂಕಿನ ಎತ್ತಿಗೆ ಗ್ರಾಮದಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ.

ಕೇರಳದ ವೈನಾಡು ಜಿಲ್ಲೆ ಪಾಲಮಂಗಲಂ ಗ್ರಾಮದ ನಿವಾಸಿ ಬಾಲನ್(60) ಮೃತಪಟ್ಟ ರೈತ. ಈತ ಕಾಡಂಚಿಗೆ ಹೊಂದಿಕೊಂಡಂತಿರುವ ಹೆಡಿಯಾಲ, ಚಿಕ್ಕಬರಗಿ ರಸ್ತೆ ಬದಿಯ ಜಮೀನಿನಲ್ಲಿ ಶುಂಠಿ ಬೆಳೆದಿದ್ದಾರೆ. ಶುಕ್ರವಾರ ಬೆಳಗ್ಗೆ ಜಮೀನಿನಲ್ಲಿ ಹಾಕಲಾದ ಶೆಡ್ ಬಳಿ ಕೆಲಸ ಮಾಡುತ್ತಿದ್ದ ವೇಳೆ ಮೇವು ಅರಸಿ ಕಾಡಿನಿಂದ ಬಂದ ಕಾಡಾನೆ ಬಾಲನ್ ಮೇಲೆ ಏಕಾಏಕಿ ದಾಳಿ ನಡೆಸಿದ ಪರಿಣಾಮ ಆತ ಸ್ಥಳದಲ್ಲೇ ಸಾವಗೀಡಾಗಿದ್ದಾರೆ. ಬಳಿಕ ಕೊಟ್ಟಿಗೆಯಲ್ಲಿದ್ದ ದನಗಳ ಮೇಲೂ ದಾಳಿ ನಡೆಸಿ ಗಾಯಗೊಳಿಸಿದೆ. ನಂತರ ಪರಮೇಶ್ ಎಂಬುವರ ಜಮೀನಿಗೆ ನುಗ್ಗಿ ಶೆಡ್ ನೆಲಸಮಗೊಳಿಸಿದೆ. ಅಲ್ಲದೇ ಪರಮೇಶ್ ▶ 8ನೇ ಪುಟಕ್ಕೆ

ಅಪರಾಧಿಗಳ ಹಿನ್ನೆಲೆ ಪತ್ತೆ ಮಾಡಲು ಪೊಲೀಸರಿಗೆ ಹೊಸ ಆ್ಯಪ್ ನೆರವು

ಸ್ಥಳದಲ್ಲೇ ಮಾಹಿತಿ ನೀಡಲಿದೆ ಮೊಬೈಲ್ ಕ್ರೈಂ ಅಂಡ್ ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್‌ವರ್ಕ್ ಸಿಸ್ಟಂ ಫಿಂಗರ್ ಪ್ರಿಂಟ್ಸ್ ಸ್ಕ್ಯಾನರ್ ಉಪಕರಣ





ಎಸ್.ಟಿ. ರವಿಕುಮಾರ್

ಮೈಸೂರು, ಆ. 12(ಆರ್‌ಕೆ)– ಡಿಜಿಟಲ್ ಮಾಹಿತಿ ತಂತ್ರಜ್ಞಾನವನ್ನು ಬಳಸಿ ಅಪರಾಧಿಗಳು ಮತ್ತು ಸಮಾಜಘಾತುಕರನ್ನು ಪತ್ತೆ ಮಾಡಲು ಮೈಸೂರು ಪೊಲೀಸರು ಮುಂದಾಗಿದ್ದಾರೆ. ಅಪರಾಧಿಗಳನ್ನು ಪತ್ತೆ ಮಾಡಲು ನೂತನ ತಂತ್ರಜ್ಞಾನದ ಮೊಬೈಲ್ ಕ್ರೈಂ ಅಂಡ್ ಕ್ರಿಮಿನಲ್ ಟ್ರ್ಯಾಕಿಂಗ್ ನೆಟ್‌ವರ್ಕ್ ಸಿಸ್ಟಂ (MCCTNS) ಫಿಂಗರ್ ಪ್ರಿಂಟ್ಸ್ ಸ್ಕ್ಯಾನರ್ ಮೂಲಕ ಅಪರಾಧ ಹಿನ್ನೆಲೆ ಇರುವ ವ್ಯಕ್ತಿಗಳನ್ನು ಪತ್ತೆ ಮಾಡಿ, ಸಮಾಜದಲ್ಲಿ ಸಂಭವಿಸುವ ಅಪರಾಧ ಕೃತ್ಯಗಳನ್ನು ನಿಯಂತ್ರಿಸಲು ಮೈಸೂರು ನಗರ ಪೊಲೀಸರು ಕಾರ್ಯತಂತ್ರ ರೂಪಿಸಿದ್ದಾರೆ.

ಮೈಸೂರಿನ ಎಲ್ಲಾ ಪೊಲೀಸ್ ಠಾಣೆಗಳಿಗೂ ತಲಾ ಎರಡು ಎಂಸಿಸಿಟಿಎನ್‌ಎಸ್ ಫಿಂಗರ್ ಪ್ರಿಂಟ್ಸ್ ಸ್ಕ್ಯಾನರ್ ಉಪಕರಣಗಳನ್ನು ಒದಗಿಸಲಾಗಿದ್ದು, ಒಂದನ್ನು ಠಾಣೆಯಲ್ಲಿರಿಸಿಕೊಂಡು, ಮತ್ತೊಂದನ್ನು ಹೊರಗಡೆ ಗಸ್ತಿನಲ್ಲಿರುವ ಜವಾಬ್ದಾರಿಯುತ ಪೊಲೀಸ್ ಸಿಬ್ಬಂದಿಗೆ ನೀಡಲಾಗಿದೆ.


ಮೈಸೂರು ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣ, ರೈಲು ಹಾಗೂ ವಿಮಾನ ನಿಲ್ದಾಣ, ಮಾರುಕಟ್ಟೆ, ಮೃಗಾಲಯ, ಚಾಮುಂಡಿಬೆಟ್ಟ, ಅರಮನೆ ಸೇರಿದಂತೆ ಜನಸಂದಣಿ ಪ್ರದೇಶ ಹಾಗೂ ಪ್ರವಾಸಿ ತಾಣಗಳಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರು ಸಂಶಯಾಸ್ಪದ ವ್ಯಕ್ತಿಗಳು ಕಂಡುಬಂದಲ್ಲಿ ಅವರ ಕೈ ಹೆಬ್ಬೆರಳುಗಳನ್ನು ಸ್ಕ್ಯಾನ್ ಮಾಡಿಸಿ ತಮ್ಮ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡಿರುವ ಎಂಸಿಸಿಟಿಎನ್‌ಎಸ್ ಆ್ಯಪ್‌ಗೆ ಅಳವಡಿಸುತ್ತಾರೆ. ಆ ವ್ಯಕ್ತಿಯ ಫಿಂಗರ್ ಪ್ರಿಂಟ್ ಅನ್ನು ಕರ್ನಾಟಕ ರಾಜ್ಯದಾದ್ಯಂತ ಎಲ್ಲಾ ಪೊಲೀಸ್ ಠಾಣೆಗಳಿಂದ ಅಪ್‌ಲೋಡ್ ಮಾಡಿರುವ ಕ್ರಿಮಿನಲ್‌ಗಳ ಫಿಂಗರ್ ಪ್ರಿಂಟ್‌ಗಳನ್ನು ಪರಿಶೀಲಿಸಲಿರುವ ಈ ಉಪಕರಣವು, ಈ ಹಿಂದೆ ಯಾವುದೇ ಠಾಣೆಯಲ್ಲಿ ಎಫ್‌ಐಆರ್ ಆಗಿ ಬಂಧಿತನಾಗಿದ್ದರೆ ಅದರ ಮಾಹಿತಿಯನ್ನು ಒಂದೇ ನಿಮಿಷದಲ್ಲಿ ತೋರುತ್ತದೆ. ಒಂದು ವೇಳೆ ಎಲ್ಲಿಯೂ ಪ್ರಕರಣ ದಾಖಲಾಗದಿದ್ದರೆ ಹೋಲಿಕೆ ಇಲ್ಲ (Not Matched) ಎಂದು ತಿಳಿಸುತ್ತದೆ.

ಮೈಸೂರಿನ ಹೃದಯ ಭಾಗದಲ್ಲಿರುವ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್, ತಮ್ಮ ವ್ಯಾಪ್ತಿಯ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಮೂಲಕ ಕ್ರಿಮಿನಲ್ ಬ್ಯಾಕ್‌ಗ್ರೌಂಡ್ ಹೊಂದಿರುವ ವ್ಯಕ್ತಿಗಳನ್ನು ಪತ್ತೆ ಮಾಡುವ ಮೂಲಕ ಅಪರಾಧ ಕೃತ್ಯಗಳನ್ನು ನಿಯಂತ್ರಿಸುತ್ತಿದ್ದಾರೆ.

ಕರ್ನಾಟಕ ರಾಜ್ಯದ ಎಲ್ಲಾ ಠಾಣೆಗಳಲ್ಲೂ ಎಫ್‌ಐಆರ್ ಆಗಿ ಬಂಧಿತರಾಗುವ ವ್ಯಕ್ತಿಗಳ ಫಿಂಗರ್ ಪ್ರಿಂಟ್‌ಗಳನ್ನು ಸ್ಕ್ಯಾನ್ ಮಾಡಿ ರಾಜ್ಯ ಪೊಲೀಸ್ ಡೇಟಾ ಸೆಂಟರ್‌ಗೆ ಕಳುಹಿಸಲಾಗುತ್ತದೆ. ರಾಜ್ಯದ ಯಾವುದೇ ಮೂಲೆಯಲ್ಲಿ ಅನುಮಾನಾಸ್ಪದ ವ್ಯಕ್ತಿಯ ಕೈ ಬೆರಳಿನ ಸ್ಕ್ಯಾನ್ ಮಾಡುತ್ತಿದ್ದಂತೆಯೇ ಆ ವ್ಯಕ್ತಿಯ ಕ್ರಿಮಿನಲ್ ಚರಿತ್ರೆಯು ಕ್ಷಣಾರ್ಧದಲ್ಲಿ ತಿಳಿಯಲಿದೆ.

ಹೀಗೆ ರ್‍ಯಾಂಡಮ್ ಆಗಿ ಚೆಕ್ ಮಾಡುವುದರಿಂದ ಕ್ರಿಮಿನಲ್ ಹಿನ್ನೆಲೆಯುಳ್ಳವರನ್ನು ಮತ್ತೆ ಪೊಲೀಸ್ ವಶಕ್ಕೆ ಪಡೆದು ವಿಚಾರಣೆ ನಡೆಸಿ ಅಗತ್ಯ ಬಿದ್ದಲ್ಲಿ ಬಂಧಿಸಿ ಜೈಲಿಗೆ ಕಳುಹಿಸುವುದರಿಂದ ಅವರುಗಳಿಂದ ಆಗಬಹುದಾದ ಅಪರಾಧ ಕೃತ್ಯಗಳನ್ನು ತಡೆಗಟ್ಟುವ ಜೊತೆಗೆ ಅಪರಾಧ ಪ್ರಕರಣಗಳ ಪತ್ತೆಗೂ ಸಹಕಾರಿಯಾಗಲಿದೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ರಂಗಾಯಣದಲ್ಲಿ ಮೊದಲು ಸ್ವಾತಂತ್ರ್ಯ ಹೋರಾಟದ ಜ್ಯೋತಿ ಬೆಳಗಿಸಿದ 'ಹಲಗಲಿ ಸಮರ' ನಾಟಕ ಪ್ರದರ್ಶನ



ಮೈಸೂರು,ಆ.12(ಎಂಟಿವೈ)– ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಅಮೃತ ಭಾರತಿಗೆ ಕನ್ನಡ ದಾರತಿ ಹಾಗೂ ಹರ್ ಘರ್ ತಿರಂಗ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮೈಸೂರು ರಂಗಾಯಣವು 'ಹಲಗಲಿ ಸಮರ' ನಾಟಕ ಸಿದ್ಧಪಡಿಸಿದ್ದು, ಆ.13ರಿಂದ ಪ್ರದರ್ಶಿಸಲಾಗುತ್ತಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದ್ದಾರೆ.

ಮೈಸೂರಿನ ರಂಗಾಯಣ ಆವರಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆದಿವಾಸಿಗಳ ಹೋರಾಟವು ಅವಿಸ್ಮರಣೀಯ. ಅವರ ಹೋರಾಟವನ್ನು ಸ್ಮರಿಸುವುದಕ್ಕಾಗಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಈ ಸುಸಂದರ್ಭದಲ್ಲಿ ಬಾಗಲಕೋಟೆಯ ಮುಧೋಳದ ಹಲಗಲಿ ಬೇಡರ ಹೋರಾಟ ಕುರಿತು ಹಲಗಲಿ ಸಮರ ನಾಟಕವನ್ನು ಸಿದ್ಧಪಡಿಸಲಾಗಿದೆ. ಸ್ವತಃ ನಾನೇ ಈ ನಾಟಕವನ್ನು ನಿರ್ದೇಶನ ಮಾಡಿದ್ದು, ತಂತ್ರಜ್ಞರು ಸೇರಿ 27 ಮಂದಿ ಕಲಾವಿದರು ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

ರಂಗಾಯಣ ಆವರಣದ ಭೂಮಿ ಗೀತ ರಂಗಮಂದಿರದಲ್ಲಿ ಆ.13, 14 ಹಾಗೂ 15ರ ಸಂಜೆ 6.30ಕ್ಕೆ ಪ್ರದರ್ಶನಗೊಳ್ಳಲಿದೆ. ನಾಟಕವು ಒಂದು ಗಂಟೆ ಹದಿನೈದು ನಿಮಿಷವಿದ್ದು, ಹಲಗಲಿ ಬೇಡರ ಹೋರಾಟವನ್ನು ಕಟ್ಟಿಕೊಡಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೂ ಹೋರಾಟದ ಒಂದು ದಿನ ಪರಿಕಲ್ಪನೆಯಡಿ ನಾಟಕೋತ್ಸವ ಆಯೋಜಿಸಿದ್ದು, ಮೈಸೂರು ರಂಗಾಯಣದ ತಂಡ ಬೆಂಗಳೂರಿನಲ್ಲಿ ಆ.19 ರಿಂದ 30ರವರೆಗೆ ವಿವಿಧ ಭಾಗಗಳಲ್ಲಿ ಹಲಗಲಿ ಸಮರ ನಾಟಕ ಪ್ರದರ್ಶನ ಮಾಡಲಿದೆ ಎಂದು ವಿವರಿಸಿದರು.

ಭಾರತದ ಬಹುಭಾಗ ಬ್ರಿಟಿಷರ ತೆಕ್ಕೆಗೆ ಒಳಪಡುತ್ತಿದ್ದಂತೆ ಭಾರತೀಯರಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ ಜಾಗೃತವಾಗಿ ಹೋರಾಟಗಳು ಆರಂಭವಾದವು. ಇದರ ಪರಿಣಾಮ 1857ರಲ್ಲಿ ಬ್ರಿಟಿಷ್ ಸೈನ್ಯದಲ್ಲಿದ್ದ ಭಾರತೀಯ ಸೈನಿಕರು ದಂಗೆ ನಡೆಸಿದರು. ಬಳಿಕ ಈ ಹೋರಾಟ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟ ಎಂದು ಹೇಳಲಾಯಿತು. ಇದರಿಂದ ದಿಗಿಲುಗೊಂಡ ಬ್ರಿಟಿಷರು ದೇಶದಲ್ಲಿ ನಿಶಸ್ತ್ರೀಕರಣ ಕಾಯಿದೆ ಜಾರಿಗೆ ತರುವ ಮೂಲಕ ಕಂಪನಿ ಸರ್ಕಾರದ ಅನುಮತಿ ಇಲ್ಲದೆ ಯಾವೊಬ್ಬ ಭಾರತೀಯನು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ. ಈಗಾಗಲೇ ಹೊಂದಿರುವ ಶಸ್ತ್ರಾಸ್ತ್ರಗಳನ್ನು ಕಂಪೆನಿ ಸರ್ಕಾರಕ್ಕೆ ಒಪ್ಪಿಸುವಂತೆ ಹೇಳಿದರು. ಇದರಿಂದ ಕುಪಿತಗೊಂಡ ಬಾಗಲಕೋಟೆಯ ಮುಧೋಳ ಗ್ರಾಮದ ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟವನ್ನೇ ನಾಟಕವನ್ನಾಗಿ ರೂಪಿಸಲಾಗಿದೆ ಎಂದು ಹೇಳಿದರು.

ಡಿಪ್ಲೊಮಾ ಪ್ರದಾನ: ರಂಗಾಯಣ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದೊಂದಿಗೆ ನಡೆಸುತ್ತಾ ಬಂದಿರುವ ಭಾರತೀಯ ರಂಗವಿದ್ಯಾಲಯದಲ್ಲಿ 2020–21 ಮತ್ತು 2021–22ರ ಸಾಲಿನಲ್ಲಿ ರ್‍ಯಾಂಕ್ ಪಡೆದ ತಲಾ ಮೂರು ಮಂದಿ ವಿದ್ಯಾರ್ಥಿಗಳಿಗೆ ಆ.13ರಂದು ರಂಗಾಯಣ ಆವರಣದಲ್ಲಿ ಬೆಳಗ್ಗೆ 11ಕ್ಕೆ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ ಡಿಪ್ಲೊಮಾ ಪ್ರದಾನ ಮಾಡಲಿದ್ದಾರೆ ಎಂದರು. ರಂಗಾಯಣ ಆಡಳಿತಾಧಿಕಾರಿ ನಿರ್ಮಲಾ ಮಠಪತಿ, ರಂಗ ವಿದ್ಯಾಲಯದ ಮುಖ್ಯಸ್ಥ ಎಸ್. ರಾಮನಾಥ್ ಇದ್ದರು.

ಕೃಷ್ಣ ಜನ್ಮಾಷ್ಟಮಿ: ಆ.19ರಂದು ಮಾಂಸ ಮಾರಾಟ ನಿಷೇಧ

ಮೈಸೂರು, ಆ.12– ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಹಾನಗರ ಪಾಲಿಕೆಗೆ ಸೇರಿದ ಕುರಿ ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ನಗರದಲ್ಲಿ 2022ರ ಆಗಸ್ಟ್ 19ರಂದು ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮುಚ್ಚಲಾಗುತ್ತದೆ. ವ್ಯಾಪಾರವನ್ನು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಿರುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಪಾಲಿಕೆ ಆರೋಗ್ಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊಬೈಲ್ ಕಿತ್ತುಕೊಂಡು ಓಡುತ್ತಿದ್ದ ಖದೀಮನ ಹಿಡಿದು ಪೊಲೀಸರಿಗೊಪ್ಪಿಸಿದ ಸಾರ್ವಜನಿಕರು

ಮೈಸೂರು, ಆ.12– ರೋಗಿಯನ್ನು ನೋಡಲು ಬಂದಿದ್ದ ವ್ಯಕ್ತಿಯಿಂದ ಮೊಬೈಲ್ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಖದೀಮನನ್ನು ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಮೈಸೂರಿನ ಕೆ.ಆರ್. ಆಸ್ಪತ್ರೆ ಆವರಣದಲ್ಲಿ ನಡೆದಿದೆ.

ಕೊಡಗಿನ ಸೋಮವಾರಪೇಟೆ ನಿವಾಸಿ ಸುದೀಪ್ ಬಂಧಿತ ಖದೀಮನಾಗಿದ್ದು, ಸರಗೂರು ತಾಲೂಕು ತೇರಣಿಮಂಟಿ ಗ್ರಾಮದ ಸಿ.ಚೆಲುವರಾಜು(32) ಎಂಬುವರು ಕೆಆರ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ತಮ್ಮ ನಾದಿನಿಯ ಯೋಗಕ್ಷೇಮ ವಿಚಾರಿಸಲು ಬಂದಿದ್ದರು. ಆಸ್ಪತ್ರೆಯ ಕಲ್ಲು ಕಟ್ಟಡದ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಅವರ ಕೈಯ್ಯಲ್ಲಿದ್ದ ಮೊಬೈಲ್ ಅನ್ನು ಸುದೀಪ್ ಕಿತ್ತುಕೊಂಡು ಆಸ್ಪತ್ರೆ ಆವರಣದಿಂದ ಓಡಲು ಯತ್ನಿಸಿದಾಗ ಸಾರ್ವಜನಿಕರು ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಆತನನ್ನು ಹಿಡಿದು ದೇವರಾಜ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಹಿರಿಯ ಛಾಯಾಗ್ರಾಹಕ, ಲೇಖಕ ಜಂಬುಕೇಶ್ವರರ 'ವರ್ಣದಿಂದ ವಿಶ್ವದೆಡೆಗೆ' ಪುಸ್ತಕ ಬಿಡುಗಡೆ

ಶ್ರೀಯುತರ ಸರಳತನ, ಸಜ್ಜನಿಕೆ ಕೊಂಡಾಡಿದ ಜಿ.ಟಿ.ದೇವೇಗೌಡ



'ವರ್ಣದಿಂದ ವಿಶ್ವದೆಡೆಗೆ' ಕೃತಿ ಬಿಡುಗಡೆ ಸಮಾರಂಭದಲ್ಲಿ ಹಿರಿಯ ಕಲಾವಿದ, ಲೇಖಕ ಎಸ್.ಎಂ.ಜಂಬುಕೇಶ್ವರ ದಂಪತಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಜಿ.ಟಿ.ದೇವೇಗೌಡ, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಡಾ.ಸಿ.ಸೋಮಶೇಖರ್, ಬರಹಗಾರ ಡಾ.ಎಂ.ಮಹ್ಮದ್ ಪಾಷ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಆ.12(ಎಸ್‌ಪಿಎನ್)– ಹಿರಿಯ ಕಲಾವಿದ, ಲೇಖಕ ಎಸ್.ಎಂ. ಜಂಬುಕೇಶ್ವರ ರಚಿತ 'ವರ್ಣದಿಂದ ವಿಶ್ವದೆಡೆಗೆ' ಕೃತಿಯನ್ನು ಶಾಸಕ ಜಿ.ಟಿ.ದೇವೇಗೌಡ ಶುಕ್ರವಾರ ಬಿಡುಗಡೆಗೊಳಿಸಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಭವನದಲ್ಲಿ ಗ್ರಾಯತ್ರಿ ಎಂಟರ್ ಪ್ರೈಸಸ್ ಹಾಗೂ ಕನ್ನಡ ಸಾಹಿತ್ಯ ಕಲಾಕೂಟ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪುಸ್ತಕ ಲೋಕಾರ್ಪಣೆ ಮಾಡಿದರು. ಲೇಖಕ ಎಸ್.ಎಂ.ಜಂಬುಕೇಶ್ವರ ಅವರು ಛಾಯಾ ಪತ್ರಕರ್ತರಾಗಿ, ಚಿತ್ರಕಲಾ ಶಿಕ್ಷಕರಾಗಿ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, ಇವರನ್ನು ನಾನು ಮೈಸೂರು ಜಿಪಂ ಅಧ್ಯಕ್ಷರಾಗಿದ್ದ ಸಂದರ್ಭದಿಂದಲೂ ನೋಡಿದ್ದೇನೆ. ಬೇರೆಯವರಂತೆ ಯಾವುದೇ ಪ್ರಭಾವ ಬಳಸಿಕೊಳ್ಳಲು ಮುಂದಾಗಿಲ್ಲ. ಅವರು ತಮ್ಮ ವ್ಯಾಪ್ತಿಯ ಕೆಲಸಗಳಿಗೆ ಮಾತ್ರ ಸೀಮಿತರಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ ಎಂದರು.

ಲೇಖಕರು ತಮ್ಮ ಫೋಟೋಗ್ರಾಫರ್ ವೃತ್ತಿಯ ಜೊತೆಗೆ ಅನೇಕ ಪತ್ರಿಕೆಗಳಲ್ಲಿ ತಮ್ಮ ಲೇಖನಗಳನ್ನು ಬರೆದು ಓದುಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಜಂಬುಕೇಶ್ವರ್ ಅವರು, ಸುತ್ತೂರು ಮಠದ ನಿಕಟ ಸಂಪರ್ಕದಲ್ಲಿದ್ದು, ಸಾಮಾಜಿಕ ಕಳಕಳಿ ಹೊಂದಿರುವ ಜವಾಬ್ದಾರಿಯುತ ವ್ಯಕ್ತಿಯಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರು 75 ನೇ ವಯಸ್ಸಿನಲ್ಲೂ ಬರೆಯುವ ಹವ್ಯಾಸ ಬೆಳೆಸಿಕೊಂಡು ಸದಾ ಚಟುವಟಿಕೆಗಳಿಂದ ಜೀವನ ಸಾಗಿಸುತ್ತಿರುವುದು ಮೆಚ್ಚುಗೆಯ ಸಂಗತಿ ಎಂದರು. ನಿವೃತ್ತ ಐಎಎಸ್ ಅಧಿಕಾರಿಗಳಾದ ಡಾ.ಸಿ.ಸೋಮಶೇಖರ್ ಅವರು, ಸರ್ಕಾರಿ ಸೇವೆಯಿಂದ ನಿವೃತ್ತರಾಗಿದ್ದರೂ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅವರನ್ನು ಇಂದಿಗೂ ಜನ ಜಿಲ್ಲಾಧಿಕಾರಿಗಳಾಗಿ ಗುರುತಿಸುತ್ತಿದ್ದಾರೆ. ಏಕೆಂದರೆ ಅವರು ಅಧಿಕಾರದಲ್ಲಿದ್ದಾಗ ಜನಪರ ಕೆಲಸ –ಕಾರ್ಯಗಳನ್ನು ಮಾಡಿದ್ದರು ಎಂದರು. ಸುತ್ತೂರು ಮಠದ ಹಿರಿಯ ಶ್ರೀಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರನ್ನು, ಸಾರ್ವಜನಿಕರು ಮಠದಲ್ಲಿ ಯಾವಾಗ ಭೇಟಿಯಾದರೂ ಅವರ ಕಷ್ಟ–ಸುಖಗಳನ್ನು ಕೇಳಿ, ಅದಕ್ಕೆ ಪೂರಕವಾಗಿ ಸ್ಪಂದಿಸುತ್ತಿದ್ದರು. ಈಗಿನ ಶ್ರೀಗಳು ಅದನ್ನು ಮುಂದುವರೆಸುತ್ತಿದ್ದಾರೆ. ನಾನು ಜಿಪಂ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಹಿರಿಯ ಶ್ರೀಗಳನ್ನು ಕಾರ್ಯಕ್ರಮವೊಂದರಲ್ಲಿ ಆಕಸ್ಮಿತವಾಗಿ ಭೇಟಿಯಾಗಿದ್ದಾಗ, ನೀನು ಬಡ ಜನರ ಸಮಸ್ಯೆಗೆ ಸ್ಪಂದಿಸಿದರೆ, ರಾಜಕಾರಣದಲ್ಲಿ ಉನ್ನತ ಸ್ಥಾನ ಪಡೆಯಲು ಸಾಧ್ಯವಾಗುತ್ತದೆ. ಕಷ್ಟದಲ್ಲಿರುವ ಜನರ ಸಮಸ್ಯೆಗೆ ರಾಜಕಾರಣಿಗಳು ಸ್ಪಂದಿಸುವ ಗುಣ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದ ಸಂದರ್ಭವನ್ನು ನೆನೆದರು.

ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಮಾತನಾಡಿ, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳು ಜೀವಿಸಿದ್ದ ಸಂದರ್ಭದಲ್ಲಿ ಜಂಬುಕೇಶ್ವರ ಅವರು, ಮಠದ ನಿಕಟ ಸಂಪರ್ಕ ಹೊಂದಿ, ಶ್ರೀಗಳ ಮೆಚ್ಚುಗೆ ಪಾತ್ರರಾಗಿದ್ದರು. ಸುತ್ತೂರು ಮಠದ ಸಾಮಾಜಿಕ ಕಳಕಳಿ ಬಿಂಬಿಸುವ ಅನೇಕ ಲೇಖನಗಳನ್ನು ವಿವಿಧ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಇತರೆ ಲೇಖನಗಳು ಸಹ ಓದುಗರ ಗಮನ ಸೆಳೆಯುತ್ತದೆ. ಅವರು ಎಲ್ಲಾ ಲೇಖನಗಳನ್ನು ಒಟ್ಟುಗೂಡಿಸಿ 'ವರ್ಣದಿಂದ ವಿಶ್ವದೆಡೆಗೆ' ಪುಸ್ತಕ ರೂಪದಲ್ಲಿ ತಂದಿರುವುದು ಮೆಚ್ಚುಗೆಯ ಸಂಗತಿ ಎಂದರು.

ಪ್ರಸುತ ವಿವಿಗಳಲ್ಲಿ ನಾನಾ ಕಾರಣಗಳಿಗೆ ಶೈಕ್ಷಣಿಕ ಆಡಳಿತ ಹಾಗೂ ಬೋಧನಾ ವ್ಯವಸ್ಥೆಯ ಗುಣಮಟ್ಟ ಕುಸಿಯುತ್ತಿದೆ. ಹಿಂದೆ ಉಪ ಕುಲಪತಿಗಳನ್ನು ರಾಜಕಾರಣಿ ಅಥವಾ ಮುಖ್ಯಮಂತ್ರಿಗಳಾಗಲಿ ಭೇಟಿಯಾಗಬೇಕಾದರೆ ಮೊದಲು ಕುಲಪತಿಗಳ ಸಮಯ ನಿಗದಿಪಡಿಸಿಕೊಂಡು ಚರ್ಚಿಸುತ್ತಿದ್ದ ಕಾಲವೊಂದಿತ್ತು. ಇಂದಿನ ಕುಲಪತಿಗಳು ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ವಿಧಾನಸೌಧದಲ್ಲಿ ಉನ್ನತ ಶಿಕ್ಷಣ ಸಚಿವರನ್ನು ಭೇಟಿಯಾಗಬೇಕಾದರೆ, ಅವರು, ಮೊದಲು ಸಚಿವರ ಪಿಎಗಳ ಬಳಿ ಕುಳಿತು, ಮಾತುಕತೆ ನಡೆಸಿದ ನಂತರ ಸಚಿವರನ್ನು ಭೇಟಿಯಾಗುವ ಕಾಲ ಬಂದಿರುವುದು ಶೋಚನೀಯ ಸಂಗತಿ ಎಂದರು. ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಡಾ.ಸಿ.ಸೋಮಶೇಖರ್, ಬರಹಗಾರ ಡಾ.ಎಂ.ಮಹ್ಮದ್ ಪಾಷ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಉಪಸ್ಥಿತರಿದ್ದರು.

ಇಂದು ಆರೋಗ್ಯ ತಪಾಸಣೆ

ಮೈಸೂರು, ಆ.12– ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇಂದು (ಆ.13) ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಆ.13 ಮತ್ತು 14ರಂದು ವಿಜಯನಗರ 1ನೇ ಹಂತದಲ್ಲಿ ಹಾಗೂ ಮನೆಮನೆಗಳಲ್ಲಿ ತ್ರಿವರ್ಣ ಧ್ವಜಾರೋಹಣ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆ.15ರಂದು 75ನೇ ಅಮೃತ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಕೆ.ಕಾಳಿಂಗು, ಕಾರ್ಯದರ್ಶಿ ಸಿ.ಜಿ.ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಹೃದಯ, ಚರ್ಮ ತಪಾಸಣೆ ಶಿಬಿರ

ಮೈಸೂರು, ಆ. 12– ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಜೆಎಸ್‌ಎಸ್ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಹಾಗೂ ಯೋಗ ಪ್ರಾಣ ವಿದ್ಯಾಕೇಂದ್ರದ ಸಹಯೋಗದಲ್ಲಿ ಆ. 16ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 1.30ರ ವರೆಗೆ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಹೃದಯ, ಚರ್ಮ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಮೊ. 99161 55453 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.08.2022 ಶನಿವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ
ತಿಥಿ: ದ್ವಿತೀಯ, ನಕ್ಷತ್ರ : ಶತಭಿಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭ'ವ'ದ ಬಯಲಿಗರು, ರಚನೆ ಮತ್ತು ಪ್ರಸ್ತುತಿ–ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಲೇಖನ– ಡಾ.ಡಿ. ಸತೀಶ್ಚಂದ್ರ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಎಂಆರ್. ಸುಧಾ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ–ಬಸವರಾಜಯ್ಯ ಮತ್ತು ತಂಡ, 1.00 ಸುಕನ್ಯಾ ಸಮೃದ್ಧಿ ಯೋಜನೆ ಕುರಿತು ಮಾತನಾಡುತ್ತಾರೆ ಶೀಲಾ ಖಾನೆ, 1.20 ಭಾವಗೀತೆ, 3.35 ಮಕ್ಕಳ ಮಂಟಪ– ಅಕ್ಷಯ ಸಂಸ್ಕೃತಿ ಕೇಂದ್ರದ ಮಕ್ಕಳಿಂದ ಕಾರ್ಯಕ್ರಮ, 4.00 ನಾಟಕ "ಸಾಲವನು ಕೊಂಬಾಗ", ರಚನೆ– ಬೇಲೂರು ರಾಮಮೂರ್ತಿ, ನಿರ್ಮಾಣ–ಉಮೇಶ್ ಎಸ್.ಎಸ್., 4.30 ನೆನಪಿನಂಗಳ–ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಐ.ಎನ್.ಎ. ರಾಮರಾವ್ ಅವರೊಂದಿಗೆ ಹೆಚ್.ಎಸ್. ವೇಣುಗೋಪಾಲ್ ನಡೆಸಿದ್ದ ಸಂವಾದ, 6.50ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್ ಕಥಾ ನಾಟಕ "ಸಂಬಂಧ ಬೆಸೆದ ಕೊರೋನಾ", ಮೂಲಕಥೆ– ಜಿ. ಚಂದ್ರಕಲಾ ಕುಮಾರ್, ಬಾನುಲಿ ರೂಪ – ಉಷಾ ನರಸಿಂಹನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 9.15 ಪುಸ್ತಕ ಪ್ರಕಾಶನದ ಹೊಸ ಸಾಧ್ಯತೆಗಳು–ಡಿ.ಎನ್. ಲೋಕಪ್ಪ ಅವರೊಂದಿಗೆ ಸಂದರ್ಶನ ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಸುಮನಾ ಗುಪ್ತ–ದ್ರುಪದ್/ದಮಾರ್, ಮುಂಜಲ್ ಶೈಲೇಶ್ ಬಾಯ್ ಮೆಹ್ತಾ–ತಬಲ, 11.00 ಸವಿನೆನಪು

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಶ್ರಾವಣ ಶನಿವಾರ ಪೂಜೆಗಳು, ಸಂಜೆ ಶ್ರೀ ದತ್ತವೆಂಕಟೇಶ್ವರ ದೇವಾಲಯದಲ್ಲಿ ಶನಿದೀಪಾರಾಧನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.

■ **ವಿಜಯನಗರ 1ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ :** ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆವರಣ, ವಿಜಯನಗರ 1ನೇ ಹಂತ, ಬೆಳಗ್ಗೆ 9 ರಿಂದ.

■ **ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ :** ಸ್ವಾತಂತ್ರ್ಯ ಅಮೃತ ಮಹೋತ್ಸವ ನಡಿಗೆ... ಪ್ರಬುದ್ಧ ಭಾರತದ ಕಡೆಗೆ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಸಾಹಿತ್ಯ ವಿಮರ್ಶಕ ಪ್ರೊ. ರಾಜೇಂದ್ರ ಚೆನ್ನಿ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 5 ರಿಂದ.

■ **ಕೆಂಪೇಗೌಡರ ಯುವ ಸೇವಾ ಬಳಗ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಅಂಧ ಕಲಾವಿದರಿಂದ ರಸಮಂಜರಿ ಕಾರ್ಯಕ್ರಮ, ಸ್ಥಳ: ಶ್ರೀ **ರಾಘವೇಂದ್ರಸ್ವಾಮಿಗಳವರ ಮಠ,** ಕುಂಬಾರಕೊಪ್ಪಲು, ಸಂಜೆ 4ಕ್ಕೆ.

■ **ರಂಗಯಾನ ಟ್ರಸ್ಟ್ ಮೈಸೂರು :** ಭರತರಂಗ–22, ರಂಗಗೀತೆಗಳು, ನಾಟಕಗಳು, ಜಾನಪದ ನೃತ್ಯ, ನೃತ್ಯರೂಪಕ, ಉಪಸ್ಥಿತರು : ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಅಭಿಯಂತರರು ಸಂಸ್ಥೆ ಅಧ್ಯಕ್ಷ ಸುರೇಶ್‌ಬಾಬು, ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ರಂಗ ತಂಡದ ಅಧ್ಯಕ್ಷ ಬಿ.ಎಂ. ರಾಮಚಂದ್ರ, ಸಂಚಲನ ಸಂಸ್ಥೆ ಅಧ್ಯಕ್ಷ ದೀಪಕ್ ಮೈಸೂರು, ನಿರಂತರ ಫೌಂಡೇಷನ್ ಅಧ್ಯಕ್ಷ ಪ್ರಸಾದ್ ಕುಂದೂರು, ದೇಸಿರಂಗ ಸಂಸ್ಥೆ ಅಧ್ಯಕ್ಷ ಕೃಷ್ಣ ಜನಮನ, ಭರತರಂಗ–22 ಸಂಚಾಲಕ ಹೆಚ್. ನಟರಾಜು, ರಂಗಯಾನ ಟ್ರಸ್ಟ್ ಉಪಾಧ್ಯಕ್ಷ ಪ್ರಶಾಂತ್ ಬಿ. ಮಾದರಸನ ಕೊಪ್ಪ, ಸಂಜೆ 6 ಕ್ಕೆ ಜಾನಪದ ನೃತ್ಯ, ಸಂಜೆ 6.30ಕ್ಕೆ ಮಹಾಜನ ಕಾಲೇಜಿನ ಸಾರಂತ ತಂಡದಿಂದ ರಂಗಗೀತೆಗಳು, ಸಂಜೆ 7ಕ್ಕೆ ಸವಿರಂಗ ತಂಡದಿಂದ ಉಧೋ ಉಧೋ ಎಲ್ಲವ್ವ ನಾಟಕ ಪ್ರದರ್ಶನ, ನಿರ್ದೇಶನ : ಕೃಷ್ಣಮೂರ್ತಿ ಕವತ್ತಾರ್, ರಚನೆ : ಬೇಲೂರು ರಘುನಂದನ್, ಸ್ಥಳ: ಕಿರು ರಂಗಮಂದಿರ.

■ **ಬಸವ ಭಾರತ ಫೌಂಡೇಷನ್ :** ಉದ್ಘಾಟನಾ ಸಮಾರಂಭ ಹಾಗೂ ಬಸವ ಜಯಂತಿ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಷಟ್‌ಸ್ಥಲ ಧ್ವಜಾರೋಹಣ : ನಂಜನಗೂಡು ಶರಣ ಸಂಸ್ಕೃತಿ ಪ್ರಸಾರ ಕೇಂದ್ರದ ಅಧ್ಯಕ್ಷ ಕಾ.ಸು. ನಂಜಪ್ಪ, ಉದ್ಘಾಟನೆ : ನಿವೃತ್ತ ನ್ಯಾಯಾಧೀಶ ಅರಳಿ ನಾಗರಾಜು, ಮುಖ್ಯ ಅತಿಥಿಗಳು : ಶಾಸಕ ಜಿ.ಟಿ. ದೇವೇಗೌಡ, ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ, ಶ್ರೀಮತಿ ರೀಟಾ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಧಾನ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಪಾದಪೂಜೆ, 9ಕ್ಕೆ ಪಂಚಾಮೃತ, 12.30ಕ್ಕೆ ಅಲಂಕಾರ ಬ್ರಾಹ್ಮಣ ಸೇವೆ, ಸಂಜೆ 5.30 ರಿಂದ ಕು. ಅನಘ ಅವರಿಂದ ದೇವರನಾಮಗಳು, ಸಂಜೆ 6.45 ರಿಂದ ವಿದುಷಿ ವಿಪಂಚಿ ಮತ್ತು ವಿದುಷಿ ಮಹಿತಿ ಅವರಿಂದ ದ್ವಂದ್ವ ಗಾಯನ, ವಿದುಷಿ ಸಿ.ವಿ. ಶ್ರುತಿ–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಧಾನ, ವಿ.ವಿ. ಮೊಹಲ್ಲಾ.

■ **ಶ್ರೀ ವಿಠ್ಠಲ ಮುಖ್ಯಪ್ರಾಣ ರಾಘವೇಂದ್ರ ಸೇವಾ ಸಮಿತಿ, ಶ್ರೀ ವಿಟ್ಠಲ ಧಾಮ, ಪೇಜಾವರ ಮಠ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 6ಕ್ಕೆ ಸುಪ್ರಭಾತ, 7 ರಿಂದ ಮಹಾಪಂಚಾಮೃತ ಅಭಿಷೇಕ, 10.30 ರಿಂದ ಕನಕಾಭಿಷೇಕ, ಸರ್ವಸೇವೆ, ಪಾದಪೂಜೆ, 12ಕ್ಕೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ವಿದ್ವಾನ್ ಆರ್.ಕೆ. ಪದ್ಮನಾಭ್ ಅವರಿಂದ ವೀಣಾವಾದನ, ಸ್ಥಳ: ಶ್ರೀ ವಿಠ್ಠಲ ಮುಖ್ಯಪ್ರಾಣ ರಾಘವೇಂದ್ರ ಸೇವಾ ಸಮಿತಿ, ಜೆ.ಪಿ.ನಗರ.

■ **ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್‌ನ ಯುವ ನಿಸರ್ಗ ಚಿತ್ರಕಲಾವಿದರಿಂದ ವರ್ಷಧಾರೆ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10 ರಿಂದ.

■ **ಸಂಸ್ಕೃತ ಭಾರತಿ, ವಿದ್ವಾನ್ ಟಿ.ನಾರಾಯಣಶಾಸ್ತ್ರಿ ಪ್ರತಿಷ್ಠಾನಂ :** ಅಥರ್ವಣ ವೇದ, ಸಂಸ್ಕೃತ ಸಪ್ತಾಹ–2022, ಕೃಷ್ಣಭಟ್ಟ ಮತ್ತು ಡಾ.ಜಯರಾಮ ಭಟ್ಟ ಅವರಿಂದ ಸಮಾಜದಲ್ಲಿ ಮೀಮಾಂಸಾ ನ್ಯಾಯಗಳು, ಲೀಲಾವತೀ ಗಣಿತ ಕುರಿತು ಪ್ರವಚನ, ಸ್ಥಳ: ವಿಶ್ವಂ ಸಭಾಂಗಣ, 8ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 5.50ಕ್ಕೆ.

■ **ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಸಂಜೆ 6ಕ್ಕೆ ಸುಪ್ರಭಾತ, 8 ರಿಂದ ರಾಘವೇಂದ್ರ ಅಷ್ಟಾಕ್ಷರ ಜಪ, 9 ರಿಂದ ಶ್ರೀರಾಮರಕ್ಷಾ ಸ್ತೋತ್ರ, ಹವನ, 11 ರಿಂದ ಅಷ್ಟೋತ್ತರ ಸೇವೆ, 11.30 ರಿಂದ ಅಭಿಷೇಕ, ಮಹಾಪೂಜೆ, ಮಹಾಮಂಗಳಾರತಿ, ಸಂಜೆ 6.30 ರಿಂದ ಡಾ. ಮುದ್ದುಮೋಹನ ಮತ್ತು ವೃಂದದವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಹಾಗೂ ದಾಸವಾಣಿ, ಸ್ಥಳ:ಶ್ರೀ ಗುರುರಾಘವೇಂದ್ರ ಆರಾಧನಾ ಸಮಿತಿ, ಸೋಮನಾಥನಗರ.

■ **ಆದರ್ಶ ಸೇವಾ ಸಂಘ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ, ವಿಶ್ವ ವಿಪ್ರ ಪರಿಷತ್ :** ಪ್ರತಿಭಾ ಪುರಸ್ಕಾರ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು: ವಿಶ್ರಾಂತ ನ್ಯಾಯಾಧೀಶ ಎನ್.ಕುಮಾರ್, ಶಾಸಕರಾದ ಎಸ್.ಎ.ರಾಮದಾಸ್, ರವಿ ಸುಬ್ರಹ್ಮಣ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಹೆಚ್.ಎಸ್.ಸಚ್ಚಿದಾನಂದ ಮೂರ್ತಿ, ಎಸ್.ರಘುನಾಥ್, ಸಂಸ್ಕೃತ ಕೋವಿದ ಎಸ್.ಬಾಲಾಜಿ, ಅಧ್ಯಕ್ಷತೆ: ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್. ನಾಗರಾಜ, ಸ್ಥಳ:ಗಣಪತಿ ಸಚ್ಚಿದಾನಂದ ಆಶ್ರಮ, ಶ್ರೀ ಅವಧೂತ ದತ್ತಪೀಠ, ನಂಜನಗೂಡು ರಸ್ತೆ, ಬೆಳಗ್ಗೆ 10ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 5.30ಕ್ಕೆ ಸುಪ್ರಭಾತ, 7 ರಿಂದ ಮಹಾಪಂಚಾಮೃತ ಅಭಿಷೇಕ, 8 ರಿಂದ ಕನಕಾಭಿಷೇಕ, ಸರ್ವಸೇವೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, 12.30 ರಿಂದ ಪ್ರಸಾದ ವಿನಿಯೋಗ, ಸಂಜೆ 7 ರಿಂದ ಸ್ವಸ್ತಿವಾಚನ, ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ, ಸಂಜೆ 6.30 ರಿಂದ ವಿದ್ವಾನ್ ಮೈಸೂರು ಎ. ಚಂದನ್‌ಕುಮಾರ್ ಅವರಿಂದ ಕೊಳಲು ವಾದನ, ಸ್ಥಳ:ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ.

■ **ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಟ್ರಸ್ಟ್ ಅಭಿನವ ಮಂತ್ರಾಲಯ:** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಸುಪ್ರಭಾತ, ನಿರ್ಮಾಲ್ಯ, ಭಕ್ತರಿಂದ ಪಾದಪೂಜೆ, ಫಲಪಂಚಾಮೃತ, ಅಷ್ಟೋತ್ತರ, ಪುಷ್ಪಾಲಂಕಾರ, ಪುಷ್ಪಾರ್ಚನೆ, ಮಹಾಮಂಗಳಾರತಿ, ಸಂಜೆ ದೀವಿಟಿಗೆ ಸೇವೆ, ವೇದಪಾರಾಯಣ, ಡೋಲೋತ್ಸವ, ದೀಪಾರಾಧನೆ, ರಜತ ಪಲ್ಲಕ್ಕಿ, ರಜತರಥ ಸೇವೆ, ಅಷ್ಟಾವಧಾನ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಟ್ರಸ್ಟ್, ಕೃಷ್ಣಮೂರ್ತಿಪುರಂ.

■ **ಶ್ರುತಿಮಂಜರಿ ಪ್ರತಿಷ್ಠಾನ :** 23ನೇ ಶ್ರಾವಣ ಯುವ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ವೇಣುವಾದನ, ವಿದ್ವಾನ್ ರಾಕೇಶ್ ದತ್ ಎಚ್.ಕೆ. ಅವರಿಂದ ಕೊಳಲು, ವಿದ್ವಾನ್ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಅಜಯ್ ಟಿ.ಎನ್.–ಘಟಂ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಎದುರು, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಕರ್ನಾಟಕ ಸಂಸ್ಕೃತಿ ಕುರಿತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

■ **ಶ್ರೀ ಮಹಾಗಣಪತಿ ನವಗ್ರಹ ದೇವಸ್ಥಾನ ಅಭಿವೃದ್ಧಿ ಸಮಿತಿ :** ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನಾ ಮಹೋತ್ಸವದ ಪ್ರಯುಕ್ತ ಶ್ರೀಲಲಿತಾ ಭಜನಾ ಮಂಡಳಿಯವರಿಂದ ಭಜನೆ, ಮಂಗಳಾರತಿ, ತೀರ್ಥ, ಪ್ರಸಾದ ವಿತರಣೆ, ಸ್ಥಳ: ಶ್ರೀ ಮಹಾಗಣಪತಿ ನವಗ್ರಹ ದೇವಸ್ಥಾನ, ಬನ್ನಿಮಂಟಪ 1ನೇ ಹಂತ.

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ :** ಶ್ರೀ ರಾಘವೇಂದ್ರತೀರ್ಥ ಗುರುಸಾರ್ವಭೌಮರ 351ನೇ ಆರಾಧನಾ ಮಹೋತ್ಸವ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಮಧ್ಯಾಹ್ನ 12ಕ್ಕೆ ಹಸ್ತೋದಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಕು. ಧನ್ಯ ಗುರುರಾಜ್ ಅವರಿಂದ ದಾಸವಾಣಿ, ರಾತ್ರಿ 8ಕ್ಕೆ ದೀಪಿಕಾ ಪಾಂಡುರಂಗಿ ಅವರಿಂದ ದಾಸವಾಣಿ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ನಾರಾಯಣಶಾಸ್ತ್ರಿ ರಸ್ತೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನಿಷತ್ತುಗಳ ಸಾರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಿಸರ್ಗ ಟ್ರಸ್ಟ್, ನೈಸರ್ಗಿಕ ಸಾವಯುವ ರೈತ ಗ್ರಾಹಕ ಒಕ್ಕೂಟ :** ರೈತರ ಸಂತೆ, ಉದ್ಘಾಟನೆ: ಪತ್ರಕರ್ತೆ ರಶ್ಮಿ ಕೋಟಿ, ಸ್ಥಳ: ನಿಸರ್ಗ ಟ್ರಸ್ಟ್ ಆವರಣ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ:** ಸಾಧಕರೊಂದಿಗೆ ಸಂವಾದ, ತಿಂಗಳ ಸಾಧಕರು ಛಾಯಾಚಿತ್ರ ಕಲೆಯ ಕೆ.ವಿ. ಸುಬ್ಬರಾವ್, ಮುಖ್ಯ ಅತಿಥಿಗಳು : ಕೆ. ರಾಜು, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಕಾಯಕಯೋಗಿ ಸೇವಾ ಟ್ರಸ್ಟ್ :** ನಿವೃತ್ತ ಸೈನಿಕರಿಗೆ ಸನ್ಮಾನ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಇಂಟರ್‌ನ್ಯಾಷನಲ್ ಕೌನ್ಸಿಲ್ ಫಾರ್ ಡೆವಲಪ್‌ಮೆಂಟ್ ರಿಸರ್ಚ್ :** ಸುಸ್ಥಿರ ಅಭಿವೃದ್ಧಿಯಲ್ಲಿ ಸಮಸ್ಯೆಗಳು ಸವಾಲುಗಳು ಕುರಿತು ವಿಚಾರ ಸಂಕಿರಣ, ಸ್ಥಳ: ಕಾವೇರಿ ಸಭಾಂಗಣ, ಮುಕ್ತಗಂಗೋತ್ರಿ, ಬೆಳಗ್ಗೆ 10.30 ರಿಂದ.

■ **ಡಾ.ಬಿ.ಆರ್. ಅಂಬೇಡ್ಕರ್ ಗಾಂಧಿನಗರ ನಾಗರಿಕರ ಹಿತರಕ್ಷಣಾ ಸಮಿತಿ:** ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಹಿರಿಯ ನಾಗರಿಕರಿಗೆ ಸನ್ಮಾನ, ಪ್ರಾಸ್ತಾವಿಕ ನುಡಿ: ಬಿಜೆಪಿ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್, ಅಧ್ಯಕ್ಷತೆ: ಪಾಲಿಕೆ ಸದಸ್ಯೆ ಡಾ.ಅಶ್ವಿನಿಶರತ್, ಮುಖ್ಯ ಅತಿಥಿಗಳು: ಟಿ.ಎಸ್.ಶ್ರೀವತ್ಸ, ಎಚ್.ಜಿ.ಗಿರಿಧರ್, ಮೈ.ವಿ.ರವಿಶಂಕರ್, ಸಂದೇಶ್ ಸ್ವಾಮಿ, ಡಾ.ಭಾನುಪ್ರಕಾಶ್, ದಿವಾಕರ್, ಸ್ಥಳ: ಗಾಂಧಿನಗರ, ಸಂಜೆ 5ಕ್ಕೆ.

■ **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ:** ಕಲಾ ವೈಭವ, ಜಿಲ್ಲಾ ಮಟ್ಟದ ಗುಡಿ ಕೈಗಾರಿಕೆಗಳ ಕರಕುಶಲ, ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಬೆಳಗ್ಗೆ 10ರಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆಯ ದೈಹಿಕ ಶಿಕ್ಷಕ ಡಿ.ಎಂ.ಸಿದ್ದಲಿಂಗಸ್ವಾಮಿ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಲೋಕಾಯುಕ್ತಕ್ಕೆ ಬಲ: ಭ್ರಷ್ಟರಿಗೆ ನಡುಕ

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಪ್ರತಿಕ್ರಿಯೆ



ಮೈಸೂರು, ಆ.12(ಎಸ್‌ಬಿಡಿ)– ಲೋಕಾಯುಕ್ತಕ್ಕೆ ಮತ್ತೆ ಬಲ ಬಂದಿರುವುದರಿಂದ ಭ್ರಷ್ಟರಿಗೆ ನಡುಕ ಹುಟ್ಟಿದೆ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿ ವಿಶ್ವಜ್ಞಾನಿ ಸಭಾಂಗಣದಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಶುಕ್ರವಾರ ಭಾಗವಹಿಸಿದ್ದ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯಿಸಿ, ಲೋಕಾಯುಕ್ತಕ್ಕೆ ಮತ್ತೆ ಬಲ ಬಂದಿರುವುದು ಸ್ವಾಗತಾರ್ಹ. ಇದರಿಂದ ಭ್ರಷ್ಟರಿಗೆ ನಡುಕ ಶುರುವಾಗಿದೆ. ಈ ಸಂಬಂಧ ನ್ಯಾಯಾಲಯದ ತೀರ್ಪಿನ ಬಗ್ಗೆ ಮೂರು ಪಕ್ಷದವರಲ್ಲಿ ಅಸಮಾಧಾನವಿರಬಹುದು ಎಂದು ಅಭಿಪ್ರಾಯಿಸಿದರು.

ಲೋಕಾಯುಕ್ತ ಬಲಿಷ್ಠವಾಗಿದ್ದ ಸಂದರ್ಭದಲ್ಲಿ ಹಲವು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿತ್ತು. ಆದರೆ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಬಂದ ನಂತರ ಯಾವ ರಾಜಕಾರಣಿ ಹಾಗೂ ಅಧಿಕಾರಿ ಮೇಲೂ ಕ್ರಮ ಜರುಗಿಸಲಿಲ್ಲ. ಸಚಿವರಿರಲಿ ಶಾಸಕರನ್ನೂ ಎಸಿಬಿ ವಿಚಾರಣೆ ನಡೆಸಿಲ್ಲ. ಎಸಿಬಿಯಲ್ಲಿ ಸಾವಿರಾರು ಕೇಸ್‌ಗಳು ದಾಖಲಾಗಿದ್ದರೂ ಯಾರಿಗೂ ಶಿಕ್ಷೆ ಆಗಿಲ್ಲ ಎಂಬುದು ವಿಷಾದನೀಯ ಎಂದರು.

ನಮ್ಮ ನಿಮ್ಮಂತವರು ತಪ್ಪು ಮಾಡಿದರೆ ಹೀಗೆ ನಡೆದುಕೊಳ್ಳುತ್ತಿದ್ದರಾ? ಸರ್ಕಾರಿ ಅಧಿಕಾರಿಯ ತನಿಖೆ ಮಾಡಲು ಸರ್ಕಾರದ ಅನುಮತಿ ಪಡೆಯಬೇಕು. ಇದು ಬ್ರಿಟಿಷರು ತಮ್ಮ ಪ್ರಾಬಲ್ಯಕ್ಕಾಗಿ ಈ ರೀತಿಯ ನಿಯಮ ಜಾರಿಗೆ ತಂದಿದ್ದರು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಇದನ್ನು ಮುಂದುವರೆಸಲಾಗಿದೆ. ಸಾಮಾನ್ಯರನ್ನು ನೇರವಾಗಿ ತನಿಖೆ ನಡೆಸಬಹುದಾದರೆ ಅಧಿಕಾರಿಗಳ ತನಿಖೆಗೆ ಸರ್ಕಾರದ ಅನುಮತಿ ಏಕೆ ಬೇಕು? ಎಂದು ಪ್ರಶ್ನಿಸಿದರು.


ಜೈಲಿಗೆ ಹೋಗಿ ಬಂದವರಿಗೆ ಸೇಬಿನ ಹಾರ ಹಾಕಿ ಸ್ವಾಗತಿಸುತ್ತಾರೆ. ಭ್ರಷ್ಟಾಚಾರಿಗಳಿಗೆ ಜೈಕಾರ ಹಾಕುತ್ತಾರೆ. ಸದ್ಯ ಹಣ, ಅಧಿಕಾರಕ್ಕಾಗಿ ಹಾತೊರೆಯುತ್ತಾರೆ. ಮೂರು ಪಕ್ಷಗಳಲ್ಲೂ ಭ್ರಷ್ಟಾಚಾರಿಗಳಿದ್ದಾರೆ. ಹಾಗಾಗಿ ಅವರೆಲ್ಲರೂ ಲೋಕಾಯುಕ್ತಕ್ಕೆ ವಿರೋಧಿಗಳಾಗಿದ್ದಾರೆ. ಆದರೆ ಚುನಾವಣೆಯ ಕಾರಣದಿಂದ ಗಿಮಿಕ್ ಮಾಡುತ್ತಿದ್ದಾರೆ. ಈ ಸಂಬಂಧ ಸುಪ್ರೀಂಕೋರ್ಟ್ ಮೊರೆಹೋದರೆ ತೊಂದರೆಯಾಗಬಹುದು ಎನ್ನುವ ಭಯವಿದೆ. ಹಾಗಾಗಿ ನೇರವಾಗಿ ಅಲ್ಲದೆ ಹಿಂಬಾಲಕರ ಮೂಲಕ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು. ಏನೇ ಆದರೂ ಲೋಕಾಯುಕ್ತಕ್ಕೆ ಸ್ವಾತಂತ್ರ್ಯ, ಅಧಿಕಾರ ಹಾಗೂ ಅಗತ್ಯ ಸವಲತ್ತುಗಳನ್ನು ಒದಗಿಸುವ ಮೂಲಕ ಮತ್ತಷ್ಟು ಬಲಿಷ್ಠಗೊಳಿಸಬೇಕು ಎಂದು ಅಭಿಪ್ರಾಯಿಸಿದರು.

ಶಿವರಾಂಪೇಟೆ ಷೂ ವರ್ಲ್ಡ್‌ನಲ್ಲಿ ರಿಯಾಯಿತಿ ಮಾರಾಟ



ಮೈಸೂರು, ಆ.12– ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಮೈಸೂರಿನ ಶಿವರಾಂಪೇಟೆ ಮನ್ನಾರ್ಸ್ ಮಾರ್ಕೆಟ್ ಎದುರಿನ ಗ್ರಾಹಕರ ಮೆಚ್ಚಿನ 'ಷೂ ವರ್ಲ್ಡ್' ಶಾಖೆಯಲ್ಲಿ ಗುಣಮಟ್ಟದ ಎಲ್ಲಾ ರೀತಿಯ ಪಾದರಕ್ಷೆಗಳ ರಿಯಾಯಿತಿ ಮಾರಾಟ ಆಯೋಜಿಸಲಾಗಿದೆ. ಸ್ತ್ರೀ ಮತ್ತು ಪುರುಷರ ಗುಣಮಟ್ಟದ ಉತ್ತಮ ದರ್ಜೆಯ ಚಪ್ಪಲಿ, ಷೂ ಇತರೆ ಎಲ್ಲಾ ಇನ್‌ಹೌಸ್ ಬ್ರಾಂಡ್‌ನ ಪಾದರಕ್ಷೆಗಳ ಖರೀದಿ ಮೇಲೆ 2+1 ಆಫರ್ ನೀಡಲಾಗಿದೆ. ಅಂದರೆ 2 ಜೊತೆ ಕೊಂಡರೆ ಮತ್ತೊಂದು ಜೊತೆ ಉಚಿತ ವಾಗಿ ಸಿಗಲಿದೆ. ದೇಶೀಯ ಹಾಗೂ ಎಂಎನ್‌ಸಿ ಬ್ರ್ಯಾಂಡ್‌ನ ಷೂಗಳು ಲಭ್ಯವಿದ್ದು, ಎಂಆರ್‌ಪಿಗಿಂತಲೂ ಆಕರ್ಷಕ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. 100 ರೂ.ಗಳಿಂದ 9999 ರೂ.ವರೆಗೆ ನಾನಾ ಕಂಪನಿ ಫುಟ್ ವೇರ್‌ಗಳ ರಿಯಾಯಿತಿ ಮಾರಾಟ ಆ.15ರವರೆಗೆ ಇರಲಿದೆ ಎಂದು ಶಾಖೆಯ ವ್ಯವಸ್ಥಾಪಕ ಹೆಚ್.ಎ.ಅಮರ್‌ನಾಥ್ ತಿಳಿಸಿದ್ದಾರೆ.

ಎಸಿಬಿ ರದ್ದುಗೊಳಿಸಿ ಲೋಕಾಯುಕ್ತಕ್ಕೆ ಬಲ ತುಂಬಿದ ಕೋರ್ಟ್ ತೀರ್ಪಿನಿಂದ ಎಲ್ಲಾ ಪಕ್ಷದ ನಾಯಕರು ಬೆತ್ತಲಾಗಿದ್ದಾರೆ



ಮೈಸೂರು, ಆ.12(ಎಸ್‌ಬಿಡಿ)– ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ರದ್ದುಗೊಳಿಸಿ ಲೋಕಾಯುಕ್ತಕ್ಕೆ ಬಲ ತುಂಬುವ ನಿಟ್ಟಿನಲ್ಲಿ ಹೈಕೋರ್ಟ್ ನೀಡಿರುವ ಮಹತ್ವದ ತೀರ್ಪಿನಿಂದ ಮೂರು ರಾಜಕೀಯ ಪಕ್ಷಗಳ ನಾಯಕರು ಬೆತ್ತಲಾಗಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಹೇಳಿದ್ದಾರೆ.

ಮೈಸೂರಿನಲ್ಲಿ ಶುಕ್ರವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಅತ್ಯಂತ ಅರ್ಥಪೂರ್ಣ ಮಹತ್ವದ ತೀರ್ಪು ನೀಡಿರುವ ನ್ಯಾಯಾಧೀಶರಿಗೆ ಜನರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಇದೇ ವೇಳೆ ನ್ಯಾಯಾಲಯದ ತೀರ್ಪಿನಿಂದ ಮೂರು ಪಕ್ಷಗಳು ಬೆತ್ತಲಾಗಿ ರುವುದು ವಿಷಾದನೀಯ ಎಂದರು. 'ಎಸಿಬಿಯನ್ನು ರದ್ದುಗೊಳಿಸಿರುವುದನ್ನು ಕೇಳಿದ್ದೇನೆ. ನ್ಯಾಯಾಲಯದ ಆದೇಶದ ಪ್ರತಿ ನೋಡಿದ ನಂತರ ಮತ್ತೆ ಪ್ರತಿಕ್ರಿಯೆ ನೀಡುತ್ತೇನೆ' ಎಂದು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಧ್ಯಮಗಳಿಗೆ ತಿಳಿಸಿದ್ದಾರೆ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರು 'ಎಸಿಬಿ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಅನೇಕ ರಾಜ್ಯಗಳಲ್ಲಿದೆ. ಎಸಿಬಿಯನ್ನು ರದ್ದುಪಡಿಸಿ ಹೈಕೋರ್ಟ್ ನೀಡಿರುವ ತೀರ್ಪನ್ನು ಗೌರವಿಸುತ್ತೇನೆ. ಆದರೆ ಆದೇಶದ ಪ್ರತಿ ಇನ್ನೂ ಸಿಕ್ಕಿಲ್ಲ' ಎಂದಿದ್ದಾರೆ. ಆದೇಶ ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಆಗಿದೆ. ಅಲ್ಲದೆ ಈ ಇಬ್ಬರು ನಾಯಕರಿಗೂ ಕಚೇರಿಯಿಂದ ಮಾಹಿತಿ ಬರುತ್ತದೆ ಆದರೂ ಈ ರೀತಿ ಹೇಳಿಕೆ ನೀಡಿದ್ದಾರೆ ಎಂದು ವ್ಯಂಗ್ಯವಾಡಿದರು.

ಮಾಜಿ ಸಿಎಂ ಕುಮಾರಸ್ವಾಮಿ ಅವರೂ ಪ್ರತಿಕ್ರಿಯಿಸಿ 'ಎಸಿಬಿ ರದ್ದತಿಯಿಂದ ಭ್ರಷ್ಟಾಚಾರ ನಿಲ್ಲುತ್ತದೆ ಎಂಬ ನಂಬಿಕೆ ಇಲ್ಲ' ಎಂದು ಹೇಳಿದ್ದಾರೆ. ಈ ರೀತಿಯ ಅತ್ಯಂತ ನಕಾರಾತ್ಮಕ ಹೇಳಿಕೆ ನೀಡುವುದು ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದವರಿಗೆ ಶೋಭಾಯಮಾನವಲ್ಲ. ಹೀಗೆ ಮೂರು ಪಕ್ಷದ ನಾಯಕರು ತಮ್ಮ ಹೇಳಿಕೆಯಲ್ಲೇ ಬೆತ್ತಲಾಗಿದ್ದಾರೆ ಎಂದರು.

2ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ಶ್ರೀ ನಿಂಗಪ್ಪನವರು, ಹೂಟಗಳ್ಳಿ
ನಿಧನ : 13.08.2020

ದುಃಖತಪ್ತರು: ಕುಟುಂಬವರ್ಗ

9ನೇ ವರ್ಷದ ಸವಿನೆನಪು



ನಮ್ಮ ಪ್ರೀತಿಯ ಸೌಜು, ಇಂದಿಗೆ ನೀನು ನಮ್ಮನ್ನಗಲಿ ಒಂಬತ್ತು ವರ್ಷ ಕಳೆದರೂ, ನಿನ್ನ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿದೆ ಮತ್ತೆ ಹುಟ್ಟಿ ಬಾ ಸೌಜು.

ಇಂತಿ ದುಃಖತಪ್ತರು:
ತಂದೆ ನಾಗಣ್ಣ, ತಾಯಿ ಮಂಜುಳ, ಅಜ್ಜಿ ತಾತ, ಚಿಕ್ಕಪ್ಪ ಚಿಕ್ಕಮ್ಮಂದಿರು, ಅಣ್ಣ ತಮ್ಮ, ಅಕ್ಕ ತಂಗಿ ಹಾಗೂ ಕುಟುಂಬಸ್ಥರು. ಮಾದಹಳ್ಳಿ, ಬೀರಿಹುಂಡಿ ಪೋ॥, ಜಯಪುರ ಹೋ॥, ಮೈಸೂರು ತಾ॥

ಕು.ಸೌಜನ್ಯ

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.


ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005

ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–3:2022–23 ದಿನಾಂಕ: 11–08–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ

ಮೈಸೂರು ತಾಲ್ಲೋಕು, ಇಲವಾಲ ಹೋಬಳಿ, ನಗರ್ತಹಳ್ಳಿ ಗ್ರಾಮದ ಸರ್ವೆ ನಂ. 151/5ರಲ್ಲಿ 00 ಎಕರೆ 30 ಗುಂಟೆ. 151/6ರಲ್ಲಿ 03 ಎಕರೆ 08 ಗುಂಟೆ ಒಟ್ಟು 03 ಎಕರೆ 38 ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀಮತಿ ಬಿ.ಪದ್ಮಜ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **" ಈ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಿರುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗುತ್ತದೆ ಹಾಗೂ ವಾಣಿಜ್ಯ ಚಟುವಟಿಕೆ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ."** ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570 005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಶಂಕರ್ ರವರು

ಮಾಜಿ ಅಧ್ಯಕ್ಷರು, ಮೈಸೂರು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಕ.ರಾ.ರ.ಸಾ.ನಿಗಮ ನೌಕರರ ಪತ್ತಿನ ಸಹಕಾರ ಸಂಘ ನಿ.
ಮಾಜಿ ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ ಅಧಿಕಾರಿ ಮತ್ತು ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಚಿರಸ್ಥಾಯಿಯಾಗಿದೆ. ನೀವು ತೋರಿದ ಅದರ್ಶ ಮಾರ್ಗದಲ್ಲೇ ಅನುದಿನವೂ ಸಾಗಿದ್ದೇವೆ, ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿ ಕೋರುವ

ದುಃಖತಪ್ತರು

ಧರ್ಮಪತ್ನಿ ಶ್ರೀಮತಿ ಗಾಯಿತ್ರಿ ಶಂಕರ್,
ಮಕ್ಕಳು: ವಿನಯ್, ವಿಜಯ್ ಮತ್ತು ಕುಟುಂಬವರ್ಗದವರು

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ,

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು.
DISTRICT URBAN DEVELOPMENT CELL, OFFICE OF THE DEPUTY COMMISSIONER, MYSURU DISTRICT, MYSURU. E. mail : dudc_mys@yahoo.co.in
ದೂರವಾಣಿ ಸಂ: 0821–2424070
ಸಂ: ಮುನಿಸಿ(1)/ಸಿಬ್ಬಂದಿ/ಜಿ.ಐ.ಎಸ್/ಸರ್ವೇ/ಸಿ.ಆರ್–20/2021–22, ದಿನಾಂಕ: 10–08–2022

ಅಲ್ಪಾವಧಿ ಮರುಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರುಜಿಲ್ಲೆ, ಮೈಸೂರುರವರಿಂದ ಈ ಕೆಳಕಂಡ ಸೇವೆಯನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ : 01. ವಿವರ/ಇಂಡೆಂಟ್ ಸಂಖ್ಯೆ : **ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ ಉಪಯೋಗಕ್ಕಾಗಿ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸುವುದು (ಇಂಡೆಂಟ್ ಸಂಖ್ಯೆ:DUDC/EST/VEHICLE-HIRE/2022/Call2).** ಅಂದಾಜು ಮೊತ್ತ ರೂ. ಗಳಲ್ಲಿ : **19,20,000/–**. ಇ.ಎಂ.ಡಿ ಮೊತ್ತ ರೂ.ಗಳಲ್ಲಿ : **48,000/–**. ಅರ್ಹ ಸರಬರಾಜುದಾರರು : ನೊಂದಾಯಿತ ವಾಹನ ಸರಬರಾಜುದಾರರು/ಏಜೆನ್ಸಿ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **20.08.2022 ಸಂಜೆ 5.00 ಗಂಟೆಯೊಳಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **22.08.2022 ಬೆಳಗ್ಗೆ 11.00 ಗಂಟೆಗೆ.** ಟೆಂಡರ್ ದಾಖಲೆಗಳನ್ನು ದಿನಾಂಕ: **11.08.2022ರಿಂದ ದಿನಾಂಕ:19.08.2022ರ ಸಂಜೆ 5.30 ಗಂಟೆಯೊಳಗೆ** ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **20.08.2022ರ ಸಂಜೆ 5.00 ಗಂಟೆಯೊಳಗೆ** ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ **www.eprocurement.karnataka.gov.in** ರಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರುಜಿಲ್ಲೆ, ಮೈಸೂರು

DIPR/DD-MYS/MC&A/367/2022-23

ನಕ್ಕರೆ ಅದೇ ಸ್ವರ್ಗ

ಗೆಳೆಯ : ಮದುವೆಯಾದ ಮೇಲೆ ನೆಮ್ಮದಿಯಿಂದ ಇರಲು ಏನು ಮಾಡಬೇಕು?

ಆತ : ಏನು ಮಾಡಬೇಕೆಂದರೆ –ಹೆಂಡತಿಗೇ ಎಲ್ಲಾ ನಿರ್ಧಾರಗಳನ್ನು ಕೈಗೊಳ್ಳಲು ಬಿಡಬೇಕು. ಮತ್ತು ಆ ಎಲ್ಲಾ ನಿರ್ಧಾರಗಳನ್ನು ಗಂಡ ಯಾವುದೇ ರೀತಿ ತಕರಾರು ಇಲ್ಲದೆ ಒಪ್ಪಿಕೊಳ್ಳಬೇಕು.

ಮೈಸೂರು ಮಿತ್ರ

ಶನಿವಾರ, 13 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನಿಮ್ಮಲ್ಲಿರುವ ನೈಪುಣ್ಯತೆಯನ್ನು ಗುರುತಿಸಿ, ಅದನ್ನು ಬೆಳೆಸುವ ಪ್ರಯತ್ನ ಮಾಡಿ. ಅಜ್ಞಾನ ಎನ್ನುವುದು ಒಂದು ಅಂಗವಿಕಲತೆ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಮನೆ ಗೆದ್ದು ಮಾರು ಗೆಲ್ಲು

ನಿಮ್ಮ ಪತ್ರಗಳು

ಅವೈಜ್ಞಾನಿಕ ಸಂಚಾರ ವ್ಯವಸ್ಥೆ ಸರಿಪಡಿಸಿ

ಮಾನ್ಯರೇ,

ರಾಜ್ಯದಲ್ಲಿ ವೇಗವಾಗಿ ಬೆಳೆಯುತ್ತಿರುವ ನಗರಗಳ ಪೈಕಿ ಬೆಂಗಳೂರು ನಂತರದ ಸ್ಥಾನದಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ಸ್ಥಾನ ಪಡೆದುಕೊಂಡಿದೆ.

ಮೈಸೂರಿನಲ್ಲಿ ಕೈಗಾರಿಕಾ ಕ್ರಾಂತಿ ಒಂದೆಡೆಯಾದರೆ, ಅದಕ್ಕೆ ಪರ್ಯಾಯವಾಗಿ ಪ್ರವಾಸೋದ್ಯಮ ವಲಯ ನಿರೀಕ್ಷೆಗೂ ಮೀರಿ ಬೆಳೆಯುತ್ತಿರುವುದನ್ನು ದಾಖಲೆಗಳೇ ದೃಢೀಕರಿಸುತ್ತವೆ. ಆದರೆ, ದುರ್ದೈವವಶಾತ್ ಇಂದು ಮೈಸೂರು ಅಪಘಾತಗಳ ವಲಯವಾಗಿ ಮಾರ್ಪಟ್ಟಿರುವುದನ್ನು ಪೊಲೀಸ್ ಇಲಾಖೆಯಲ್ಲಿ ದಾಖಲಾಗುತ್ತಿರುವ ಪ್ರಕರಣಗಳೇ ಸಾಕ್ಷೀಕರಿಸುತ್ತಿವೆ.

ಅಧಿಕಾರಿ ವಲಯದ ಅಸಡ್ಡೆ ಪರಿಣಾಮ ಮೈಸೂರು ನಗರದಲ್ಲಿ ನಿತ್ಯ ಅಪಘಾತ ಸಂಭವಿಸುತ್ತಿದ್ದು, ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದು ಆಡಳಿತ ವರ್ಗದ ಬೇಜವಾಬ್ದಾರಿತನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಮೈಸೂರು ನಗರದಿಂದ ಕೆಆರ್‌ಎಸ್‌ಗೆ ಸಾಗುವ ಮಾರ್ಗದಲ್ಲಿರುವ ರಿಂಗ್ ರಸ್ತೆಯ ಬಲಭಾಗದಿಂದ ಕೊಲಂಬಿಯಾ ಏಷ್ಯಾ ಆಸ್ಪತ್ರೆಗೆ (ಈಗ ಮಣಿಪಾಲ್ ಆಸ್ಪತ್ರೆ) ಸಾಗುವ ಮಾರ್ಗದಲ್ಲಿ ಮೂರು ಕಡೆ ಅಂಡರ್ ಪಾಸ್ ರೈಲ್ವೆ ಮಲ್ಲೇತುವೆಗಳಿವೆ. ಆದರೆ, 15 ವರ್ಷಗಳ ಹಿಂದೆ ರೂಪಿಸಿದ ಅವೈಜ್ಞಾನಿಕ ಯೋಜನೆಯಿಂದಾಗಿ ಇಂದು ಸಾರ್ವಜನಿಕರು ಸಂಕಷ್ಟ ಅನುಭವಿಸುವಂತಾಗಿದೆ.

ರಿಂಗ್ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ 15 ವರ್ಷದ ಹಿಂದೆ ನಿರ್ಮಿಸಿದ್ದು, ಅರಸೀಕೆರೆ ಮಾರ್ಗದತ್ತ ಸಾಗುವ ರೈಲ್ವೆ ಮಾರ್ಗ, ಬೆಲವತ್ತ ರೈಲ್ವೆ ಮಾರ್ಗ ಹಾಗೂ ಆರ್‌ಬಿಐ ಸಮೀಪದ ರೈಲ್ವೆ ಮಾರ್ಗ ಸೇರಿದಂತೆ ಮೂರೂ ರೈಲ್ವೆ ಟ್ರ್ಯಾಕ್ ಅಂಡರ್ ಪಾಸ್ ಬಳಿ ರಸ್ತೆಯನ್ನು 4 ಪಥದ ಬದಲು 2 ಪಥಕ್ಕೆ ಇಳಿಸಲಾಗಿದೆ. ಜತೆಗೆ ವಾಹನಗಳು ಒನ್‌ವೇಯಿಂದ ಟೂ ವೇಯಲ್ಲಿ ಈ ಜಾಗದಲ್ಲಿ ಸಂಚರಿಸುವಂತಾಗಿದೆ. ಇದರಿಂದ ವಾಹನ ಸವಾರರು ಮುಖಾಮುಖಿ ಡಿಕ್ಕಿ ಹೊಡೆದುಕೊಂಡು ನಿರಂತರವಾಗಿ ಅಪಘಾತಗಳಾಗಿ ಸಾವು, ನೋವುಗಳು ಸಂಭವಿಸುತ್ತಿವೆ. ಮುಂದಾಲೋಚನೆ ಹಾಗೂ ದೂರದೃಷ್ಟಿತ್ವ ಇಲ್ಲದ ಯೋಜನೆ ರೂಪಿಸಿ ಅನುಷ್ಠಾನಗೊಳಿಸಿದ ಪರಿಣಾಮ ಆಗುತ್ತಿರುವ ಅನಾಹುತಗಳಿಗೆ ಹೊಣೆ ಯಾರು ಎಂಬುದೇ ಯಕ್ಷ ಪ್ರಶ್ನೆಯಾಗಿದೆ.

ಮೈಸೂರಿಗೆ ಹೆಚ್ಚಾಗಿ ಪ್ರವಾಸಿಗರು ಬರುವುದರಿಂದ ಅವರಿಗೆ ಈ ಬಗ್ಗೆ ಗೊತ್ತಿರುವುದಿಲ್ಲ. ರಿಂಗ್ ರಸ್ತೆಯಲ್ಲಿ ಎರಡು ಬದಿಯಿಂದ ವೇಗವಾಗಿ ಬರುವ ವಾಹನಗಳು ದಾರಿ ಚಿಕ್ಕದಾಗಿರುವುದನ್ನು ಗಮನಿಸದೆ ಹಲವು ಬಾರಿ ಅಪಘಾತಗಳು ಸಂಭವಿಸಿ ಸಾವು, ನೋವುಗಳು ಉಂಟಾಗುತ್ತಿವೆ. ಅಮೂಲ್ಯ ಜೀವಗಳ ಸಾವಿನ ಸರಣಿ ಇಲ್ಲಿ ಮುಂದುವರಿದಿದೆ. ಹಾಗಾಗಿ, ಮೂರೂ ಭಾಗದಲ್ಲಿರುವ ರೈಲ್ವೆ ಅಂಡರ್ ಪಾಸ್ ಸೇತುವೆಯನ್ನು ವಿಸ್ತರಿಸಿ ನಾಲ್ಕು ಪಥದ ರಸ್ತೆಯನ್ನಾಗಿ ಮಾಡಲೇಬೇಕು. ಇಲ್ಲವಾದರೆ, ಇನ್ನಷ್ಟು ಅಮಾಯಕ ಜೀವಗಳು ಬಲಿಯಾಗುವುದರಲ್ಲಿ ಯಾವುದೇ ರೀತಿಯ ಅನುಮಾನ ಇಲ್ಲವಾಗಿದೆ.

ಮಾತ್ರವಲ್ಲ, ಕೆಆರ್‌ಎಸ್ ಮಾರ್ಗದಲ್ಲಿ ಮುಂದುವರೆದರೆ ಕಾಫಿ ಬೋರ್ಡ್ ಸಮೀಪ ಲೆವೆಲ್ ಕ್ರಾಸಿಂಗ್‌ನಲ್ಲಿ ಇದೇ ಪರಿಸ್ಥಿತಿ ಇದ್ದು, ನಿತ್ಯ ಒಂದಿಲ್ಲೊಂದು ಅವಘಡಗಳು ಸಂಭವಿಸುತ್ತಲೇ ಇವೆ. ದಸರಾ ವೇಳೆ ಉಂಟಾಗುವ ವಾಹನಗಳ ದಟ್ಟಣೆಯಿಂದ ನೂರಾರು ವಾಹನಗಳು ಕಿಲೋಮೀಟರ್ ದೂರಕ್ಕೆ ಸಾಲುಗಟ್ಟಿ ನಿಲ್ಲುವುದು ಸಾಮಾನ್ಯವಾಗಿದೆ. ಆದಕಾರಣ, ಈ ಭಾಗದಲ್ಲಿ ತುರ್ತಾಗಿ ಮೇಲ್ಸೇತುವೆ ಆಗಬೇಕಿದೆ.

ಈ ಎಲ್ಲಾ ವಿಚಾರಗಳು ಜಿಲ್ಲಾಡಳಿತಕ್ಕಾಗಲಿ ಅಥವಾ ಸಂಬಂಧಿಸಿದ ಇಲಾಖೆಗಳಿಗಾಗಲೀ ತಿಳಿಯುವುದಿಲ್ಲ ಎಂದೇನಿಲ್ಲ. ಆದರೆ, ಈ ವಿಚಾರದಲ್ಲಿ ಅಧಿಕಾರಿಗಳು ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ. ಈ ಕಾರ್ಯದ ಹೊಣೆ ಸ್ಥಳೀಯ ಆಡಳಿತ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ರೈಲ್ವೆ ಇಲಾಖೆ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಹೊರಬೇಕಿದೆ. ಆದರೆ, ಎಲ್ಲರೂ ತಮ್ಮ ಬೇಜವಾಬ್ದಾರಿತನ ಪ್ರದರ್ಶಿಸುವ ಮೂಲಕ ಜನರ ಜೀವದೊಂದಿಗೆ ಚೆಲ್ಲಾಟ ಆಡುತ್ತಿದ್ದಾರೆ. ಈ ಕುರಿತಂತೆ ಸಂಬಂಧಿಸಿದ ಆಡಳಿತ ವ್ಯವಸ್ಥೆ ತಕ್ಷಣ ಕಾರ್ಯತತ್ಪರವಾಗಬೇಕು. ಇಲ್ಲವಾದರೆ, ಮುಂದಿನ ದಿನಗಳಲ್ಲಿ ತೀವ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದು.

–ಕೆ.ವಿ.ಶ್ರೀಧರ್, ಸದಸ್ಯರು, ಮೈಸೂರು ಮಹಾನಗರ ಪಾಲಿಕೆ

ಕಟೌಟ್, ಫ್ಲೆಕ್ಸ್ ಬದಲು ಬಡವರಿಗೆ ಸಹಾಯ ಮಾಡಿ

ಮಾನ್ಯರೆ,

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಕನಸು ಭಾರತ ದೇಶದಲ್ಲಿ ಬಡವರೆ ಇರಬಾರದೆಂದು. ದೊಡ್ಡ ರಾಜಕಾರಣಿಗಳು ಹುಟ್ಟುಹಬ್ಬ, ಅಮೃತ ಮಹೋತ್ಸವ, ಮುಂತಾದ ದೊಡ್ಡ ದೊಡ್ಡ ಕಾರ್ಯಕ್ರಮಗಳಿಗೆ ಅನಾವಶ್ಯಕವಾಗಿ ದೊಡ್ಡ ಕಟೌಟ್, ಫ್ಲೆಕ್ಸ್ ಮುಂತಾದ ಪೋಸ್ಟರ್‌ಗಳನ್ನು ಹಾಕಿಸುವ ಬದಲು ಅದೇ ದುಡ್ಡಿಗೆ ಬಡವರಿಗೆ ಅಥವಾ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದರ ಮೂಲಕ ಹುಟ್ಟುಹಬ್ಬ, ಅಮೃತ ಮಹೋತ್ಸವವನ್ನು ಆಚರಿಸಿ ಮಹಾತ್ಮಾ ಗಾಂಧೀಜಿಯವರ ಕನಸನ್ನು ನನಸು ಮಾಡೋಣ.

–ಮಹಾಂತೇಶ್ ಬಿ, ಬಳ್ಳೂರುಹುಂಡಿ, ನಂಜನಗೂಡು ತಾ.

ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕೋತಿಗಳ ಹಾವಳಿ ತಪ್ಪಿಸಿ

ಮಾನ್ಯರೆ,



ಮೈಸೂರಿನ ಇತಿಹಾಸ ಪ್ರಸಿದ್ಧ ಚಾಮುಂಡಿ ಬೆಟ್ಟಕ್ಕೆ ದೇಶ–ವಿದೇಶ ಸೇರಿದಂತೆ ಪ್ರತಿನಿತ್ಯ ಸಾವಿರಾರು ಮಂದಿ ಭೇಟಿ ನೀಡಿ ಅಮ್ಮನವರ ದರ್ಶನ ಪಡೆಯುತ್ತಾರೆ. ಹೀಗೆ, ದರ್ಶನ ಪಡೆಯಲು ಸರತಿ ಸಾಲಿನಲ್ಲಿ ನಿಲ್ಲುವ ಭಕ್ತಾದಿಗಳಿಗೆ ನಿತ್ಯವೂ ಅಲ್ಲಿನ ಕೋತಿಗಳಿಂದ ವಿಪರಿತವಾದ ತೊಂದರೆಯಾಗುತ್ತಿದೆ. ಮೊದಲೆಲ್ಲ ಭಕ್ತಾದಿಗಳು ತರುವ ಹಣ್ಣು–ಕಾಯಿಯನ್ನು ಮಾತ್ರವೇ ಕಸಿದುಕೊಳ್ಳುತ್ತಿದ್ದ ಕೋತಿಗಳು ಈಗೀಗ ಸುಲಭವಾಗಿ ಕಸಿದುಕೊಳ್ಳಬಹುದಾದ ಕನ್ನಡಕ, ಮೊಬೈಲ್, ಇಯರ್ ಫೋನ್ ಸೇರಿದಂತೆ ಕೈಗೆ ಸಿಕ್ಕಿದ್ದನ್ನೆಲ್ಲ ಕಸಿದುಕೊಳ್ಳುತ್ತಿವೆ. ಏನಾದರು ಪ್ರತಿರೋಧ ಒಡ್ಡಿದರೆ ಪರಚುವುದು, ಕಚ್ಚುವುದು ಮಾಡುತ್ತವೆ. ಇದರಿಂದ ಹೆಂಗಸರು, ಮಕ್ಕಳು, ವಯೋವೃದ್ಧರಾದಿಯಾಗಿ ಎಲ್ಲರೂ ಭಯದಿಂದಲೇ ದರ್ಶನ ಪಡೆಯಬೇಕಾದ ಪರಿಸ್ಥಿತಿ ಬಂದೊದಗಿದೆ. ಹೀಗಾಗಿ, ಸಂಬಂಧಪಟ್ಟ ಅಧಿಕಾರಿಗಳು ಸರತಿ ಸಾಲಿನ ಕಂಬಿಗಳ ಮೇಲೆ ಮೆಸ್ ರೀತಿಯ ಚಾವಣಿ ಅಳವಡಿಸಿ, ಕೋತಿಗಳ ಹಾವಳಿ ತಪ್ಪಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು,ಮೈಸೂರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಅಫ್ಘಾನಿಸ್ಥಾನ: ಭಾರತದ ಎಚ್ಚರಿಕೆಯ ಹೆಜ್ಜೆ

ಕಳೆದ ವರ್ಷ ಆಗಸ್ಟ್ 15ರಂದು ತಾಲಿಬಾನ್ ಪಡೆಗಳು ಕಾಬೂಲ್ ಅನ್ನು ಮತ್ತೆ ವಶಪಡಿಸಿಕೊಂಡವು. ಆ ನಂತರ ಜಗತ್ತಿನ ಹೆಚ್ಚಿನೆಲ್ಲಾ ದೇಶಗಳು ಆಫ್ಘಾನಿಸ್ಥಾನದೊಂದಿಗೆ ತಮ್ಮ ರಾಜತಾಂತ್ರಿಕ ಸಂಬಂಧವನ್ನು ಕಡಿದುಕೊಂಡವು. ಭಾರತವು ತನ್ನ ಧೂತವಾಸವನ್ನು ಮುಚ್ಚಿತು. ಕಳೆದ ಒಂದು ವರ್ಷದಲ್ಲಿ ಬದಲಾದ ರಾಜಕೀಯ ಪರಿಸ್ಥಿತಿಗಳನ್ನು ಗಮನಿಸಿ ಭಾರತವು ವಿಭಿನ್ನ ರಾಜಕೀಯ ತಂತ್ರಗಾರಿಕೆಯನ್ವಯ ಕಾಬೂಲ್‌ನೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ಪುನಃ ಸ್ಥಾಪಿಸಲು ಆರಂಭಿಸಿದೆ. ಭಾರತವು ಕಾಬೂಲ್‌ನಲ್ಲಿ ಮತ್ತೆ ರಾಜತಾಂತ್ರಿಕ ಕಚೇರಿಯನ್ನು ತೆರೆದಿದೆ. ಈಗಾಗಲೇ ಹದಿನಾಲ್ಕು ದೇಶಗಳ ರಾಜತಾಂತ್ರಿಕ ಕಚೇರಿಗಳು ಕಾರ್ಯಾರಂಭಿಸಿವೆ. ಒಂದು ಅಧಿಕಾರಿಕ ಹೇಳಿಕೆಯಂತೆ ಭಾರತವು ಕಾಬೂಲ್‌ನಲ್ಲಿ ಕಾರ್ಯನಿರ್ವಹಿಸಲು ಒಂದು ತಂತ್ರಜ್ಞರ ತಂಡ ಕಳಿಸಿದೆ. ಇದಲ್ಲದೇ ದೆಹಲಿಯೂ ಮಾನವೀಯ ಸಹಾಯವನ್ನು ಆಫ್ಘಾನಿಸ್ಥಾನಕ್ಕೆ ನಿರಂತರವಾಗಿ ನೀಡುತ್ತಿದೆ.

ಭಾರತದಂತೆ ನೆರೆ ಹೊರೆಯ ಧರ್ಮವನ್ನು ಜಗತ್ತಿನ ಬೇರ್‍ಯಾವ ದೇಶಗಳು ನಿಭಾಯಿಸಿಲ್ಲ. ಕಳೆದ ವರ್ಷ ಮತಾಂಧ ತಾಲಿಬಾನ್ ಸರಕಾರ ಸ್ಥಾಪನೆಯಾಗುತ್ತಿದ್ದಂತೆ ಭಾರತವು ಪ್ರಜಾತಾಂತ್ರಿಕ ಸರಕಾರ ಸ್ಥಾಪನೆಯಾಗಬೇಕೆಂದು ತನ್ನ ರಾಯಭಾರಿ ಕಚೇರಿಯನ್ನು ಮುಚ್ಚಿತ್ತು. ಆದರೆ ಭಾರತ ಮತ್ತು ಆಫ್ಘಾನ್ ಜನರ ಹಿತವನ್ನು ಗಮನಿಸಿ ಕಾಬೂಲ್‌ನಲ್ಲಿ ತನ್ನ ಉಪಸ್ಥಿತಿ ಅನಿವಾರ್ಯ ಎಂಬ ನಿರ್ಣಯಕ್ಕೆ ಅನುಗುಣವಾಗಿ ಈ ಬೆಳವಣಿಗೆಯಾಗಿದೆ.

ಭಾರತವು ರಾಜತಾಂತ್ರಿಕ ಕಚೇರಿ ತೆರೆದಿರುವುದು ಚೀನಾಕ್ಕೆ ಸಹಿಸಲಸಾಧ್ಯವಾಗಿದೆ. ಕಳೆದ ತಿಂಗಳು ಈ ಬಗ್ಗೆ ಪಾಕ್‌ನೊಂದಿಗೆ ಸಮಾಲೋಚನೆಯನ್ನು ನಡೆಸಿದೆ. ಕಳೆದ ಕೆಲವು ವರ್ಷಗಳಿಂದ ಆಫ್ಘಾನಿಸ್ಥಾನದಲ್ಲಿ ಭಾರತದ ಉಪಸ್ಥಿತಿಯು ಚೀನಾ–ಪಾಕ್‌ಗಳಿಗೆ ಬಾರೀ ತಲೆನೋವಾಗಿ ಪರಿಣಮಿಸಿದೆ. ಹೀಗಾಗಿ ಭಾರತವನ್ನು ಆಫ್ಘಾನ್‌ನಿಂದ ದೂರ ಸರಿಸಲು ಸಕ್ರಿಯವಾಗಿವೆ. ಆದರೆ ಆಫ್ಘಾನಿಸ್ಥಾನದಲ್ಲಿ ಭಾರತವು ಮಾಡಿರುವ ಹೂಡಿಕೆಗಳು, ನೀಡಿರುವ ನೆರವುಗಳಿಂದಾಗಿ ಭಾರತದ ಬಗ್ಗೆ ತಾಲಿಬಾನ್ ಸರಕಾರ ಕೃತಜ್ಞತಾಭಾವ ಹೊಂದಿದೆ. ಅಫ್ಘಾನಿಸ್ಥಾನದ ನೂತನ ಸಂಸದ್ ಭವನವನ್ನು 220 ಮಿಲಿಯನ್ ಡಾಲರ್ ವೆಚ್ಚದಲ್ಲಿ ಭಾರತವು ನಿರ್ಮಿಸಿದೆ. ಇದುವರೆಗೆ ಮಾನವೀಯ ಸಹಾಯತೆಯನ್ವಯ ಭಾರತವು 33500 ಟನ್ ಗೋಧಿಯನ್ನು ನೀಡಿದೆ. ಅಫ್ಘಾನ್‌ನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ 750 ಮಿಲಿಯನ್ ಡಾಲರ್‌ವರೆಗೆ ಹೂಡಿಕೆಗಳನ್ನು ಮಾಡಿದೆ. ಪ್ರಸ್ತುತ ಅಫ್ಘಾನಿಸ್ಥಾನದಲ್ಲಿರುವ ಭೀಕರ ಪರಿಸ್ಥಿತಿಯು ನಿವಾರಿಸಲು ಸರ್ವರೀತಿಯ ನೆರವನ್ನು ಭಾರತ ನೀಡುತ್ತಿದೆ.

ಭಾರತವು ನೀಡಿರುವ ಸಕಾಲಿಕ ನೆರವುಗಳಿಂದ ಅಫ್ಘಾನ್‌ನಲ್ಲಿ ಮೂಡಿರುವ ಸದ್ಭಾವನೆಗಳನ್ನು ನಿಷ್ಪ್ರಭಾವಿಗೊಳಿಸಲು, ಹೆಚ್ಚುತ್ತಿರುವ ಭಾರತದ ಪ್ರಭಾವವನ್ನು ತಡೆಯಲು ಪಾಕ್–ಚೀನಾ ರಾಜತಾಂತ್ರಿಕರು ಜಿನ್‌ಪಿಂಗ್‌ರ ಕನಸಿನ ಚೀನಾ–ಪಾಕಿಸ್ಥಾನ ಇಕಾನಮಿಕ್ ಕಾರಿಡಾರ್ (ಸಿಪಿಇಸಿ) ಪರಿಯೋಜನೆಯನ್ನು ಪಾಕಿಸ್ತಾನದ ಗ್ವಾದರ್ ಬಂದರಿನಿಂದ ಅಫ್ಘಾನ್ ರಾಜಧಾನಿ ಕಾಬೂಲ್‌ವರೆಗೆ ಮುಂದುವರಿಸುವ ಪ್ರಯಾಸ ತೀವ್ರಗೊಳಿಸಿವೆ. ಈ ಯೋಜನೆ ಮೂಲಕ ಅಫ್ಘಾನ್ ರಾಜಧಾನಿಯಲ್ಲಿ ತನ್ನ ಉಪಸ್ಥಿತಿ ಹೆಚ್ಚಿಸಿ, ಭಾರತವನ್ನು ಎದುರಿಸುವ ಕುಟಿಲ ಯೋಜನೆ ರೂಪಿಸುತ್ತಿವೆ. ಅಫ್ಘನ್‌ನಲ್ಲಿರುವ ಚೀನಾದ ವಿಶೇಷ ಧೂತ ಯುಯಿ ಶ್ಯಾವೊಂಯಾಂಗ್ ಮತ್ತು ಪಾಕ್ ವಿದೇಶಾಂಗ ಸಚಿವ ಸೊಹೈಲ್ ಮಹ್ಮದ್ ಇತ್ತೀಚೆಗೆ ಇಸ್ಲಾಮಾಬಾದ್‌ನಲ್ಲಿ ಸಭೆ ನಡೆಸಿದ ನಂತರ ನೀಡಿದ ಜಂಟಿ ಹೇಳಿಕೆಯಲ್ಲಿ ಎರಡೂ ದೇಶಗಳು ಉಪಖಂಡದಲ್ಲಿ ಕ್ಷೇತ್ರಿಯ ಸಂಪರ್ಕ ಜಾಲ ಹೆಚ್ಚಿಸಲು ಸಿಪಿಇಸಿಯನ್ನು ಕಾಬೂಲ್‌ವರೆಗೆ ವಿಸ್ತರಿಸುವ ಬಗ್ಗೆ ಮಾತುಕತೆ ನಡೆದವು ಎಂದು ತಿಳಿಸಿದರು. ಇಲ್ಲಿ ಗಮನಾರ್ಹವೆಂದರೆ ಈ ವಿಚಾರದಲ್ಲಿ ಎರಡೂ ದೇಶಗಳು ಕಾಬೂಲ್‌ನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಈ ಬಗ್ಗೆ ಮಾಹಿತಿಯೂ ನೀಡಿಲ್ಲ. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ಅಫ್ಘಾನ್‌ನಲ್ಲಿ ಭಾರತದ ಉಪಸ್ಥಿತಿ ಎರಡೂ ದೇಶಗಳಿಗೆ ದುಃಸ್ವಪ್ನವಾಗಿ ಕಾಡುತ್ತಿದೆ. ಅದಕ್ಕಾಗಿ ಎರಡೂ ದೇಶಗಳು ತಾವೇ ನಿರ್ಣಯಿಸಿ ಅದನ್ನು ಅಫ್ಘಾನ್ ಮೇಲೆ ಹೇರುವ ಯತ್ನದಲ್ಲಿದ್ದಾರೆ. ಈ ರೀತಿ ಅಫ್ಘಾನ್ ವ್ಯವಹಾರದಿಂದ ಭಾರತವನ್ನು ಹೊರದೂಡಲು ಪಾಕ್–ಚೀನಾಗಳು ತಾಲಿಬಾನ್ ಸರಕಾರದ ಮೇಲೆ ಒತ್ತಡ ಹೇರುತ್ತಿವೆ. ಇದರೊಂದಿಗೆ ತಾಲಿಬಾನ್ ವಿಶ್ವಾಸ ಗಳಿಸಲು ಸೊಹೈಲ್ ಮಹಮದ್‌ರು ತಮ್ಮ ಇನ್ನೊಂದು ಹೇಳಿಕೆಯಲ್ಲಿ "ಅಫ್ಘಾನ್ ವಿದೇಶಿ ವಿನಿಮಯ ಭಂಡಾರ ಮತ್ತೆ ಪ್ರಾರಂಭಿಸಲಾಗುವುದು ಮತ್ತು ಅಲ್ಲಿನ ಬ್ಯಾಂಕ್‌ಗಳನ್ನು ಪುನರಾರಂಭಿಸುವುದಾಗಿ ತಿಳಿಸಿದರು. ಈ ರೀತಿ ಹೇಳಿಕೆಗಳ ಮೂಲಕ ತಾಲಿಬಾನ್ ಸರಕಾರದ ವಿಶ್ವಾಸ ಗಳಿಸುವ ಯತ್ನ ನಡೆಸುತ್ತಿವೆ.

ಭಾರತವು ತನ್ನದೇ ಆದ ಕಾರಣಗಳಿಗೆ ಚೀನಾದ ಸಿಪಿಇಸಿ ಯೋಜನೆಯನ್ನು ವಿರೋಧಿಸುತ್ತಿದೆ. ಮೊದಲನೆಯದಾಗಿ ಪಾಕಿಸ್ಥಾನವು ಆಕ್ರಮಿಸಿದ ಭಾರತದ ಭೂಮಿಯ ಮೇಲೆ ಚೀನಾ ಈ ಕಾರಿಡಾರ್ ನಿರ್ಮಿಸುತ್ತಿರುವುದು. ಈ ಯೋಜನೆ ಭಾರತದ ಸುರಕ್ಷತೆಗೆ ಅಪಾಯಕಾರಿ ಎಂಬುದರ ಅರಿವು ಭಾರತಕ್ಕಿದೆ. ಮೂರನೆದಾಗಿ ಸಿಪಿಇಸಿ ಪೂರ್ಣಗೊಂಡಲ್ಲಿ ಚೀನಾಕ್ಕೆ ಅಫ್ಘಾನಿಸ್ಥಾನ, ಮಧ್ಯ ಏಷ್ಯಾ, ಯುರೇಷ್ಯಾವರೆಗೆ ವರ್ಷಪೂರ್ತಿ ಸಂಪರ್ಕ ಸ್ಥಾಪಿಸಲು ಸಾಧ್ಯವಾಗುತ್ತದೆ. ಈ ಮೂಲಕ ಚೀನಾ ತನ್ನ ವಾಣಿಜ್ಯ ಮತ್ತು ಮಿಲಿಟರಿ ಉದ್ದೇಶಗಳನ್ನು ಸಾಧಿಸುವ ಮೂಲಕ ಏಷ್ಯಾದ ಬಹುದೊಡ್ಡ ಭಾಗ, ಮಧ್ಯ ಏಷ್ಯಾ, ಯುರೋಪ್‌ವರೆಗೆ ತನ್ನ ಪ್ರಭುತ್ವ ಸ್ಥಾಪಿಸಲು ಸುಲಭವಾಗುತ್ತದೆ. ಇದಕ್ಕೆ ಪೂರಕವಾಗಿ ಎಂಬಂತೆ ಚೀನಾವು ಪಾಕಿಸ್ತಾನದಲ್ಲಿ ಸೇನಾ ನೆಲೆಯನ್ನು ಸ್ಥಾಪಿಸಲು ಕಾರ್ಯನಿರತವಾಗಿದೆ. ಶ್ರೀಲಂಕಾದ ಇಂದಿನ ಸ್ಥಿತಿಗೆ ಈ ಸಿಪಿಇಸಿ ಯೋಜನೆಯು ಒಂದು ಪ್ರಮುಖ ಕಾರಣವಾಗಿದೆ. ಅಫ್ಘಾನ್‌ಗೂ ಶ್ರೀಲಂಕಾ ಪರಿಸ್ಥಿತಿ ಎದುರಾಗಬಹುದು. ಈ ಎಲ್ಲಾ ಕಾರಣಗಳಿಂದ ಭಾರತ ಸಹಿತ ಜಗತ್ತಿನ ಅನೇಕ ರಾಷ್ಟ್ರಗಳು ಚೀನಾದ ಸಿಪಿಇಸಿ ಯೋಜನೆಯನ್ನು ಶಂಕೆ, ಆತಂಕದೊಂದಿಗೆ ಗಮನಿಸುತ್ತಿದೆ.

ಅಫ್ಘಾನ್ ರಾಜಕೀಯಕ್ಕೆ ಸಂಬಂಧಿಸಿದಂತೆ ಇನ್ನೂ ಕೆಲವು ವಿಶೇಷ ತಜ್ಞರ ಅಭಿಪ್ರಾಯದಂತೆ ಅಫ್ಘಾನ್‌ನಲ್ಲಿ ಹೇರಳವಾಗಿರುವ ಕಲ್ಲಿದ್ದಲು, ಚಿನ್ನ, ಕೊಬಾಲ್ಟ್, ತಾಮ್ರ ಮೊದಲಾದ ಪ್ರಾಕೃತಿಕ ಸಂಪತ್ತನ್ನು ಚೀನಾ ದೋಚುವ ಯತ್ನದಲ್ಲಿದೆ. ಅದೇ ರೀತಿ ಲ್ಯಾಪ್‌ಟಾಪ್ ಮತ್ತು ಮೊಬೈಲ್‌ಗಳ ಬ್ಯಾಟರಿಗಳಿಗೆ ಬೇಕಾದ ಲಿಥಿಯಂ ಮತ್ತು ನಿಯೋಬಿಯಂ ನಿಕ್ಷೇಪಗಳ ಮೇಲೆ ಪ್ರಭುತ್ವ ಸ್ಥಾಪಿಸಲು ಚೀನಾ ಯತ್ನಿಸುತ್ತಿದೆ. ಚೀನಾ–ಪಾಕ್‌ಗಳ ಈ ಎಲ್ಲಾ ಉದ್ದೇಶ ಸಾಧನೆಗಳಿಗೆ ಭಾರತ–ತಾಲಿಬಾನ್ ನಡುವಿನ ಬಾಂಧವ್ಯ ಅಡ್ಡಿಯಾಗಿದೆ. ಅದಕ್ಕಾಗಿ ತಾಲಿಬಾನ್ ಆಡಳಿತವನ್ನು ಭಾರತದ ವಿರುದ್ಧ ಎತ್ತಿ ಕಟ್ಟುವ ದಿಸೆಯಲ್ಲಿ ಚೀನಾ–ಪಾಕ್ ಕ್ರಿಯಾಶೀಲವಾಗಿವೆ. ಈ ವಿದ್ಯಮಾನಗಳ ಅರಿವು ಭಾರತಕ್ಕೂ ಇದೆ.

ಚೀನಾ–ಪಾಕಿಸ್ತಾನ ಹಾಗೂ ತಾಲಿಬಾನ್ ಒಂದಾದಲ್ಲಿ ಅದರಿಂದ ಭಾರತದ ಭದ್ರತೆಗೆ ಭಾರೀ ಅಪಾಯವಿದೆ. ಚೀನಾ–ಪಾಕ್ ಕುಮ್ಮಕ್ಕಿನಿಂದ ತಾಲಿಬಾನಿಗಳು ಭಾರತದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ಆರಂಭಿಸುವ ಸಾಧ್ಯತೆಗಳು ಹೆಚ್ಚುವುದು. ಭಾರತ ವಿರೋಧಿ ಯೋಜನೆಗಳನ್ನು ತಾಲಿಬಾನ್ ಮೂಲಕ ಸಾಧಿಸುವ ಚೀನಾ–ಪಾಕಿಸ್ತಾನಿಗಳ ದುರುದ್ದೇಶಗಳನ್ನು ವಿಫಲಗೊಳಿಸಲು ಭಾರತವು ಕಾಬೂಲ್‌ನಲ್ಲಿ ತನ್ನ ರಾಜತಾಂತ್ರಿಕ ಕಚೇರಿಯನ್ನು ಪುನರಾರಂಭಿಸಿದೆ. ಇದೇ ರೀತಿ ಅನೇಕ ಸಂದರ್ಭಗಳಲ್ಲಿ ಅಂತರರಾಷ್ಟ್ರೀಯ ಸಮುದಾಯಕ್ಕೆ ನೀಡಿರುವ ವಾಗ್ದಾನಗಳನ್ನು ಯಾವುದೇ ಸಂಕೋಚ, ಹಿಂಜರಿಕೆ ಇಲ್ಲದೇ ಮುರಿದಿರುವ ತಾಲಿಬಾನ್ ವಿಶ್ವಾಸಕ್ಕೆ ಯೋಗ್ಯವಲ್ಲವೆಂದು ತಿಳಿದಿರುವ ಭಾರತವು ಅಫ್ಘಾನಿಸ್ಥಾನದಲ್ಲಿ ಎಚ್ಚರಿಕೆ, ಜಾಣ್ಮೆಯ ಹೆಜ್ಜೆ ಇಡುತ್ತಿದೆ.



> ಚೀನಾ-ಪಾಕಿಸ್ತಾನ ಹಾಗೂ ತಾಲಿಬಾನ್ ಒಂದಾದಲ್ಲಿ ಅದರಿಂದ ಭಾರತದ ಭದ್ರತೆಗೆ ಭಾರೀ ಅಪಾಯವಿದೆ. ಚೀನಾ-ಪಾಕ್ ಕುಮ್ಮಕ್ಕಿನಿಂದ ತಾಲಿಬಾನಿಗಳು ಭಾರತದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ಆರಂಭಿಸುವ ಸಾಧ್ಯತೆಗಳು ಹೆಚ್ಚುವುದು. ಭಾರತ ವಿರೋಧಿ ಯೋಜನೆಗಳನ್ನು ತಾಲಿಬಾನ್ ಮೂಲಕ ಸಾಧಿಸುವ ಚೀನಾ-ಪಾಕಿಸ್ತಾನಿಗಳ ದುರುದ್ದೇಶಗಳನ್ನು ವಿಫಲಗೊಳಿಸಲು ಭಾರತವು ಕಾಬೂಲ್‌ನಲ್ಲಿ ತನ್ನ ರಾಜತಾಂತ್ರಿಕ ಕಚೇರಿಯನ್ನು ಪುನರಾರಂಭಿಸಿದೆ. ಇದೇ ರೀತಿ ಅನೇಕ ಸಂದರ್ಭಗಳಲ್ಲಿ ಅಂತರರಾಷ್ಟ್ರೀಯ ಸಮುದಾಯಕ್ಕೆ ನೀಡಿರುವ ವಾಗ್ದಾನಗಳನ್ನು ಯಾವುದೇ ಸಂಕೋಚ, ಹಿಂಜರಿಕೆ ಇಲ್ಲದೇ ಮುರಿದಿರುವ ತಾಲಿಬಾನ್ ವಿಶ್ವಾಸಕ್ಕೆ ಯೋಗ್ಯವಲ್ಲವೆಂದು ತಿಳಿದಿರುವ ಭಾರತವು ಅಫ್ಘಾನಿಸ್ಥಾನದಲ್ಲಿ ಎಚ್ಚರಿಕೆ, ಜಾಣ್ಮೆಯ ಹೆಜ್ಜೆ ಇಡುತ್ತಿದೆ.

ಮಾನಸಗಂಗೋತ್ರಿಯಲ್ಲಿ ಶೀಘ್ರವೇ ಬೌದ್ಧ ಅಧ್ಯಯನ ಕೇಂದ್ರ ನಿರ್ಮಾಣ

● ಸಂಸದ ಶ್ರೀನಿವಾಸ ಪ್ರಸಾದ್ ವಿಶ್ವಾಸ ● ಪ್ರಧಾನಿ ನರೇಂದ್ರ ಮೋದಿ ನೆರವಿನ ವಿಶ್ವಾಸ



ಮೈಸೂರು, ಆ.12(ಜಿಎ)– ಕೇಂದ್ರ ಮತ್ತು ರಾಜ್ಯ ಸರ್ಕಾರ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಹಕಾರದೊಂದಿಗೆ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಬೌದ್ಧ ಅಧ್ಯಯನ ಕೇಂದ್ರವನ್ನು ನಿರ್ಮಿಸಲಾಗುತ್ತದೆ. ಇದಕ್ಕಾಗಿ ಈಗಾಗಲೇ ಪ್ರಧಾನ ಮಂತ್ರಿಗಳಿಗೂ ಮನವಿ ಮಾಡಿದ್ದೇನೆ ಎಂದು ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೇಳಿದರು.

ಧಮ್ಮದೀಪ ಪ್ರತಿಷ್ಠಾನ ಚಾರಿಟಬಲ್ ಟ್ರಸ್ಟ್‌ನ 7ನೇ ವರ್ಷದ ವಾರ್ಷಿಕೋತ್ಸವ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಹಯೋಗದೊಂದಿಗೆ ಮಾನಸ ಗಂಗೋತ್ರಿಯ ಗೌತಮ ಬುದ್ಧ ಉದ್ಯಾನವನದಲ್ಲಿ ಆಯೋಜಿಸಿದ್ದ ಬುದ್ಧ ಬೆಳದಿಂಗಳು ಕಾರ್ಯಕ್ರಮವನ್ನು ಬುದ್ಧನ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ, ಮಾತನಾಡುತ್ತಿದ್ದರು.

ಇತ್ತೀಚೆಗೆ ಇಡೀ ವಿಶ್ವದಲ್ಲಿ ಜನರು ಜಾತಿ, ಮತವನ್ನು ಬಿಟ್ಟು ಪ್ರತಿಯೊಬ್ಬರು ಬುದ್ಧನ ಪ್ರತಿಮೆಗಳನ್ನು ಇಟ್ಟುಕೊಳ್ಳುತ್ತಿದ್ದಾರೆ. ಜಾತಿ ಮರೆತು ಬುದ್ಧನನ್ನು ಇಷ್ಟಪಡುತ್ತಿದ್ದಾರೆ. ವಿಶ್ವಾದ್ಯಂತ ಆತನ ಚಿಂತೆಗಳನ್ನು ಕಾಣುತ್ತಿದ್ದೇವೆ ಇದು ಸಂತಸದ ವಿಚಾರವಾಗಿದೆ ಎಂದರು. ಕ್ರಿ.ಪೂ 5 ಅಥವಾ 6ನೇ ಶತಮಾನದಲ್ಲಿ ಇದ್ದ ಬುದ್ಧನ ಕಾಲವೂ ಜಾತಿ ರಹಿತವಾದ ಕಾಲವಾಗಿತ್ತು ಹಾಗೂ ಜಗತ್ತಿನ ಎಲ್ಲಾ ವಿಚಾರಗಳನ್ನು ತಿಳಿದುಕೊಂಡಿರುವವರು ಬುದ್ಧ ಮಾತ್ರ, ವಾಸ್ತವಿಕತೆ, ವೈಚಾರಿಕತೆ ಮತ್ತು ವೈಜ್ಞಾನಿಕತೆಗಳನ್ನೊಳಗೊಂಡ ಕಥೆಯಾಗಿದ್ದು, ಪ್ರಸ್ತುತ ಸೇರಿದಂತೆ ಸರ್ವಕಾಲಕ್ಕೂ ಬೇಕಿರುವ ಕಥೆಯಾಗಿದೆ. ವಿದ್ಯಾರ್ಥಿಗಳು ಈ ರೀತಿ ಚಿಂತನೆಯುಳ್ಳ ಕಾರ್ಯಕ್ರಮಗಳನ್ನು ನಡೆಸಬೇಕು. ಆದರೆ, ಎಲ್ಲದಕ್ಕೂ ರಾಜಕೀಯ ಎಂಬುದು ಇರುತ್ತದೆ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು ನಿಮ್ಮ ಸಾಂಸ್ಕೃತಿಕ, ಚಾರಿತ್ರಿಕ ಮತ್ತು ಸಾಮಾಜಿಕ ಚಿಂತನೆಗಳ ಹಿನ್ನೆಲೆ ಇಟ್ಟುಕೊಂಡು ಕಾರ್ಯಕ್ರಮವನ್ನು ರೂಪಿಸಬೇಕು. ಇದರಿಂದ ಬುದ್ಧಿ ಮತ್ತು ಆಲೋಚನಾ ಶಕ್ತಿಯನ್ನು ವಿಕಾಸನಗೊಳಿಸುತ್ತದೆ. ವಾಸ್ತವಿಕತೆ ಬಗ್ಗೆ ತಿಳಿಯುತ್ತದೆ. ಸಮಾಜದ ಮುಖ್ಯವಾಹಿನಿಗೆ ಬರಲು ಪೂರಕವಾಗಿರುತ್ತದೆ ಎಂದು ತಿಳಿಸಿದರು. ರಾಷ್ಟ್ರಪತಿಗಳ ಚುನಾವಣೆಗೆ ಮತಚಲಾಯಿಸಲು ದೆಹಲಿಗೆ ತೆರಳಿದಾಗ ಬೌದ್ಧ ಅಧ್ಯಯನ ಕೇಂದ್ರ ನಿರ್ಮಾಣದ ಬಗ್ಗೆ ಮುಖ್ಯಮಂತ್ರಿ ಬೊಮ್ಮಾಯಿ ಅವರೊಟ್ಟಿಗೆ ಚರ್ಚಿಸಿದ್ದೇನೆ. ಮೈಸೂರಿನಲ್ಲಿ ಈಗ ಅದು ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ನಡೆಯುತ್ತಿದೆ. ಅದನ್ನು ಪ್ರತ್ಯೇಕವಾಗಿ ನಿರ್ಮಾಣ ಮಾಡಲು ಮೈಸೂರು ವಿವಿ ಕುಲಪತಿಗಳು ಸ್ಥಳ ನೀಡಲಿದ್ದಾರೆ. ಈ ಸಂಬಂಧ ಪ್ರಧಾನ ಮಂತ್ರಿ ಮೋದಿ ಅವರಿಗೂ ಮನವಿಯನ್ನು ಸಲ್ಲಿಸಿದ್ದೇನೆ ನೀವು ಸಹಕಾರ ನೀಡಬೇಕು ಎಂದು ತಿಳಿಸಿದಾಗ ಅವರಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದ್ದು, ಎಲ್ಲಾ ರೀತಿಯ ನೆರವು ನೀಡುತ್ತೇನೆ ಎಂದು ತಿಳಿಸಿದ್ದಾರೆ. ಅಷ್ಟೆ ಅಲ್ಲದೇ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್‌ಜೀ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಪ್ರಧಾನ ಮಂತ್ರಿಗೆ ನೀಡಿರುವ ಮನವಿಯ ಒಂದು ಕಾಪಿಯನ್ನು ಅವರಿಗೂ ತಲುಪಿಸಿದ್ದು, ನೀವು ಕೇಂದ್ರ ಮೇಲೆ ಒತ್ತಡ ಹೇರಿ ಬೌದ್ಧ ಅಧ್ಯಯನ ಕೇಂದ್ರದ ನಿರ್ಮಾಣಕ್ಕೆ 10 ಕೋಟಿ ರೂ ಬಿಡುಗಡೆ ಮಾಡಿಸುವಂತೆ ತಿಳಿಸಿದ್ದೇನೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಸಕ ಎನ್. ಮಹೇಶ್, ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್ ಕುಮಾರ್, ಕೊಳ್ಳೆಗಾಲ ಜೇತವನದ ಭಂತೆ ಮನೋರಕ್ಖಿತ, ಬೆಂಗಳೂರಿನ ಅಕ್ಕ ಐಎಎಸ್ ಅಕಾಡೆಮಿ ನಿರ್ದೇಶಕ ಡಾ. ಶಿವಕುಮಾರ್, ಧಮ್ಮದೀಪ ಪ್ರತಿಷ್ಠಾನ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಡಾ.ಚಿಂ.ಬ. ಬಸವರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಕರಕುಶಲ, ಕೈಮಗ್ಗ ವಸ್ತು ಪ್ರದರ್ಶನ



ಮೈಸೂರು, ಆ.12(ಜಿಎ)– ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸಹಯೋಗದಲ್ಲಿ ನಗರದ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಆಯೋಜಿಸಿರುವ ಜಿಲ್ಲಾ ಮಟ್ಟದ ಕೈಗಾರಿಗಳ ಕರಕುಶಲ ಮತ್ತು ಕೈಮಗ್ಗ ವಸ್ತು ಪ್ರದರ್ಶನ ಮಾರಾಟದ 'ಕಲಾವೈಭವ'ಕ್ಕೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಮುಖ್ಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಬೆಟಸೂರ್ ಮಠ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಈ ಬಾರಿ ಅಜಾದಿ ಕಾ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಎಲ್ಲಾ ಕಡೆ ಜನರು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಅವರಿಗೆ ಕರಕುಶಲ ಮತ್ತು ಕೈಮಗ್ಗ ವಸ್ತು ಪ್ರದರ್ಶನ ಮಾರಾಟದ 'ಕಲಾವೈಭವ'ವು ವಿಶೇಷವಾಗಿದ್ದು, ಇಂದಿನಿಂದ ಆ.21ರವರೆಗೆ ಹತ್ತು ದಿನಗಳ ಕಾಲ ಮೇಳವನ್ನು ಆಯೋಜಿಸಲಾಗಿದೆ. ಎಲ್ಲಾ ವಸ್ತುಗಳು ಕೈಗೆಟುಕುವ ದರದಲ್ಲಿದ್ದು, ಪ್ರತಿಯೊಬ್ಬರು ಇದನ್ನು ಸದುಪಯೋಗಪಡಿಸಿಕೊಳ್ಳಿ 70ಕ್ಕೂ ಹೆಚ್ಚು ಮಳಿಗೆಗಳಿದ್ದು, ಈಗಾಗಲೇ 60 ಮಂದಿ ನೋದಣಿ ಮಾಡಿಕೊಂಡಿದ್ದಾರೆ. ಎಂದರು.

'ಕಲಾವೈಭವ'ದ ವಿಶೇಷಗಳು: ಮೇಳದಲ್ಲಿ ದೇಶದ ಗ್ರಾಮೀಣ ಕರಕುಶಲ, ಕೈಮಗ್ಗ ಉತ್ಪನ್ನಗಳು ಒಂದೇ ಸೂರಿನಡಿ ದೊರೆಯುವ ಅವಕಾಶ ಕಲ್ಪಿಸಿದ್ದು, ಸ್ವಸಹಾಯ ಗುಂಪುಗಳು, ಸ್ತ್ರೀಶಕ್ತಿ ಸಂಘಗಳು, ಖಾದಿ ಗ್ರಾಮೋದ್ಯೋಗಗಳು, ಸ್ವಯಂ ಉದ್ಯೋಗಿಗಳು ಪಾಲ್ಗೊಂಡು ಉತ್ಪನ್ನಗಳನ್ನು ಪ್ರದರ್ಶಿಸಿ, ಮಾರಾಟ ಮಾಡುತ್ತಿದ್ದಾರೆ. ಮೇಳದಲ್ಲಿ ಕರಕುಶಲ ಕರ್ಮಿಗಳು ಸಿದ್ಧಪಡಿಸಿರುವ ಉಡುಪುಗಳು, ಕೈಮಗ್ಗ ವಸ್ತ್ರಗಳು, ಕೈಮಗ್ಗದ ರೇಷ್ಮೆ ಮತ್ತು ಕಾಟನ್ ಸೀರೆಗಳು, ಆಟಿಕೆ, ಬೊಂಬೆಗಳು, ಜರಿ ಕಸೂತಿಗಳು, ಗೃಹ ಬಳಕೆ ವಸ್ತುಗಳು, ಗಿಡಮೂಲಿಕೆ ರುದ್ರಾಕ್ಷಿ ಮಣಿಗಳು, ಬುಡಕಟ್ಟು ಜನಾಂಗದ ಆಭರಣ, ಬಿದ್ರಿ, ಕುಂದಣ ಕಲೆ, ಕಂಚಿನ ವಿಗ್ರಹ, ಮೇಲು ಹಾಸುಗಳು, ಹೊದಿಕೆಗಳು, ಚನ್ನಪಟ್ಟಣದ ಬೊಂಬೆಗಳು,ಮಣ್ಣಿನಿಂದ ತಯಾರಿಸಿದ ಹೂಜಿಗಳು ಇತ್ಯಾದಿ ಕೈಗೆಟುಕುವ ಬೆಲೆಯಲ್ಲಿ ಲಭ್ಯವಿದೆ. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠ ಶಾಲಾ ಶಿಕ್ಷಣ ವಿಭಾಗದ ಬಿ.ಎ.ರಾಜಶೇಖರ್, ತಾಂತ್ರಿಕ ವಿಭಾಗದ ಜಂಟಿ ನಿರ್ದೇಶಕ ಡಾ.ಎಚ್.ಆರ್. ಮಹದೇವಸ್ವಾಮಿ, ಕೇಂದ್ರ ಕರಕುಶಲ ಸೇವಾ ಸಹಾಯಕ ನಿರ್ದೇಶಕ ಕೆ.ಎಸ್. ಸುನೀಲ್‌ಕುಮಾರ್ ಮತ್ತು ಯೋಜನಾಧಿಕಾರಿ ಶಿವನಂಜಸ್ವಾಮಿ ಉಸಪಸ್ಥಿತರಿದ್ದರು.

ಇಂದು ಡಾಕ್ಟರ್ಸ್ ಕಪ್ ಗಾಲ್ಫ್ ಪಂದ್ಯಾವಳಿಗೆ ಚಾಲನೆ

ಮೈಸೂರು, ಆ.12–ಜೆಡಬ್ಲ್ಯೂಜಿಸಿ ವೈದ್ಯರ ಸಂಘದ 25ನೇ ಬೆಳ್ಳಿ ಮಹೋತ್ಸವ ಅಂಗವಾಗಿ ಡಾಕ್ಟರ್ಸ್ ಕಪ್ ಗಾಲ್ಫ್ ಪಂದ್ಯಾವಳಿ–2022ರ ಆ.13ರಂದು ಬೆಳಗ್ಗೆ 7.30 ಗಂಟೆಗೆ ಜಯಚಾಮರಾಜ ಒಡೆಯರ್ ಗಾಲ್ಫ್ ಕೋರ್ಸ್ ಆವರಣದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಅಧ್ಯಕ್ಷ ಅರುಣ್‌ಕುಮಾರ್, ಬಿ.ಎಂ.ನಾಗೇಶ್, ಗೌರವ ಕಾರ್ಯದರ್ಶಿ ಕೀರ್ತಿ ಕುಮಾರ್ ಹಾಗೂ ವೈದ್ಯರ ಗಾಲ್ಫ್ ಅಸೋಸಿಯೇಷನ್‌ನ ಡಾ.ಟಿ.ವಿ.ರಮೇಶ್, ಅಬ್ರಹಾಂ ಥಾಮಸ್, ಡಾ.ಎಸ್.ಎಲ್. ನಾರಾಯಣ, ಡಾ.ಪಿ.ಎ.ಕುಶಾಲಪ್ಪ, ಡಾ.ಎಂ.ಎಸ್.ರಂಗನಾಥ್ ಉಪಸ್ಥಿತರಿರುತ್ತಾರೆ. ಅಲ್ಲದೆ, ಆ.14ರಂದು ಸಂಜೆ 7.30ಕ್ಕೆ ಸಮಾರೋಪ ಸಮಾರಂಭ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ ಎಂದು ಕಾರ್ಯದರ್ಶಿ ಮೋಹನ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಗೌರಿ ಗಣೇಶ ಹಬ್ಬಕ್ಕೆ ಆರ್ಕೆಸ್ಟ್ರಾ ಕಾರ್ಯಕ್ರಮಕ್ಕೆ ಸಂಪರ್ಕಿಸಿ



PRK
ಮ್ಯೂಸಿಕ್ ಆರ್ಕೆಸ್ಟ್ರಾ, ಮೈಸೂರು
9902639553

ಬೇಕಾಗಿದ್ದಾರೆ

ಮನೆ ಕೆಲಸಕ್ಕೆ, ನಮ್ಮಲ್ಲೇ ಉಳಿದುಕೊಂಡು ಅಡುಗೆ ಮತ್ತು ಮನೆ ಕೆಲಸ ಮಾಡಲು ಮಹಿಳೆ (20–30 ವಯಸ್ಸು) ಬೇಕಾಗಿದ್ದಾರೆ. ಸ್ಥಳ: ಬನ್ನಿಮಂಟಪ
9036951272

FOR RENT

Shed of 3500 Sq.ft. in Yadavagiri Industrial area available for Rent, Prime location suitable for Warehouse, Office Space. Contact:
9148702978
Brokers Excuse

ಮನೆಗಳು ಮಾರಾಟಕ್ಕಿದೆ

ಅಳತೆ 11x40 ರಲ್ಲಿ ಹೆಂಚಿನ, ಶೀಟಿನಾ ಮತ್ತು ಆರ್.ಸಿ.ಸಿ., ಕೆಳಅಂತಸ್ತು ಮತ್ತು ಎರಡನೇಯ ಅಂತಸ್ತು, 21 ಲಕ್ಷದಿಂದ 36 ಲಕ್ಷದವರೆಗೆ 4 ಮನೆಗಳು ಬನ್ನಿಮಂಟಪದಲ್ಲಿ ಮತ್ತು ಹೆಬ್ಬಾಳು, ಸುಬ್ರಮಣ್ಯನಗರದಲ್ಲಿ ಕಟ್ಟಿರುವ ಪಶ್ಚಿಮ ದಿಕ್ಕು ಪಾರ್ಕಿನ ಎದುರುಗಡೆ 2 ಅಂತಸ್ತು ಇರುವ ಮನೆ, 35 ಲಕ್ಷಕ್ಕೆ ಮಾರಾಟಕ್ಕಿದೆ. ಸಂಪರ್ಕಿಸಿ: **ಶಿವಪ್ಪ:**
9141050266

ಪ್ರಸಿದ್ಧಿ ಹೊಂದುತ್ತಿರುವ ಕಾಫಿಪುಡಿ ಅಂಗಡಿ ಮಾರಾಟಕ್ಕಿದೆ

ನಮ್ಮದೇ ಶೈಲಿಯ ಕಾಫಿಪುಡಿ ಕಲಿಸಿಕೊಡಲಾಗುವುದು
ಸಂಪರ್ಕಿಸಿ:
8123094598

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳು, ಮಂಚೇಗೌಡನ ಕೊಪ್ಪಲು ಸರ್ಕಲ್ ಬಳಿಯ ಮೆಡಿಕಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
9845761114

ಮನೆ ಭೋಗ್ಯಕ್ಕೆ ಇದೆ

2BHK, Ground Floor & 2nd Floor Solar available
#83, 3ನೇ ಕ್ರಾಸ್, 2ನೇ ಹಂತ, ಅಶೋಕಪುರಂ, ರೈಲ್ವೆಸ್ಟೇಷನ್ ಎದುರು ಅರವಿಂದನಗರ, ಮೈಸೂರು.
9663301824
8618363592

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ.
ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1. ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.
2. ಶಿಷ್ಕರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು.

SITE FOR SALE

60x40 Feet, East facing site at beautiful Layout Ahad City 6 km from Ring Road towards Mahadevapura Road.
Rs. 1500-00 per SFT. Contact:
9901231117

WANTED

Marketing Executive Male / Female
PRAKRUTHI ENTERPRISES
No.08, KBL Enclave, Vijayanagara 4th Stage, 2nd Phase, Opp Raju Corner Road, Mysore-570032
9535481753 / 9611201216

CHANGE OF NAME

I, Pallavi Paremajlu Uthaiah residing at No. 41, 9th Cross, Shivaji Road, N.R.Mohalla, Mysore-570007 have changed my name from Pallavi Haraga Shailendra to Pallavi Paremajlu Uthaiah vide affidavit sworn before Notary C.R. Seetharam, Mysore dated: 10-08-2022.
Sd/- Pallavi Paremajlu Uthaiah

ಮನೆ /ಸೈಟು ಮಾರಾಟಕ್ಕಿದೆ

2 ಅಂತಸ್ತು ಮನೆ
ಶ್ರೀರಂಗಪಟ್ಟಣ ಟೌನ್
60x40 Site
ಹಳೇ ಬಸ್‌ಸ್ಟಾಂಡ್ ಹತ್ತಿರ, ಗುಂಡ್ಲುಪೇಟೆ ಟೌನ್
8660441917

ಶೀಘ್ರ ಮ್ಯಾರೇಜ್

ಒಕ್ಕಲಿಗರು, ಲಿಂಗಾಯಿತರು, ಕುರುಬರು ಹಾಗೂ ಎಲ್ಲಾ ಜಾತಿಯ ವಧು ವರರು ಮತ್ತು ವಿಧವೆ, ವಿಧುರರು. ಸಂಪರ್ಕಿಸಿ:
SRM Associate
9740661107

ಕಾಯರ್ ಎಂಪೋರಿಯಂ

ಕರ್ನಾಟಕ ಸರ್ಕಾರದ ಉದ್ದಿಮೆಯಾದ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿ, ಶಾಖೆಯಾದ ಕಾಯರ್ ಎಂಪೋರಿಯಂ ಮಾರಾಟ ಮಳಿಗೆ ನಂ.15, ವಿ.ವಿ.ಕಟ್ಟಡ ಹಿಂಭಾಗ, ಕೆ.ಆರ್.ವೃತ್ತ, ಮೈಸೂರು–570001. ಇಲ್ಲಿ ಶೇಕಡ 20% ರಿಯಾಯಿತಿಯಲ್ಲಿ ತೆಂಗಿನ ನಾರಿನ ಉತ್ಪನ್ನಗಳಾದ ಕಾಯರ್ ಮ್ಯಾಟ್ಸ್, ಮ್ಯಾಟಿಂಗ್ಸ್, ರಬ್ಬರ್ ಮಿಶ್ರಿತ ತೆಂಗಿನ ನಾರಿನ ಮ್ಯಾಟ್ರಸ್, ಪಿಲ್ಲೋಸ್, ಕುಶನ್ಸ್, ತೆಂಗಿನ ಕಡ್ಡಿಪೊರಕೆ ಮತ್ತು ಇತರೆ ಉತ್ಪನ್ನಗಳು ದೊರೆಯುತ್ತದೆ. ಇಂದೆ ಒಮ್ಮೆ ಭೇಟಿ ಕೊಡಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ದೂರವಾಣಿ ಸಂಖ್ಯೆ: 0821-2425271
ಸಂಚಾರಿ ದೂರವಾಣಿ ಸಂಖ್ಯೆ: 8618818259

FOR SALE / ಮಾರಾಟಕ್ಕಿದೆ

1083 Sqft 'L' Shape
ಕಮರ್ಷಿಯಲ್ ಬಿಲ್ಡಿಂಗ್ ಮಾರಾಟಕ್ಕಿದೆ.
Address : No. 348 ಶ್ರೀ ಚಾಮುಂಡಿ ಕ್ರಿಯೇಷನ್ಸ್ CPC ಪಾಲಿಟೆಕ್ನಿಕ್ ಹತ್ತಿರ, ಅಶೋಕ ಮುಖ್ಯ ರಸ್ತೆ, ಮೈಸೂರು–570001.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
8123460033 / 9980050628

K.H.B Site for Sale

30x40 Near Citizen School, Nanjanagud,
Rate: 2600/Sqft
9448322796

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

S M GOLD COMPANY

ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5600
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು, ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

ಬೇಕಾಗಿದ್ದಾರೆ

ಮೈಸೂರಿನ ಸಸ್ಯಹಾರಿ ಹೋಟೆಲಿಗೆ ಒಬ್ಬ ಬಿಲ್ ರೈಟರ್ ಹಾಗೂ ಸೂಪರ್ ವೈಸರ್ ಬೇಕಾಗಿದ್ದಾರೆ. ಹಾಗೂ ಪಾರ್ಟ್‌ಟೈಮ್ ಚೈನೀಸ್ ಅಡುಗೆಯವರು ಬೇಕಾಗಿದ್ದಾರೆ.
9916206561
9448279667

SITE FOR SALE

30x50
East Face @ KRS Nisarga Badavane, Yelwala, Mysore.
Contact:
9449019958

ಬೇಕಾಗಿದ್ದಾರೆ

ಮಾನಂದವಾಡಿ ರಸ್ತೆಯಲ್ಲಿರುವ ರೈಲ್ವೆ ವರ್ಕ್‌ಶಾಪ್ ಹತ್ತಿರ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
9880058866

ಮಾರಾಟಕ್ಕಿದೆ

40 ಗುಂಟೆ ಎಲಿನೇಟೇಡ್‌ಗೊಂಡಿರುವ ಭೂಮಿ ಮೈಸೂರು – ಜಯಪುರ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಮಾರಾಟಕ್ಕಿದೆ. ನಿವೇಶನ / ವಾಣಿಜ್ಯಕ್ಕೆ ಯೋಗ್ಯವಾಗಿದೆ.
7795862235

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ತಕ್ಷಣ ಬೇಕಾಗಿದ್ದಾರೆ

ಆಫೀಸ್ ಕೆಲಸಕ್ಕಾಗಿ ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ
ಭೂಮಿಪುತ್ರ ರೈತಮಿತ್ರ
98453 95000 | 98451 66055
#669, ಎಸ್‌ಜೆಸಿಇ ರಸ್ತೆ, ನಿಗಂತ ವೃತ್ತ ಹತ್ತಿರ, ಟಿ ಕೆ ಬಡಾವಣೆ, ಮೈಸೂರು

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ.
ಆಸಕ್ತರು ಸಂಪರ್ಕಿಸಿ:
7676844160
6361056646

Solarizer



HYGIENIC HOT WATER EVERY DAY!
Solar Water Heater SALES & SERVICE
Bajaj Finserv Available
SUNZONE SOLAR SYSTEM
VM Double Road, Kuvempunagar, Mysuru
9845175443

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ

ಮನೆಯಲ್ಲೇ ಇದ್ದು ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಹುಡುಗರು, ಹುಡುಗಿಯರು ಮತ್ತು ಅಡುಗೆ ಮಾಡುವವರು ಬೇಕಾಗಿದ್ದಾರೆ. ಲಕ್ಷ್ಮಿ
8123630683
ಸಂಬಳ: 20,000/-

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಹೆಸರಾಂತ ಸಸ್ಯಹಾರಿ ಹೋಟೆಲ್ ಒಂದಕ್ಕೆ ಅನುಭವವುಳ್ಳ
* ಸೌತ್ ಇಂಡಿಯನ್ ಭಟ್ಟರು – 18000/–
* ದೋಸೆ ಭಟ್ಟರು – 2 – 16000 –18000/–
* ರುಬ್ಬುವವರು – 1 – 14,000/–
* ಕೌಂಟರ್ ಬಾಯ್ – 2 – 10,000/–
* ಆಲ್‌ರೌಂಡರ್ – 2 – 16,000/–

9945059645

ಬರವಣಿಗೆ ಕೆಲಸ

ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ

ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್

ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ನಿರ್ಮಲ ಸರ್ವೀಸ್

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

DOCUMENT LOST

I, Akram Pasha, residing at LIG 251, KHB Colony, Azeez Sait Nagar, Kalyangiri, Mysuru-570 019, have lost my sale deed.
Finders please contact:
Mob: 9448753807

ಬೇಕಾಗಿದ್ದಾರೆ

ನಾನ್ ವೆಜ್ ಹೋಟೆಲ್ ಕೆಲಸಕ್ಕೆ ಸಪ್ಲೇಯರ್ಸ್ ಬೇಕಾಗಿದ್ದಾರೆ.
ಆಸಕ್ತಿ ಉಳ್ಳವರು ಮಾತ್ರ ಸಂಪರ್ಕಿಸಿ.
ಸ್ಥಳ: ದೇವೇಗೌಡ ಸರ್ಕಲ್ ಮೈಸೂರು.
8197459398

ಬೇಕಾಗಿದ್ದಾರೆ

Sri Sapthagiri Builders & Developers
1) Marketing Executive -2 Post
2) Receptionist - 1 Post
3) Telecaller - 3 Post

8197395284 / 9731667555
9591828444

ಆರೋಗ್ಯ ವಿಮೆ Health Insurance

ಜೀವನದಲ್ಲಿ ಅನಾರೋಗ್ಯಕ್ಕೆ ತುತ್ತಾಗುವುದು ಸ್ವಾಭಾವಿಕ, ಆಸ್ಪತ್ರೆ ಸೇರಿದ ನಂತರ ಲಕ್ಷಾಂತರ ರೂಪಾಯಿಗಳನ್ನು ಭರಿಸುವುದು ಬಹಳ ಕಷ್ಟಕರ, ಇಂತಹ ಆಕಸ್ಮಿಕ ಪರಿಸ್ಥಿತಿಗಳನ್ನು ನಿಭಾಯಿಸಲು ಇಂದಿನ ನವೀನ ಸಮಾಜದಲ್ಲಿ ಆರೋಗ್ಯ ವಿಮೆಯನ್ನು ಪಡೆಯುವುದು ಬಹುಮುಖ್ಯವಲ್ಲವೇ?. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
8310336144 / 7996504996
0821-2362442
IRDAI ಲೈಸೆನ್ಸ್ ಪಡೆದಿದೆ

SITE FOR SALE

ಹುಣಸೂರು ಹೈವೇ ರೋಡ್ ಕಾರ್ನರ್ ನಾಗವಾಲ ಸ್ಯಾನ್ ಸಿಟಿ. ಹೋಮ್ಸ್ (Opposite).
19602 Sq.ft., DC ಕನ್‌ವರ್ಷನ್ ಪಂಚಾಯಿತ್ A ಖಾತಾ ಆಗಿದೆ
9880284032

ಸೈಟ್ ಮಾರಾಟಕ್ಕಿದೆ

30x40
ಜ್ಞಾನಭಾರತಿ ಲೇಔಟ್ 2ನೇ ಹಂತ, ದಡದಹಳ್ಳಿ, ಈಸ್ಟ್ ಫೇಸಿಂಗ್, ಮುಡಾ ಖಾತೆ ಆಗಿದೆ. **ಬೆಲೆ ರೂ.21 ಲಕ್ಷ**
9342123373

ಪ್ರಮಾಣ ಪತ್ರ

ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಸೋಸಲೆ ಹೋಬಳಿ ಕೋಣಗಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ನಟರಾಜುರವರ ಮಗ ನಾಗರಾಜಮೂರ್ತಿ ಆದ ನಾನು ಪ್ರಮಾಣಮಾಡಿ ಹೇಳುವುದೇನೆಂದರೆ, ಮೇಲ್ಕಂಡ ವಿಳಾಸದಲ್ಲಿ ಖಾಯಂ ನಿವಾಸಿಯಾಗಿದ್ದು, ನನ್ನ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಹಾಗೂ ಇತರೆ ದಾಖಲಾತಿಗಳಲ್ಲಿ ನನ್ನ ಹೆಸರು ನಾಗರಾಜಮೂರ್ತಿ ಎಂದು ನಮೂದಾಗಿರುತ್ತದೆ. ಆದರೆ ಕರ್ನಾಟಕ ಗೃಹ ಮಂಡಳಿಯಲ್ಲಿ ನಾಗರಾಜ ಎಂದು ನಮೂದಾಗಿರುತ್ತದೆ. ಆದ್ದರಿಂದ ನಾಗರಾಜಮೂರ್ತಿ ಮತ್ತು ನಾಗರಾಜ ಎಂಬ ಎರಡು ಹೆಸರುಗಳು ನನ್ನ ಹೆಸರುಗಳಾಗಿರುತ್ತದೆ ಎಂದು ನೋಟರಿ ಜಯಶ್ರೀ ಸಿ.ಜಿ. ರವರ ಮುಂದೆ ಪ್ರಮಾಣೀಕರಿಸಿರುತ್ತೇನೆ.
ಸಹಿ/– ನಾಗರಾಜಮೂರ್ತಿ

WANTED

WE Electrical Job Requirement
1) ITI Holders Pass / Fail
2) Any Degree Pass / Fail
3) GTTC Press tool makers and Tool Makers

7676928664 / 6360511417
9741915056

ತಕ್ಷಣ ಬೇಕಾಗಿದ್ದಾರೆ

ಮನೆ ಕೆಲಸಕ್ಕೆ ಲೇಡಿಸ್ ಬೇಕಾಗಿದ್ದಾರೆ. ಪಂಚಮುಖಿ ಗಣಪತಿ ದೇವಸ್ಥಾನದ ಹತ್ತಿರ, ಅಕ್ಬರ್ ರೋಡ್, ಮಂಡಿ ಮೊಹಲ್ಲಾ, ಮೈಸೂರು.
9036890169
9380791511

ಬೇಕಾಗಿದ್ದಾರೆ

ಸಸ್ಯಹಾರಿ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
ಗಂಗೋತ್ರಿ ಲೇಔಟ್, ಮೈಸೂರು
9945040509

30x50 ಸೈಟು @ Rs.22.50 ಲಕ್ಷ

ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ತಕ್ಷಣ ಮನೆ ಕಟ್ಟಬಹುದು, ಮೈದನಹಳ್ಳಿ ಪಕ್ಕ, ಇಲವಾಲ ಹತ್ತಿರ, ಹುಣಸೂರು ರೋಡ್, ಮೈಸೂರು
9538583377

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ

ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರಿ ನಾಲ್ವರ ದೈವ ಚೌಡಪ್ಪ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸು ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

WANTED

Teachers and House Keeping for Montessori School in Bogadi, Mysore
9113257683

ಬೇಕಾಗಿದ್ದಾರೆ

ಟೈಲರ್ಸ್‌ಗಳು ಮತ್ತು ಹೆಲ್ಪರ್‌ಗಳು ಬನ್ನಿಮಂಟಪ ಸಮೀಪದಲ್ಲಿ ಇರುವವರು ಬೇಕಾಗಿದ್ದಾರೆ.
ಸಮಯ: 9.00am to 6.00pm
0821-2491755

SITES FOR SALE

20x30 - 12.60 Lakhs
30x40 - 25.20 Lakhs
Bank Loan upto 75%, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

ಬೇಕಾಗಿದ್ದಾರೆ

ಪ್ರಸಿದ್ಧ ಕಂಪ್ಯೂಟರ್ ಕಂಪನಿಗೆ ಡೆಲಿವರಿ ಮಾಡಲು ಪಿಯುಸಿ ಅಥವಾ ಎಸ್.ಎಸ್.ಎಲ್.ಸಿ ಮಾಡಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಕಡ್ಡಾಯ. ಸಂಪರ್ಕಿಸಿ
8073393505

PART TIME WORK

ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9108418233
9743217566

ಹೆಸರು ಬದಲಾವಣೆ

ಎಲಿಜಬತ್ ಆದ ನಾನು ನಂ. 4705, 2ನೇ ಕ್ರಾಸ್, ಶಿವಾಜಿ ರಸ್ತೆ, ಎನ್.ಆರ್.ಮೊಹಲ್ಲಾ, ಮೈಸೂರು ಇಲ್ಲಿ ವಾಸವಿದ್ದು, ನನ್ನ ಹೆಸರನ್ನು ಎಲಿಜಬತ್ ನಿಂದ ಕವಿತಾ ಎಂಬುದಾಗಿ ನೋಟರಿ ಮಹೇಶ್ ಪ್ರಸಾದ್.ಡಿ ಇವರ ಮುಂದೆ ಬದಲಾಯಿಸಿಕೊಂಡಿರುತ್ತೇನೆ.
ಸಹಿ/– ಕವಿತಾ

WANTED

for Reputed Hospital in Mysore City
1. Pharmacy Assistants- M/F (With / Without Experience)
2. X-Ray-Cum-C Arm Technicians - M/F (with Experience)
3. Driver (With LMV Driving License / Badge).

Contact: Mr. Sridharamurthy.
9964160480 / 8951128799

ಬಾಡಿಗೆಗೆ / ಭೋಗ್ಯಕ್ಕೆ ದೊರೆಯುತ್ತದೆ

Single Shop
11x15, 1st Floor, } Double
22x22, 1st Floor } Shop.
Opp ಟೆರಿಷಿಯನ್ ಕಾಲೇಜು, ಮೈಸೂರು. **ಆರ್. ಪದ್ಮನಾಭ**
9901676375

ಸೈಟುಗಳು ಮಾರಾಟಕ್ಕಿವೆ

ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

ತಕ್ಷಣ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ

ನಾರ್ತ್ ಇಂಡಿಯನ್, ರೋಟಿ ಮಾಡುವವರು, ಚೈನಿಸ್ ಚಾಟ್ಸ್, ಕ್ಲೀನಿಂಗ್ ಮಾಡುವವರು ಬೇಕಾಗಿದ್ದಾರೆ.
8088337564

FOR SALE

Company Having MNC Supplier with Reputation Image and Good Turnover yearly
7022490440

ಬೇಕಾಗಿದ್ದಾರೆ

ರೋಗಿಗಳನ್ನು / ವಯಸ್ಸಾದ ವೃದ್ಧರನ್ನು ಆರೈಕೆ ಮಾಡಲು 18 ವರ್ಷ ಮೇಲ್ಪಟ್ಟ ಮಹಿಳೆಯರು, ಪುರುಷರು, ಯುವಕರು, ಯುವತಿಯರು (ಹೋಂ) ಕೇರ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ ಆಕರ್ಷಕ ಸಂಬಳ ಇರುತ್ತದೆ. (ತಕ್ಷಣ ಸಂಪರ್ಕಿಸಿ) (ಸರ್ಕಾರಿ ನೋಂದಾಯಿತ ಸಂಸ್ಥೆ)
9035113222 / 9739292222

HOUSE FOR SALE

20x30, MUDA, 3BHK New Duplex, North facing at Dattagalli, Somnathnagar,(40 feet Road) Rs. 75 Lakhs
40x60, MUDA, 4BHK New Duplex, East Facing at Vijayanagar 4th Stage, 2.65 CR
Brokers Excuse
8660105902

FOR RENT

Office Space Available 1st Floor,
10 sft x 15 sft,
13 sft x 17 sft,
13 sft x 20 sft,
Near Kuvempunagara, Depot. Circle.
9481582709

ನಿವೇಶನ ಮಾರಾಟಕ್ಕಿದೆ

1584 Sq.ft ಅಡಿ ಖಾಲಿ ಸೆಮಿ ಕಮರ್ಷಿಯಲ್ ಕಾರ್ನರ್ ನಿವೇಶನ ಮಾರಾಟಕ್ಕೆ ಇದೆ. ವಿಜಯನಗರ 4ನೇ ಹಂತ, ರಿಂಗ್‌ರೋಡ್ ಹತ್ತಿರ. ಆಸಕ್ತರು ಸಂಪರ್ಕಿಸಿ.
ಕ್ಷಮಿಸಿ: ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
8310151875

HOUSE FOR RENT

2BHK Near Andolana Circle, Ramakrishnanagar, 'I' Block. Contact:
9845861876
8147837346

ಮನೆ ಮಾರಾಟಕ್ಕಿದೆ

35x45 ಅಳತೆ ಹೊಸ ಕಟ್ಟಡ ನಾಲ್ಕು ಅಂತಸ್ತಿನ ಕಾರ್ನರ್ ಮನೆ ನಾಲಾ ಬೀದಿ 2ನೇ ಕ್ರಾಸ್, ಚಾಮರಾಜ ಡಬ್ಬಲ್ ರಸ್ತೆ ಹತ್ತಿರ ಮೈಸೂರು. ಒಂದು ಲಕ್ಷದವರಿಗೆ ಬಾಡಿಗೆ ಬರುತ್ತದೆ. ಬ್ಯಾಂಕಿನ ಸಾಲದ ಸೌಲಭ್ಯವಿದೆ. ಬೆಲೆ 3.5 Cr. ಏಜೆಂಟ್ ಕ್ಷಮಿಸಿ.
8861133817
8792274425

ಬೇಕಾಗಿದ್ದಾರೆ

ಫ್ಯಾನ್ಸಿ ಗಿಫ್ಟ್ ಶಾಪ್‌ಗೆ ಸೇಲ್ಸ್ ಕೆಲಸಕ್ಕೆ ಹುಡುಗರು ಅಥವಾ ಹುಡುಗಿಯರು ತಕ್ಷಣ ಬೇಕಾಗಿದ್ದಾರೆ. ವಯೋಮಿತಿ 25 ವರ್ಷಕ್ಕಿಂತ ಕೆಳಗೆ. ಮೆಗಾಶಾಪ್ ದೇವೇಗೌಡ ಸರ್ಕಲ್ ಮೈಸೂರು
7619270650

ಆದಿಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ

BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed
ವಿವಾಹ ನೋಂದಣಿಗೆ ಕರೆ ಮಾಡಿ
(2nd Marriage Also)
9164743059

HOUSE FOR SALE

40x30, W/S Corner
GF 2BHK, FF 3 BHK, SF Two Houses with 2 BHK, with 52 k Rent income at Agrahara, Mysuru, Corporation Limits, Near JSS Medical College, Price - Rs. 1.68 Cr
(Brokers Excuse)
8660105902

FOR SALE

A)30x40 12 Lakhs 30x50 15 L sites available attch Brahmins E blk layout
B) 0.28land in Varkodu Narasipura Road
C) 30x40 Devanoor 3rd stage
D)12x36 House Near Vijaya Bank Circle Kuvempu Nagar
PRAKRUTHI PROPERTIES
90359 90359 / 95386 90359

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮೈಸೂರು ಸಿಟಿ ಸುತ್ತಮುತ್ತಲಿರುವ ವ್ಯಕ್ತಿಗಳು ಸಂಪರ್ಕಿಸಿ:
9886745981
9886745981

HOUSE FOR SALE

Dhattagali 3rd Stage, Kanakadas Nagar
9380705968

ಬೇಕಾಗಿದ್ದಾರೆ

ಕೊರಿಯರ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ಹುಡುಗಿಯರು ಅಥವಾ ಮಹಿಳೆಯರು ಬೇಕಾಗಿದ್ದಾರೆ ಹಾಗೂ ಸಂಜೆ 6.00 ರಿಂದ ರಾತ್ರಿ 9.00 pm Part Time ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು) ಸಂಪರ್ಕಿಸಿ: ಬೆಳಿಗ್ಗೆ 10 ರಿಂದ ಸಂಜೆ 6 pm
9449871790

ತಕ್ಷಣ ಸಂಪರ್ಕಿಸಿ

ಮೈಸೂರಿನ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ ಕೆಲಸ ಮಾಡಲು 7th, SSLC, PUC, ITI, Diploma, Any Degree, Pass / Fail ಆದವರಿಗೆ Cashier, Billing, Data Entry, Receptionist ಮತ್ತು Packers, Movers, Helpers, Maintenance ಮುಂತಾದ ಕೆಲಸಕ್ಕೆ 636 ಯುವಕ / ಯುವತಿಯರು ಬೇಕಾಗಿದ್ದಾರೆ. ಸಂಬಳ 14000/– 38000/– (ESI+PF+OT) ಸೇರಿ. ಷರತ್ತು ಅನ್ವಯ
9980850141 / 7676939277

WANTED

Candidates with Commercial Background who are interested to work in Auditor Office having knowledge of Tally ERP 9, Applicants with Prior experience will be preferred.
Mail your Resume to:
hrmsurya21@gmail.com
MOB: 8050898042

ಮೈಸೂರು ಮ್ಯಾರೇಜ್ ಲಿಂಕ್ಸ್

ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಪ್ರತಿದಿನ ವಧು ವರರ ನೇರ ಸಂದರ್ಶನ ಇರುತ್ತದೆ. ನಿಮ್ಮ Photo & Biodata ಈಗಲೇ ವಾಟ್ಸಪ್ ಮಾಡಿರಿ.
ಡಾ.ಗುರೂಜಿ ಮೈಸೂರು
6361740552
Lady Receptionist ಕೂಡಲೇ ಬೇಕಾಗಿದ್ದಾರೆ

HOUSE FOR RENT / LEASE

3BHK DUPLEX HOUSE for Lease in Srirampura.
3BHK DUPLEX, Independent House Vijayanagar 3rd Stage.
2BHK HOUSE for Rent 40x60 Hebbal.
2BHK HOUSE for Rent in Vijayanagar 4th Stage
7996679933

SITES FOR SALE

Muda approved Sites sale in Ananda Sagara, Pragathi nagar, Kuberananda Sagara North East & West.
Contact JK
8951144240

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ಮೈಸೂರು ಮಿತ್ರ ಶನಿವಾರ 13 ಆಗಸ್ಟ್ 2022

ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಗೆ ವಿಸ್ತೃತ ಅಂದಾಜು ಪಟ್ಟಿ ಸಲ್ಲಿಸಲು ಸೂಚನೆ





ಮಡಿಕೇರಿ,ಆ.12– ಕೊಡವ ಹೆರಿಟೇಜ್ ಸೆಂಟರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕಾಮಗಾರಿ ಪೂರ್ಣಗೊಳಿಸಲು ಕೂಡಲೇ ವಿಸ್ತೃತ ಅಂದಾಜು ಪಟ್ಟಿ ಸಲ್ಲಿಸಬೇಕು ಎಂದು ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಅವರು ಕೊಡಗು ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ ಅವರಿಗೆ ಸೂಚಿಸಿದ್ದಾರೆ.

ವಿಡಿಯೋ ಸಂವಾದದ ಮೂಲಕ ಕೊಡವ ಹೆರಿಟೇಜ್ ಕಟ್ಟಡ ನಿರ್ಮಾಣ ಕಾಮಗಾರಿ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದ ಡಾ.ಎನ್.ವಿ.ಪ್ರಸಾದ್, ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು. ಆ ನಿಟ್ಟಿನಲ್ಲಿ ಅಂದಾಜು ಪಟ್ಟಿ ಸಲ್ಲಿಸಬೇಕು. ಜಿಲ್ಲೆಯ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರ ಜೊತೆ ಮಾತನಾಡಿ, ಹಣಕಾಸು ಇಲಾಖೆಯಿಂದ ಹಣ ಬಿಡುಗಡೆಗೆ ಕ್ರಮ ವಹಿಸಲಾಗುವುದು ಎಂದಿದ್ದಾರೆ.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾಹಿತಿ ನೀಡಿ, ಕೊಡವ ಹೆರಿಟೇಜ್ ಸೆಂಟರ್ ನಿರ್ಮಾಣ ಕಾಮಗಾರಿಯಲ್ಲಿ ಪ್ರಮುಖವಾಗಿ ಲ್ಯಾಟರೈಟ್ ಗೋಡೆಗಳಿಗೆ ಪಾಲಿಷಿಂಗ್ ಆಗಬೇಕಿದ್ದು, ಕಟ್ಟಡದ ಮುಂಭಾಗ ಗೇಟ್ ಮತ್ತು ಸುತ್ತು ಗೋಡೆ ನಿರ್ಮಿಸಬೇಕಿದೆ. ಮೆಟ್ಟಿಲುಗಳಿಗೆ ರೇಲಿಂಗ್ಸ್ ಮತ್ತು ಪ್ಲೋರಿಂಗ್ ಮಾಡ ಬೇಕಿದೆ. ರಂಗಮಂದಿರಕ್ಕೆ ಮೇಲ್ಛಾವಣಿ ಅಳವಡಿಕೆ ಹಾಗೂ ಇತರ ಕೆಲಸಗಳು ಬಾಕಿ ಇದೆ ಎಂದು ಉಳಿಕೆ ಕಾಮಗಾರಿಗಳ ವಿವರ ನೀಡಿದ್ದಾರೆ.

ಕೊಡವ ಹೆರಿಟೇಜ್ ಸೆಂಟರ್ ನಿರ್ಮಾಣ ಸಂಬಂಧ 330.45 ಲಕ್ಷ ರೂ.ಗಳ ಕಾಮಗಾರಿಗೆ ಅನುಮೋದನೆ ದೊರೆತಿದೆ ಐನ್‌ಮನೆ, ಬಯಲು ರಂಗಮಂದಿರ, ವಾಟರ್ ಟ್ಯಾಂಕ್, ತಡೆಗೋಡೆ ಮತ್ತು ಸಂಪರ್ಕ ಮೆಟ್ಟಿಲುಗಳು, ವಿದ್ಯುತ್ ಸಂಪರ್ಕ ಮತ್ತಿತರ ಕಾಮಗಾರಿಗಳು ಪೂರ್ಣಗೊಂಡಿದೆ. ಈಗಾಗಲೇ 282.50 ಲಕ್ಷ ರೂ. ಬಿಡುಗಡೆಯಾಗಿದ್ದು, 47.95 ಲಕ್ಷ ರೂ. ಬಿಡುಗಡೆಗೆ ಬಾಕಿ ಇದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದ್ದಾರೆ. ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಗೆ ಸಂಬಂಧಿಸಿದಂತೆ 10 ದಿನದಲ್ಲಿ ವಿಸ್ತೃತ ಅಂದಾಜು ಪಟ್ಟಿ ಸಲ್ಲಿಸಲಾಗುವುದು ಎಂದು ಡಿಸಿ ಅವರು, ಪ್ರವಾಸೋದ್ಯಮ ಡಾ. ಪ್ರಸಾದ್ ಅವರಿಗೆ ತಿಳಿಸಿದ್ದಾರೆ.

ನಿವೃತ್ತ ಐಎಎಸ್ ಅಧಿಕಾರಿ ರತಿ ವಿನಯ್ ಜಾ ಅವರು ಕೊಡಗು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ಮಡಿಕೇರಿಯಲ್ಲಿ ಕೊಡವ ಪಾರಂಪರಿಕ ಕೇಂದ್ರ ನಿರ್ಮಾಣಕ್ಕೆ ಸಾಕಷ್ಟು ಶ್ರಮಿಸಲಾಗಿದೆ. ಆ ನಿಟ್ಟಿನಲ್ಲಿ ಕಾಮಗಾರಿ ಪೂರ್ಣ ಗೊಳಿಸಲು ಮುಂದಾಗಬೇಕು ಎಂದು ಕೋರಿದ್ದಾರೆ. ಕೊಡವ ಹೆರಿಟೇಜ್ ಕೇಂದ್ರ ಮುಂದಿನ ಪೀಳಿಗೆಗೆ ಕೊಡವ ಸಂಸ್ಕೃತಿ ಪರಿಚಯಿಸುವಲ್ಲಿ ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಕೊಡವ ಪಾರಂಪರಿಕ ಕೇಂದ್ರವನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸಲಹಾ ಸಮಿತಿ ಮತ್ತು ಕಾರ್ಯಕಾರಿ ಸಮಿತಿಯನ್ನು ನೇಮಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸಮಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿ, ಜಿಲ್ಲೆಯ ಜನಪ್ರತಿನಿಧಿಗಳು ಕಾರ್ಯ ನಿರ್ವಹಿಸಲಿದ್ದಾರೆ ಎಂದು ಜಿಲ್ಲಾಧಿಕಾರಿ ವಿವರಿಸಿದ್ದಾರೆ.

ಹರ್ ಘರ್ ತಿರಂಗಾ ಅಭಿಯಾನ ಪ್ರಯುಕ್ತ ಜಾಥಾ

ಮಡಿಕೇರಿಯಲ್ಲಿ ಮೊಳಗಿದ ರಾಷ್ಟ್ರಭಕ್ತಿ ಘೋಷಣೆ



ಮಡಿಕೇರಿ, ಆ.12– ವಂದೇ ಮಾತರಂ, ಭಾರತ ಮಾತಾ ಕೀ ಜೈ, ಜೈ ಹಿಂದ್, ಜೈ ಭಾರತ್, ನಮ್ಮ ತಾಯಿ ಭಾರತಿ, ನಮ್ಮ ನಾಡು ಭಾರತ, ರಾಷ್ಟ್ರಪ್ರೇಮ ಮನಗಳಲ್ಲಿ, ರಾಷ್ಟ್ರಧ್ವಜ ಮನೆ ಮನೆಗಳಲ್ಲಿ, ರಾಷ್ಟ್ರಭಕ್ತಿ ಹೆಚ್ಚಿಸಿ, ರಾಷ್ಟ್ರಪ್ರೇಮ ಬೆಳೆಸಿ, ಹರ್ ಘರ್ ತಿರಂಗಾ ಪ್ರತೀ ಮನೆ ಮನೆಗಳಲ್ಲಿ, ರಾಷ್ಟ್ರಧ್ವಜ ಹಾರಿಸೋಣ, ದೇಶಭಕ್ತಿ ತೋರಿಸೋಣ, ಏರುತಿಹುದು, ಹಾರುತಿಹುದು ನೋಡು ನಮ್ಮ ಬಾವುಟ, ಹೀಗೆ ಹಲವು ರಾಷ್ಟ್ರ ಭಕ್ತಿಯ ಘೋಷ ವಾಕ್ಯಗಳು ಮಡಿಕೇರಿಯಲ್ಲಿ ಮೊಳಗಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘ, ಭಾರತೀಯ ಸ್ಕೌಟ್ಸ್ ಮತ್ತು ಗೈಡ್ಸ್ ಹೀಗೆ ಹಲವು ಸಂಘ ಸಂಸ್ಥೆಗಳ ಸಹಕಾರದಲ್ಲಿ ಹರ್ ಘರ್ ತಿರಂಗಾ ಅಭಿಯಾನ ಪ್ರಯುಕ್ತ ಶುಕ್ರವಾರ ಏರ್ಪಡಿಸಲಾಗಿದ್ದ ಜಾಗೃತಿ ಜಾಥಾ ಅಭಿಯಾನ ಸಂದರ್ಭದಲ್ಲಿ ಈ ಘೋಷ ವಾಕ್ಯಗಳು ಕೇಳಿ ಬಂದವು.

ನಗರದ ಕೋಟೆ ಆವರಣದಲ್ಲಿ ಜಾಗೃತಿ ಜಾಥಾಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಪ್ರಧಾನ ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶರಾದ ಎಂ.ಭೃಂಗೇಶ್, ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಬಿ. ಪ್ರಸಾದ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ತಹಸೀಲ್ದಾರ್ ಮಹೇಶ್, ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಪೊನ್ನಚ್ಚನ ಶ್ರೀನಿವಾಸ್ ಚಾಲನೆ ನೀಡಿದರು.

ಜಾಥಾವು ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ವೃತ್ತ ಮೂಲಕ ಇಂದಿರಾ ಗಾಂಧಿ ವೃತ್ತ ತಲುಪಿ ನಂತರ ಸ್ಕ್ವಾಡ್ರನ್ ಲೀಡರ್ ದೇವಯ್ಯ ವೃತ್ತ–ಮಂಗೇರೀರ ಮುತ್ತಣ್ಣ ವೃತ್ತ–ಜನರಲ್ ತಿಮ್ಮಯ್ಯ ವೃತ್ತದ ಮುಖಾಂತರ ಕೋಟೆ ಆವರಣ ತಲುಪಿತು.

ಜಾಥಾದಲ್ಲಿ ಪೊಲೀಸ್ ಮತ್ತು ಭಾರತೀಯ ವಿದ್ಯಾಭವನದ ವಿದ್ಯಾರ್ಥಿಗಳು ವಾದ್ಯ ತಂಡದೊಂದಿಗೆ ಪಾಲ್ಗೊಂಡು ಜಾಥಾಗೆ ಮೆರಗು ನೀಡಿದರು. ನಗರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿದ್ಯಾರ್ಥಿಗಳು, ಭಾರತೀಯ ವಿದ್ಯಾಭವನ, ಸಂತ ಜೋಸೆಫರ, ಸಂತ ಮೈಕಲರ ಶಾಲೆಯ ವಿದ್ಯಾರ್ಥಿಗಳು, ರಾಜರಾಜೇಶ್ವರಿ ಶಾಲೆ, ಜನರಲ್ ತಿಮ್ಮಯ್ಯ ಶಾಲೆ, ಬ್ಲಾಸಂ ಶಾಲೆ, ಲಿಟ್ಲ್ ಪ್ಲವರ್ ಶಾಲೆ ವಿದ್ಯಾರ್ಥಿಗಳು, ಎನ್‌ಡಿಆರ್‌ಎಫ್, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ಅಧಿಕಾರಿಗಳು, ಸಿಬ್ಬಂದಿಗಳು, ಹೊರಗುತ್ತಿಗೆ ಸಿಬ್ಬಂದಿ ಸೇರಿದಂತೆ ಒಂದು ಸಾವಿರಕ್ಕೂ ಹೆಚ್ಚು ಮಂದಿ ರಾಷ್ಟ್ರಧ್ವಜ ಸಹಿತ ಜಾಥಾದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಡಾ.ಸತೀಶ ಮಾತನಾಡಿ, ಪ್ರಧಾನಮಂತ್ರಿ ಅವರ ಕರೆ ಮೇರೆಗೆ ಸ್ವಯಂ ಪ್ರೇರಣೆಯಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಅಧಿಕಾರಿಗಳು ಹೀಗೆ ಎಲ್ಲರೂ ಹರ್ ಘರ್ ತಿರಂಗಾ ಅಭಿಯಾನದ ಜಾಥಾದಲ್ಲಿ ಪಾಲ್ಗೊಂಡಿದ್ದಾರೆ. ಆ ನಿಟ್ಟಿನಲ್ಲಿ ಆ.13, 14 ಮತ್ತು 15 ರಂದು ಮೂರು ದಿನಗಳ ಕಾಲ ಸರ್ಕಾರಿ ಕಚೇರಿಗಳು, ಮನೆಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಬೇಕಿದ್ದು, ಆ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸುವಂತೆ ಮನವಿ ಮಾಡಿದರು.

ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜು, ಅಂಗನವಾಡಿ ಸೇರಿದಂತೆ ಎಲ್ಲಾ ಸರ್ಕಾರಿ ಕಟ್ಟಡಗಳಲ್ಲಿ ಆ.13 ರಿಂದ 15 ರವರೆಗೆ ಪ್ರತೀ ದಿನ ಬೆಳಗ್ಗೆ 8 ರಿಂದ ಧ್ವಜಾರೋಹಣ ಮಾಡಿ ಸೂರ್ಯಾಸ್ತದ ವೇಳೆಗೆ ಇಳಿಸಬೇಕಿದೆ. ಜಿಲ್ಲೆಯಾದ್ಯಂತ ಮನೆಗಳಲ್ಲಿ ಮಾತ್ರ ಆಗಸ್ಟ್ 13 ರಂದು ಬೆಳಗ್ಗೆ 8 ಗಂಟೆಗೆ ಧ್ವಜಾರೋಹಣ ಮಾಡಿ ಹಗಲು ರಾತ್ರಿ ನಿರಂತರವಾಗಿ ಧ್ವಜ ಹಾರಿಸಿ ಆ.15ರ ಸಂಜೆ ಸೂರ್ಯಾಸ್ತದ ವೇಳೆಗೆ ಇಳಿಸಿ, ಹರ್ ಘರ್ ತಿರಂಗಾ ಅಭಿಯಾನ ಯಶಸ್ವಿಗೊಳಿಸಬೇಕು. ಆ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಸಹಕರಿಸುವಂತೆ ಡಾ.ಸತೀಶ ಅವರು ಇದೇ ಸಂದರ್ಭದಲ್ಲಿ ಕೋರಿದರು.

ಮಳೆಯ ಸಿಂಚನ ನಡುವೆ ಆರಂಭವಾದ ಜಾಥವು ನಂತರ ಬಿಡುವು ನೀಡಿತು. ವಿದ್ಯಾರ್ಥಿಗಳು ಸೇರಿದಂತೆ ಪ್ರತಿಯೊಬ್ಬರೂ ರಾಷ್ಟ್ರಭಕ್ತಿಯ ಘೋಷವಾಕ್ಯ ಸಾರುವುದರ ಜೊತೆಗೆ ಹುರುಪಿನಿಂದ ಜಾಥಾದಲ್ಲಿ ಪಾಲ್ಗೊಂಡಿದ್ದು ಗಮನ ಸೆಳೆಯಿತು.

ಸ್ಕೌಟ್ಸ್ ಮತ್ತು ಗೈಡ್ಸ್‌ನ ಪ್ರಧಾನ ಆಯುಕ್ತ ಬೇಬಿ ಮ್ಯಾಥ್ಯೂ, ನಾನಾ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಇತರರು ಇದ್ದರು.

ಚೆಂಬಂಡ ಎಂ.ಮಾದಪ್ಪ ನಿಧನ



ಮೈಸೂರು,ಆ.12– ಮೈಸೂರಿನ ಗಾಯಿತ್ರಿಪುರಂ ನಿವಾಸಿ ಚೆಂಬಂಡ ಎಂ.ಮಾದಪ್ಪ (ಸುಬ್ರಮಣಿ) ಇಂದು ನಿಧನರಾದರು.

ಅವರಿಗೆ 72 ವರ್ಷ ವಯಸ್ಸಾಗಿತ್ತು ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಮಧ್ಯಾಹ್ನ 12.30ರ ನಂತರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದುಬಾರೆ ಸಾಕಾನೆ ಶಿಬಿರದಲ್ಲಿ ವಿಶ್ವ ಆನೆ ದಿನಾಚರಣೆ



ಕುಶಾಲನಗರ, ಆ.12– ಕುಶಾಲನಗರ ಅರಣ್ಯ ವಲಯದ ದುಬಾರೆ ಶಿಬಿರದಲ್ಲಿರುವ ಸಾಕಾನೆಗಳಿಗೆ ಪೂಜೆ ಸಲ್ಲಿಸಿ 'ವಿಶ್ವ ಆನೆಗಳ ದಿನ'ವನ್ನು ಆಚರಿಸಲಾಯಿತು.

ಈ ಸಂದರ್ಭ ವನ್ಯಜೀವಿ ವಿಭಾಗದ ಸಂರಕ್ಷಣಾಧಿಕಾರಿ ಶಿವರಾಂಬಾಬು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್ ಎ.ಎ, ವಲಯ ಅರಣ್ಯಾಧಿಕಾರಿ ಶಿವರಾಮ್ ಕೆ.ವಿ, ಉಪ ವಲಯ ಅರಣ್ಯಾಧಿಕಾರಿ ಕೆ.ಪಿ. ರಂಜನ್ ಹಾಗೂ ಮೋಜಣಿದಾರರು, ಅರಣ್ಯ ರಕ್ಷಕರು, ಆನೆ ಮಾವುತ ಮತ್ತು ಕಾವಾಡಿಗಳು ಪಾಲ್ಗೊಂಡಿದ್ದರು.

ಹಾಡಹಗಲೇ ಮನೆ ಬಾಗಿಲು ಮುರಿದು ನಗ–ನಾಣ್ಯ ಕಳವು

ಭಾರತೀನಗರ.ಆ.12–ಹಾಡಹಗಲೇ ಮನೆ ಬಾಗಿಲು ಮುರಿದು ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ಭಾರತೀನಗರದ ಓಂ ಶಾಂತಿ ಮಾರ್ಗದಲ್ಲಿ ನಡೆದಿದೆ.

ಮುಟ್ಟನಹಳ್ಳಿ ಈರಯ್ಯ ಎಂಬುವವರು ಶುಕ್ರವಾರ ಮಧ್ಯಾಹ್ನ ಸುಮಾರು 2 ಗಂಟೆ ಸುಮಾರಿನಲ್ಲಿ ಮನೆಗೆ ಬೀಗ ಹಾಕಿಕೊಂಡು ಹೊರಹೋಗಿದ್ದು, ಈ ವೇಳೆ ಖದೀಮರು ಮನೆಯ ಹಿಂಬಾಗಿಲ ಬಾಗಿಲು ಮುರಿದು, ರೂಮಿನಲ್ಲಿದ ಬೀರುವನ್ನು ಹೊಡೆದು ನಗದು ಸೇರಿದಂತೆ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸರು ದೂರು ದಾಖಲಿಸಿಕೊಂಡಿದ್ದಾರೆ.

ಕಾಡುಕೊತ್ತನಹಳ್ಳಿಯಲ್ಲಿ ವ್ಯಕ್ತಿ ಅನುಮಾನಾಸ್ಪದ ಸಾವು

ಭಾರತೀನಗರ,ಆ.12– ಇಲ್ಲಿಗೆ ಸಮೀಪದ ಕಾಡುಕೊತ್ತನಹಳ್ಳಿ ಗ್ರಾಮದ ಹೊರ ವಲಯದ ಮಹದೇಶ್ವರ ದೇವಾಲಯದ ಬಳಿ ವ್ಯಕ್ತಿಯೋರ್ವನ ಮೃತದೇಹ ಪತ್ತೆಯಾಗಿದೆ.

ಕಾಡುಕೊತ್ತನಹಳ್ಳಿ ಗ್ರಾಮದ ಮಹದೇವಸ್ವಾಮಿ(40) ಎಂಬುವರ ಶವ ಮರಕ್ಕೆ ಹಗ್ಗವನ್ನು ಸುತ್ತಿ ಕತ್ತಿಗೆ ಬಿಗಿದುಕೊಂಡ ರೀತಿಯಲ್ಲಿ ಪತ್ತೆಯಾಗಿದೆ.

ಗ್ರಾಮಸ್ಥರು ನೀಡಿದ ದೂರಿನ ಮೇರೆಗೆ ಪೊಲೀಸರು ಮತ್ತು ಸ್ವಾನದಳ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮಕೈಗೊಂಡಿದ್ದಾರೆ. ಈ ಸಂಬಂಧ ಕೆ.ಎಂ. ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಂಡ್ಯ: ಇಂದಿನಿಂದ 15ರವರೆಗೆ ಹರ್ ಘರ್ ತಿರಂಗಾ ಅಭಿಯಾನ



ಜಿಲ್ಲಾಧಿಕಾರಿಗಳ ಕಚೇರಿ ಬಳಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಕಚೇರಿಯ ಸಿಬ್ಬಂದಿ ಹಾಗೂ ಸಾರ್ವಜನಿಕರಿಗೆ ತ್ರಿವರ್ಣ ಧ್ವಜವನ್ನು ನೀಡುವ ಮೂಲಕ ಹರ್ ಘರ್ ತಿರಂಗಾ ಅಭಿಯಾನಕ್ಕೆ ಚಾಲನೆ ನೀಡಿದರು. ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಿ.ಆರ್.ಅಶೋಕ್, ವಕೀಲ ಬಸವರಾಜು, ನರೇಶ್ ಇತರರಿದ್ದರು.

ಮಂಡ್ಯ,ಆ.12– ಜಿಲ್ಲೆಯಾದ್ಯಂತ ಎಲ್ಲಾ ಶಾಲಾ ಕಾಲೇಜು, ಸರ್ಕಾರಿ ಕಟ್ಟಡ, ಪಂಚಾಯತ್, ಪುರಸಭೆ ಆರೋಗ್ಯ ಕೇಂದ್ರ, ಅಂಗನವಾಡಿ ಕೇಂದ್ರ ಕಟ್ಟಡಗಳಲ್ಲಿ ಆ.13 ರಿಂದ 15 ರವರೆಗೆ ಪ್ರತಿದಿನ ಬೆಳಿಗ್ಗೆ 6 ಗಂಟೆಗೆ ಧ್ವಜಾರೋಹಣ ಮಾಡುವುದು ಸಾಯಂಕಾಲ 6 ಗಂಟೆಗೆ ಧ್ವಜವನ್ನು ಇಳಿಸಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದ್ದಾರೆ.

ಆಗಸ್ಟ್ 13 ರಿಂದ 15 ಆಗಸ್ಟ್ ರವರಗೆ 'ಹರ್ ಘರ್ ತಿರಂಗಾ' ರೂಪುರೇಷೆಯನ್ನು ಸಿದ್ಧಪಡಿಸುವುದು ಹಾಗೂ ಸದರಿ ಅಭಿಯಾನದಲ್ಲಿ, ರಾಜ್ಯದ ಸರ್ಕಾರಿ/ಅರೆ ಸರ್ಕಾರಿ/ನಿಗಮ ಮಂಡಳಿಗಳು/ಸಾರ್ವಜನಿಕ ಉದ್ಯಮಗಳೂ ಸ್ವಸಹಾಯ ಗುಂಪುಗಳು, ನಾಗರೀಕ ಸಂಸ್ಥೆಗಳು/ಸಾರ್ವಜನಿಕರು/ಶಾಲಾ ಕಾಲೇಜು ಮಕ್ಕಳು, ಇತರೆ ಎಲ್ಲಾ ಸಿಬ್ಬಂದಿ ಹಾಗೂ ಅವರ ಕುಟುಂಬ ವರ್ಗದವರೂ ಒಳಗೊಂಡಂತೆ ಸ್ವತಃ ತಾವೇ ಕ್ರಿಯಾಶೀಲವಾಗಿ ಭಾಗವಹಿಸುವಂತೆ ಹಾಗೂ ಅವರುಗಳ ಮನೆ/ಕಚೇರಿಗಳ ಮೇಲೆ ಧ್ವಜಾರೋಹಣ ಮಾಡಲು ಪ್ರೇರೇಪಿಸುವುದು.

'ಹರ್ ಘರ್ ತಿರಂಗಾ' ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸ್ಥಳೀಯ ಭಾಷೆಯಲ್ಲಿ, ಕರಪತ್ರ ಸ್ಟ್ಯಾಂಡೀಸ್, ಬ್ಯಾನರ್ ಇತ್ಯಾದಿಗಳನ್ನು ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಲಾಗುವುದು.

ರಾಜ್ಯ ಸರ್ಕಾರದ ಜಾಲತಾಣಗಳ ಹಾಗೂ ಸಾಮಾಜಿಕ ಮಾಧ್ಯಮಗಳ ಅಂಗಗಳನ್ನು ಉಪಯೋಗಿಸಿಕೊಳ್ಳುವುದು, ಬಸ್ ಸ್ಟ್ಯಾಂಡ್, ರೈಲ್ವೆ ನಿಲ್ದಾಣ, ಉದ್ಯಾನವನಗಳು, ಅಲ್ಲದೇ ಪ್ರತಿ ವಾರ್ಡ್‌ಗಳಲ್ಲಿ, ಸಾರ್ವಜನಿಕ ಸಂಪರ್ಕ ಹೊಂದಿರುವ ಕಛೇರಿಗಳಲ್ಲಿ, 'ಹರ್ ಘರ್ ತಿರಂಗಾ' ಕುರಿತಂತೆ ಪ್ರಚಾರ ಮಾಡಲು ಸೂಕ್ತ ಕ್ರಮ ವಹಿಸಲಾಗುವುದು.

ಕೇಂದ್ರ ಸರ್ಕಾರದ ಜಾಲ ತಾಣದಲ್ಲಿ (amritmahotsav.nic.in), 'ಹರ್ ಘರ್ ತಿರಂಗಾ'ದ ಅಡಿಯಲ್ಲಿ ರಾಷ್ಟ್ರ ಧ್ವಜಕ್ಕೆ ಸಂಬಂಧಿಸಿದಂತೆ ಬ್ಯಾನರ್ ಮತ್ತು ಪೋಸ್ಟರ್‌ಗಳ ಮಾದರಿಗಳು ಲಭ್ಯವಿದ್ದು, ಅವುಗಳ ಉಪಯೋಗಗಳನ್ನು ಪಡೆದುಕೊಳ್ಳುವುದು.

ಸದರಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಧ್ವಜಗಳನ್ನು ಇಲಾಖೆಗಳಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದ್ದು, ಸದರಿ ಧ್ವಜಗಳನ್ನು ಜನರಿಗೆ ಮಾರಾಟ ಮಾಡಿ, ಕೃತವಾದ ಹಣವನ್ನು ಆಯಾ ದಿನವೇ ಈಗಾಗಲೇ ತಿಳಿಸಿರುವ ಪ್ರತ್ಯೇಕ ಬ್ಯಾಂಕ್ ಖಾತೆಗೆ ಜಮೆ ಮಾಡಲು ಕ್ರಮ ವಹಿಸಲಾಗಿದೆ.

ಎಲ್ಲರೂ ಭಾರತ ಧ್ವಜ ಸಂಹಿತೆ (Flag Code of India) ಯ ನಿಯಮಗಳನ್ನು ಕಟುನಿಟ್ಟಾಗಿ ಪಾಲನೆ ಮಾಡಿ ಎಲ್ಲಾ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ತಮ್ಮ–ತಮ್ಮ ಮನೆಗಳಲ್ಲಿ, ರಾಷ್ಟ್ರ ಧ್ವಜವನ್ನು ಹಾರಿಸಲು ತಿಳಿಸಿದೆ. ಆ.15ರ ನಂತರವು ರಾಷ್ಟ್ರ ಧ್ವಜಗಳನ್ನು ಗೌರವಯುತವಾಗಿ ನಿರ್ವಹಣೆ ಮಾಡಲು ಅಗತ್ಯ ಕ್ರಮ ವಹಿಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ವಾರ್ಷಿಕೋತ್ಸವ

ಶ್ರೀರಂಗಪಟ್ಟಣ, ಆ.12– ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್‌ನ ವಾರ್ಷಿಕೋತ್ಸವ, ನಾಡಪ್ರಭು ಕೆಂಪೇಗೌಡ ಜಯಂತಿ ಮತ್ತು ಸಾಧಕರಿಗೆ ಅಭಿನಂದನಾ ಕಾರ್ಯಕ್ರಮ ಆ.14 ರಂದು ನಡೆಯಲಿದೆ ಎಂದು ಟ್ರಸ್ಟ್‌ನ ಪೋಷಕ ಇಂಡುವಾಳು ಸಚ್ಚಿದಾನಂದ ತಿಳಿಸಿದ್ದಾರೆ.

ಶ್ರೀರಂಗಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಅಂದು ಬೆಳಿಗ್ಗೆ 10.30ಕ್ಕೆ ಕಂದಾಯ ಸಚಿವ ಆರ್.ಅಶೋಕ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಚಂದ್ರವನ ಆಶ್ರಮದ ಪೀಠಾಧ್ಯಕ್ಷ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಜ್ಯೋತಿಷಿ ಡಾ.ವಿ. ಭಾನುಪ್ರಕಾಶ್ ಶರ್ಮಾ ಆಶೀರ್ವಚನ ನೀಡಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಸಂಸದೆ ಸುಮಲತಾ ಅಂಬರೀಶ್ ಇತರೆ ಪ್ರಮುಖರು ಪಾಲ್ಗೊಳ್ಳಲಿದ್ದಾರೆ ಎಂದು ಇಂಡುವಾಳು ಸಚ್ಚಿದಾನಂದ ತಿಳಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಗ್ರಂಥಪಾಲಕರ ದಿನಾಚರಣೆ



ಕೆ.ಆರ್.ಪೇಟೆ, ಆ.12– ಪಟ್ಟಣದ ಸಾರ್ವಜನಿಕ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ ನಡೆಯಿತು.

ತಾಲೂಕಿನ ಹಿರಿಯ ಉಪನ್ಯಾಸಕರು ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಎಂ.ಕೆ.ಹರಿಚರಣ್ ತಿಲಕ್ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು. ಬಳಿಕ ಮಾತನಾಡಿ, ಗ್ರಂಥಾಲಯಗಳು ಜ್ಞಾನವನ್ನು ಹೆಚ್ಚಿಸುವ ದೇಗುಲಗಳಾಗಿವೆ. ಪುಸ್ತಕಗಳು ಜ್ಞಾನದ ದಾಹವನ್ನು ನೀಗಿಸಿ ಅರಿವಿನ ಜಾಗೃತಿಯನ್ನು ಮೂಡಿಸುತ್ತವೆ. ವೃತ್ತ ಪತ್ರಿಕೆಗಳು ಪ್ರಪಂಚದ ಪ್ರಚಲಿತ ವಿದ್ಯಮಾನಗಳನ್ನು ತಿಳಿಸಿಕೊಡುತ್ತವೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸುಲಭವಾಗಿ ಉತ್ತೀರ್ಣ ಹೊಂದಿ ಯಶಸ್ಸು ಗಳಿಸಬೇಕಾದರೆ ದಿನಪತ್ರಿಕೆಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಗ್ರಂಥಪಾಲಕರು ಓದುಗರಿಗೆ ಬೇಕಾದ ಪುಸ್ತಕಗಳನ್ನು ಖರೀದಿಸಿ ಪೂರೈಕೆ ಮಾಡುವ ಮಹತ್ತರ ಜವಾಬ್ದಾರಿ ಇರುತ್ತದೆ. ತಾಲೂಕು ಶೈಕ್ಷಣಿಕ ಕಾಶಿಯಾಗಿ ಶಿಕ್ಷಣ ಜ್ಞಾನವನ್ನು ಸಾವಿರಾರು ವಿದ್ಯಾರ್ಥಿಗಳಿಗೆ ನೀಡುತ್ತಿದೆ. ಇಂಜಿನಿಯರಿಂಗ್ ಶಿಕ್ಷಣ, ಪದವಿ, ಸ್ನಾತಕೋತ್ತರ ಪದವಿ ಶಿಕ್ಷಣ ದೊರೆಯುತ್ತಿದೆ. ಜೊತೆಗೆ ಡಿಪ್ಲೊಮಾ ಶಿಕ್ಷಣ, ಐಟಿಐ, ಬಿ.ಎಡ್, ಡಿ.ಎಡ್ ಶಿಕ್ಷಣವೂ ಸಹ ತಾಲೂಕಿನಲ್ಲಿ ಸಿಗುತ್ತಿದೆ ಇದಕ್ಕೆ ತಕ್ಕಂತೆ ತಾಲ್ಲೂಕು ಕೇಂದ್ರದಲ್ಲಿ ಸುಸಜ್ಜತ ಗ್ರಂಥಾಲಯ ಇಲ್ಲದಿರುವುದು ವಿಷಾದನೀಯ ಎಂದರು.

ಅಗ್ರಹಾರಬಾಚಹಳ್ಳಿ ಗ್ರಾಪಂ ಸದಸ್ಯ ಆರ್. ಶ್ರೀನಿವಾಸ್ ಗ್ರಂಥಾಲಯ ಪಿತಾಮಹ ಎಸ್.ಆರ್.ರಂಗನಾಥನ್ ಅವರ ಭಾವಚಿತ್ರ ಅನಾವರಣ ಮಾಡಿದರು. ಗ್ರಂಥಪಾಲಕಿ ಕಲ್ಪನಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಗ್ರಂಥಾಲಯ ಸಹಾಯಕರಾದ ಚಂದ್ರು, ಎಂ.ಮಹೇಶ್, ತಾಲೂಕು ಗ್ರಂಥಾಲಯ ಓದುಗರ ವೇದಿಕೆಯ ಸದಸ್ಯರಾದ ಶೀಳನೆರೆ ಕೊಪ್ಪಲು ಕೆ.ಎಂ.ಮಂಜುನಾಥ್, ತಿಮ್ಮಯ್ಯ, ದೇವಯ್ಯ, ಚಂದು, ನಾಗೇಶ್, ಪುನೀತ್ ಕುಮಾರ್, ಮಂಜುನಾಥ್, ರೇವಂತ್, ಕೆ.ಪಿ. ಮಂಜುನಾಥ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀ ರಾಘವೇಂದ್ರರ 351ನೇ ಆರಾಧನಾ ಮಹೋತ್ಸವ ಪ್ರಾರಂಭ



ನಾಗಮಂಗಲ, ಆ.12– ಪಟ್ಟಣದ ಇತಿಹಾಸ ಪ್ರಸಿದ್ಧ ಛತ್ರದ ಆಂಜನೇಯ ದೇವಸ್ಥಾನದಲ್ಲಿ ಮಂತ್ರಾಲಯ ಪ್ರಭು ಶ್ರೀ ರಾಘವೇಂದ್ರ ಸ್ವಾಮೀಜಿಗಳ 351ನೇ ಆರಾಧನಾ ಮಹೋತ್ಸವವು ವೈಭವದಿಂದ. ಪ್ರಾರಂಭವಾಯಿತು. ಮುಂಜಾನೆ ಸ್ಥಳದ ವೇದ ವಿದ್ವಾಂಸರಾದ ಶ್ರೀ ನಂಜುಂಡಭಟ್ ಮತ್ತು ನಾಗರಾಜ್ ರವರಿಂದ ವೇದ, ಅರುಣ ಪಾರಾಯಣದೊಂದಿಗೆ ರಾಯರಿಗೆ ಸುಪ್ರಭಾತ ಸೇವೆ, ಅಭ್ಯಂಜನ ಸೇವೆ, ನಾಮಾರ್ಚನ ಸೇವೆಗಳು ನಡೆದು ದೇವಾಲಯದಲ್ಲಿ ಪ್ರಾಕಾರೋತ್ಸವಗಳು ನಡೆದವು. ಸಾವಿರಾರು ಭಕ್ತರು ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು. ಗುರುವಾರದಿಂದ ನಾಲ್ಕು ದಿನಗಳ ಕಾಲ ನಡೆಯಲಿದ್ದು, ನಾಳೆ ಶನಿವಾರ ಮಧ್ಯಾರಾಧನೆ ನಡೆಯುವುದೆಂದು ಸಮಿತಿ ತಿಳಿಸಿದೆ.

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಹೆದ್ದಾರಿ ತಡೆ



ಚಾಮರಾಜನಗರ,ಆ.12–ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಸಮಿತಿಯಿಂದ ನಗರದಲ್ಲಿ ಹೆದ್ದಾರಿ ತಡೆದು ಪ್ರತಿಭಟಿಸಲಾಯಿತು.

ನಗರ ಹೊರ ವಲಯದ ಜಾಲಹಳ್ಳಿಹುಂಡಿ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ, ಹೆದ್ದಾರಿ ತಡೆದರು. ಇದರಿಂದಾಗಿ ಅರ್ಧ ಗಂಟೆಗೂ ಹೆಚ್ಚು ಕಾಲ ಸಂಚಾರ ಅಸ್ತವ್ಯಸ್ತವಾಯಿತು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, 2023ರ ವೇಳೆ ರೈತರ ಆದಾಯ ದುಪ್ಪಟ್ಟು ಮಾಡುತ್ತೇವೆ ಎಂದ ಪ್ರಧಾನಿ ಮೋದಿ, ರಸಗೊಬ್ಬರ ಬೆಲೆ, ಕೃಷಿ ಯಂತ್ರೋಪಕರಣ, ಮಜ್ಜಿಗೆ, ಮೊಸರು, ಅಕ್ಕಿ–ಬೇಳೆ ಸೇರಿದಂತೆ ರೈತರ ಉತ್ಪನ್ನಗಳ ಮೇಲೆ ಜಿಎಸ್‌ಟಿ ಹಾಕಿ, ಬೆಲೆ ಹೆಚ್ಚಳ ಮಾಡಿದ್ದಾರೆ ಎಂದು ದೂರಿದರು. ಕೇಂದ್ರ ವಿದ್ಯುತ್ ಖಾಸಗೀಕರಣ ಬಿಲ್ ಅನ್ನು ಮಂಡಿಸಲು ಮುಂದಾಗಿದ್ದು, ಇದು ಸರಿಯಲ್ಲ ಎಂದರಲ್ಲದೆ, ಪ್ರತಿ ಟನ್ ಕಬ್ಬಿಗೆ 4,500 ರೂ. ಬೆಲೆ ನಿಗದಿ ಮಾಡಬೇಕು. ಸರ್ಕಾರ ಈಗ ನಿಗದಿ ಮಾಡಿರುವ ಎಫ್‌ಆರ್‌ಪಿ ದರ ಅವೈಜ್ಞಾನಿಕವಾಗಿದ್ದು, ಅದನ್ನು ಪರಿಷ್ಕರಿಸಬೇಕು. ಅಲ್ಲದೆ ಜಿಲ್ಲೆಯ ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಜಿಲ್ಲಾ ಉಸ್ತುವಾರಿ ಸಚಿವರು ರೈತರ ಸಭೆ ಕರೆಯಬೇಕು. ಆನೆ ಮಡುವಿನ ಕೆರೆಗೆ ಉಡಿಗಾಲ ಗ್ರಾಮದ ತಾಯಿ ಕಾಲುವೆ ಚಿಕ್ಕ ಮೋರಿ ಮೂಲಕ ನೀರು ಹರಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಪಟೇಲ್ ಶಿವಮೂರ್ತಿ, ಹಾಲಿನ ನಾಗರಾಜು, ಮೂಕಳ್ಳಿ ಮಹದೇವಸ್ವಾಮಿ, ಯರಿಯೂರು ಮಹೇಶ್, ಗುರುಪ್ರಸಾದ್, ಮಲೆಯೂರು ಬಸವರಾಜು, ಪ್ರದೀಪ್‌ಕುಮಾರ್, ಹರ್ಷ, ಬಾಣಹಳ್ಳಿ ಕುಮಾರ್, ಹೆಗ್ಗೋಠಾರ ಶಿವಸ್ವಾಮಿ, ಉಡಿಗಾಲ ರೇವಣ್ಣ, ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.



ಹನೂರು ತಾಲೂಕಿನ ಗಾಣಿಗಮಂಗಲ ಗ್ರಾಮದಲ್ಲಿ ಟಿಎಸ್‌ಪಿ ಯೋಜನೆಯ ವಿಶೇಷ ಅನುದಾನದಲ್ಲಿ ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಆರ್.ನರೇಂದ್ರ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ಆರೋಗ್ಯಮ್ಮ, ಉಪಾಧ್ಯಕ್ಷೆ ರಂಗಮ್ಮ, ಸದಸ್ಯೆ ಮಹದೇವಮ್ಮ, ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ನವೀನ್ ಮಠದ್ ಹಾಗೂ ಗ್ರಾಮಸ್ಥರಿದ್ದರು.

ಹರ್ ಘರ್ ತಿರಂಗಾ ಅಭಿಯಾನಕ್ಕೆ ಡಿಸಿ ಚಾಲನೆ



ಚಾಮರಾಜನಗರ, ಆ.12–ದೇಶದ 75ನೇ ಸ್ವಾತಂತ್ರ ದಿನಾಚರಣೆ ಅಮೃತ ಮಹೋತ್ಸವದ ನಿಮಿತ್ತ ಪ್ರಧಾನಿ ನರೇಂದ್ರ ಮೋದಿ ಅವರ ಕರೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘವು ಚಾಮರಾಜನಗರದ ಜಿಲ್ಲಾಡಳಿತ ಭವನದ ಮುಂಭಾಗ ಹಮ್ಮಿಕೊಂಡಿದ್ದ ಹರ್‌ಘರ್ ತಿರಂಗಾ ಅಭಿಯಾನಕ್ಕೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಚಾಲನೆ ನೀಡಿದರು.

ಈ ವೇಳೆ ತ್ರಿವರ್ಣಧ್ವಜವನ್ನು ನೌಕರರಿಗೆ ವಿತರಿಸಿ ಮಾತನಾಡಿದ ಸಂಘದ ಅಧ್ಯಕ್ಷ ಚಂದ್ರಶೇಖರ್, ರಾಜ್ಯದ ಎಲ್ಲಾ ನೌಕರರ ಮನೆ–ಮನೆಗಳಲ್ಲಿ ಆ.13 ರಿಂದ 15ರವರೆಗೆ ತ್ರಿವರ್ಣಧ್ವಜ ಹಾರಿಸಲು ಮಹತ್ವದ ನಿರ್ಣಯ ಕೈಗೊಂಡಿದೆ. ಈ ಅಭಿಯಾನದ ಯಶಸ್ಸಿಗಾಗಿ ನೌಕರರಿಗೆ 500 ರಾಷ್ಟ್ರಧ್ವಜವನ್ನು ಉಚಿತವಾಗಿ ವಿತರಿಸಲು ಉದ್ದೇಶಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಗೌರವ ಅಧ್ಯಕ್ಷ ಎಚ್.ಎಸ್.ಶಿವಮೂರ್ತಿ, ಉಪಾಧ್ಯಕ್ಷರಾದ ಮಂಜುನಾಥ್, ಜಯಶಂಕರ್, ಯೋಗೀಶ್‌ಗೌಡ, ಪದಾಧಿಕಾರಿಗಳಾದ ಮಹೇಂದ್ರ ಮಲ್ಲೇಶ್ ಸೇರಿದಂತೆ ನೌಕರರಿದ್ದರು.

ಬಂಡೀಪುರದಲ್ಲಿ ವಿಶ್ವ ಆನೆ ದಿನಾಚರಣೆ



ಗುಂಡ್ಲುಪೇಟೆ, ಆ.12–ತಾಲೂಕಿನ ಬಂಡೀಪುರ ಹುಲಿ ಯೋಜನೆಯ ಕಲ್ಕೆರೆ ವಲಯದ ರಾಂಪುರ ಸಾಕಾನೆ ಶಿಬಿರದಲ್ಲಿ ವಿಶ್ವ ಆನೆ ದಿನ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹುಲಿ ಯೋಜನೆಯ ನಿರ್ದೇಶಕ ಡಾ.ರಮೇಶ್ ಕುಮಾರ್, ಮಾನವ ಆನೆ ಸಂಘರ್ಷ ತಪ್ಪಿಸಲು ಕ್ರಮ ಕೈಗೊಂಡ ಪರಿಣಾಮ ಸಾವು–ನೋವುಗಳ ಸಂಖ್ಯೆ ಇಳಿಕೆಯಾಗುತ್ತಿದೆ. ಹಿಂದಿನಿಂದಲೂ ಮಾನವ ಆನೆ ಸಂಘರ್ಷ ನಡೆಯುತ್ತಿದ್ದು ಇದನ್ನು ತಪ್ಪಿಸಲು ಕಂದಕ, ಸೋಲಾರ್ ಬೇಲಿ ಹಾಗೂ ರೈಲ್ವೆ ಕಂಬಿ ಅಳವಡಿಸಿ ತಕ್ಕ ಮಟ್ಟಿಗೆ ನಿಯಂತ್ರಿಸಲಾಗಿದೆ. ಇತ್ತೀಚೆಗೆ ಕಬ್ಬಿಣದ ರೋಪ್ ಅಳವಡಿಕೆಗೆ ಕ್ರಮ ಕೈಗೊಳ್ಳಲಾಗಿದೆ. ಹಿಂದೆ ಪ್ರತಿ ವರ್ಷವೂ ಸಂಭವಿಸುತ್ತಿದ್ದ ಐದಾರು ಆನೆ ಹಾಗೂ ಮಾನವರ ಸಾವುಗಳನ್ನು ಸದ್ಯ ಒಂದೆರಡಕ್ಕೆ ನಿಯಂತ್ರಿಸಲಾಗಿದೆ. ಇದನ್ನು ಸಂಪೂರ್ಣ ತಪ್ಪಿಸಬೇಕಾಗಿದೆ. ದೇಶದ 49 ಸಾವಿರ ಆನೆಗಳಲ್ಲಿ ರಾಜ್ಯದಲ್ಲಿ 6 ಸಾವಿರವಿದ್ದರೆ ಬಂಡೀಪುರದಲ್ಲಿ 1,200 ಆನೆಗಳಿವೆ ಎಂದು ತಿಳಿಸಿದರು.

ಮೈಸೂರು ಎಸ್‌ಪಿ ಚೇತನ್ ಕುಮಾರ್, ಚಾಮರಾಜನಗರ ಎಸ್‌ಪಿ ಶಿವಕುಮಾರ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಕಾವಾಡಿ ಮಾವುತರಿಗೆ ಸಮವಸ್ತ್ರ ಹಾಗೂ ಅರಣ್ಯ ಸಂರಕ್ಷಣೆಯಲ್ಲಿ ಶ್ರಮಿಸುತ್ತಿರುವ ಎಸ್‌ಟಿಪಿಎಫ್ ಸಿಬ್ಬಂದಿಗೆ ಪ್ರಸಂಶನಾ ಪತ್ರ ವಿತರಿಸಲಾಯಿತು. ಆನೆಗಳ ಚಿಕಿತ್ಸಾ ಶಿಬಿರ ಉದ್ಘಾಟಿಸಲಾಯಿತು. ಇದೇ ಸಂದರ್ಭದಲ್ಲಿ ಮಾವುತ ಕಾವಾಡಿ ಹಾಗೂ ಅರಣ್ಯ ಸಿಬ್ಬಂದಿಗೆ ಬಾವುಟಗಳನ್ನು ವಿತರಿಸಲಾಯಿತು.

ಸುಬ್ಬಣ್ಣರಿಗೆ ಶ್ರದ್ಧಾಂಜಲಿ

ಕೊಳ್ಳೇಗಾಲ, ಆ.12–ಅಗಲಿದ ಖ್ಯಾತ ಗಾಯಕರು, ರಾಜ್ಯ ಪ್ರಶಸ್ತಿ ಪುರಸ್ಕೃತ ಶಿವಮೊಗ್ಗ ಸುಬ್ಬಣ್ಣರಿಗೆ ನಗರದ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಹಾಗೂ ಜೆಎಸ್‌ಎಸ್ ಮಹಿಳಾ ಕಾಲೇಜಿನಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಹಾಡುಗಳ ಮೂಲಕ ಕಲಾವಿದ ಮಾಂಬಳ್ಳಿ ಅರುಣ್ ನಮನ ಸಲ್ಲಿಸಿದರು. ಈ ವೇಳೆ ಪ್ರಾಂಶುಪಾಲ ಮೂಕಳ್ಳಿ ಮಹದೇವಸ್ವಾಮಿ, ವಿದ್ಯಾರ್ಥಿಗಳಿದ್ದರು.

ಕಾರ್ಮಿಕರಿದ್ದ ಪಿಕ್‌ಅಪ್ ವಾಹನ ಪಲ್ಟಿ ಓರ್ವ ಸಾವು, 7 ಮಂದಿಗೆ ಗಾಯ



ಚಾಮರಾಜನಗರ, ಆ.12–ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಪಿಕ್‌ಅಪ್ ವಾಹನ ಪಲ್ಟಿಯಾಗಿ ಓರ್ವ ಮೃತಪಟ್ಟಿದ್ದು, ಚಾಲಕ ಸೇರಿ ಏಳು ಮಂದಿ ಗಾಯಗೊಂಡಿರುವ ಘಟನೆ ಬಾಣಹಳ್ಳಿ ಹಾಗೂ ಕಮರವಾಡಿ ಗೇಟ್ ನಡುವೆ ಸಂಜೆ ನಡೆದಿದೆ.

ಯಳಂದೂರು ತಾಲೂಕಿನ ಹೊನ್ನೂರು ಗ್ರಾಮದ ಪ್ರಕಾಶ್ (43) ಮೃತಪಟ್ಟವರು. ಮೈಸೂರಿನಲ್ಲಿ ಗಾರೆ ಕೆಲಸ ಮುಗಿಸಿಕೊಂಡು ಹೊನ್ನೂರು ಗ್ರಾಮದ ಕಾರ್ಮಿಕರನ್ನು ಪಿಕ್ ಅಪ್ ವಾಹನದಲ್ಲಿ ಗ್ರಾಮಕ್ಕೆ ಕರೆತರಲಾಗುತ್ತಿತ್ತು. ತಾಲೂಕಿನ ಸಂತೇಮರಳ್ಳಿ ಬಳಿಯ ಬಾಣಹಳ್ಳಿ ಹಾಗೂ ಕಮರವಾಡಿ ಗೇಟ್ ನಡುವೆ ಚಾಲಕನ ನಿಯಂತ್ರಣ ತಪ್ಪಿ ವಾಹನ ಪಲ್ಟಿಯಾಗಿದೆ. ಪರಿಣಾಮ ಚಾಲಕ ಸೇರಿ ಕಾರ್ಮಿಕರೆಲ್ಲರೂ ಗಾಯಗೊಂಡರು.

ಗಾಯಾಳುಗಳನ್ನು ತಕ್ಷಣವೇ ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತು. ಕಾರ್ಮಿಕ ಪ್ರಕಾಶ್ ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದು, ಉಳಿದ ಗಾಯಾಳುಗಳು ಜಿಲ್ಲಾಸ್ಪತ್ರೆಗೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಾಲಕನಿಗೆ ಸಣ್ಣ–ಪುಟ್ಟ ಗಾಯಗಳಾಗಿವೆ. ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ ಸಂತೇಮರಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ

ಮೈಸೂರಲ್ಲಿ ಸಾವಿರಾರು ವಿದ್ಯಾರ್ಥಿಗಳಿಂದ ಧ್ವಜ ಉತ್ಸವ



● ದೇಶಭಕ್ತಿ ಮೆರೆದ ವಿದ್ಯಾರ್ಥಿಗಳು ● ವರ್ಣರಂಜಿತ ಮೆರವಣಿಗೆಗೆ ದಸರಾ ಗಜಪಡೆ ಸದಸ್ಯರ ಮೆರಗು ● ಎಲ್ಲೆಲ್ಲೂ ರಾರಾಜಿಸಿದ ರಾಷ್ಟ್ರಧ್ವಜಗಳು





ಮೈಸೂರು,ಆ.12(ಎಂಟಿವೈ)– ಸ್ವಾತಂತ್ರ್ಯ ದಿನ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಸಾವಿರಾರು ವಿದ್ಯಾರ್ಥಿಗಳು ತ್ರಿವರ್ಣ ಧ್ವಜ ಹಿಡಿದು ಪ್ರಭಾತ್ ಪೇರಿ ನಡೆಸುವ ಮೂಲಕ ದೇಶ ಭಕ್ತಿ ಸಾರಿದರು.

ಮೈಸೂರಿನ ಕೆ.ಆರ್.ಕ್ಷೇತ್ರದಲ್ಲಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಅಮೃತ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ಶುಕ್ರವಾರ ಮೈಸೂರು ಅರಮನೆ ಆವರಣದಿಂದ ಆರಂಭವಾದ ಬೃಹತ್ ಪ್ರಭಾತ್ ಪೇರಿ(ಮೆರವಣಿಗೆ)ಯಲ್ಲಿ ಕೆ.ಆರ್.ಕ್ಷೇತ್ರದ ಸರ್ಕಾರಿ ಹಾಗೂ ಖಾಸಗಿ ಶಾಲಾ–ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳು ಪಾಲ್ಗೊಂಡು ತ್ರಿವರ್ಣ ಧ್ವಜ ಹಿಡಿದು ಸಾಗುವ ಮೂಲಕ ದೇಶಭಕ್ತಿ ಮೆರೆದರು.

ಇಂದು ಬೆಳಗ್ಗೆ ಪ್ರಭಾತ್ ಪೇರಿಗೆ ಸ್ವಾತಂತ್ರ್ಯ ಹೋರಾಟಗಾರರಾದ ಪುಟ್ಟಣ್ಣ ಹಾಗೂ ಬಿ.ಲಿಂಗಯ್ಯ ತ್ರಿವರ್ಣ ಧ್ವಜ



ಪ್ರದರ್ಶಿಸುವ ಮೂಲಕ ಚಾಲನೆ ನೀಡಿ, ಶುಭ ಕೋರಿದರು. ಶಾಸಕ ಎಸ್.ಎ. ರಾಮದಾಸ್ ಉಪಸ್ಥಿತರಿದ್ದರು. ಬಳಿಕ ವರಹಾ ದ್ವಾರದಿಂದ ತ್ರಿವರ್ಣ ಧ್ವಜ ಹಿಡಿದು ಸಾಲಾಗಿ ಬಂದ ವಿದ್ಯಾರ್ಥಿ ಸಮೂಹ ನೆರೆದಿದ್ದವರ ಕಣ್ಮನ ಸೆಳೆಯಿತು.

ದಸರಾ ಗಜಪಡೆಯೂ ಭಾಗಿ: ಅರಮನೆ ಪ್ರಾಂಗಣದ ಮುಂಭಾಗ ನೆರೆದಿದ್ದ ಸಾವಿರಾರು ವಿದ್ಯಾರ್ಥಿಗಳು ದಸರಾ ಗಜಪಡೆಯ ಮಾಜಿ ನಾಯಕ ಅರ್ಜುನ, ಕುಮ್ಕಿ ಆನೆಗಳಾದ ಲಕ್ಷ್ಮೀ ಮತ್ತು ಚೈತ್ರ ಸಮ್ಮುಖದಲ್ಲಿ ಸಂಭ್ರಮಿಸಿದರು. ಅರಮನೆ ಹೆಬ್ಬಾಗಿಲಲ್ಲಿ ಮೂರು ಆನೆಗಳಿಗೂ ಸಾಂಪ್ರದಾಯಿಕವಾಗಿ ಅರ್ಚಕ ಎಸ್.ವಿ.ಪ್ರಹ್ಲಾದ ರಾವ್ ಪೂಜೆ ಸಲ್ಲಿಸಿದರು. ಈ ವೇಳೆ ಶಾಸಕ ಎಸ್.ಎ. ರಾಮದಾಸ್ ಪುಷ್ಪನಮನ ಸಲ್ಲಿಸಿದರು. ಕೆಲ ಹೊತ್ತು ಮಕ್ಕಳ ಬಳಿ ನಿಂತಿದ್ದ ದಸರಾ ಆನೆಗಳು ನಂತರ ವಿದ್ಯಾರ್ಥಿ ಸಮೂಹದ ನಡುವೆ ರಾಜಗಾಂಭೀರ್ಯದಿಂದ ಶೆಡ್‌ನತ್ತ ಹೆಜ್ಜೆ ಹಾಕಿದವು. ಈ ವೇಳೆ ವಿದ್ಯಾರ್ಥಿಗಳು ಗಜಪಡೆಗೆ ಜೈಕಾರ ಹಾಕಿದರು.

ಭವ್ಯ ಮೆರವಣಿಗೆ: ವರಹಾ ದ್ವಾರದಿಂದ ಹೊರ ಬಂದ ವಿದ್ಯಾರ್ಥಿಗಳು ಗನ್‌ಹೌಸ್, ಜೆಎಸ್‌ಎಸ್ ವಿದ್ಯಾಪೀಠ, ರಾಮಾನುಜ ರಸ್ತೆ, ಅಗ್ರಹಾರ ವೃತ್ತ, ಸಿದ್ದಪ್ಪ ವೃತ್ತ, ನಾರಾಯಣಶಾಸ್ತ್ರಿ ರಸ್ತೆ, ಚಾಮುಂಡಿಪುರಂ ವೃತ್ತದ ಮೂಲಕ ವಿದ್ಯಾರಣ್ಯಪುರಂನಲ್ಲಿರುವ ಭೂತಾಳೆ ಮೈದಾನ ತಲುಪಿತು. ತ್ರಿವರ್ಣ ಧ್ವಜ ಹಿಡಿದ ವಿದ್ಯಾರ್ಥಿಗಳು ಹಾಗೂ ಮೆರವಣಿಗೆ ಮಧ್ಯೆ 120 ಅಡಿ ಉದ್ದದ ತ್ರಿವರ್ಣ ಧ್ವಜ ಹಿಡಿದಿದ್ದ ವಿದ್ಯಾರ್ಥಿಗಳ ಸಾಲು ನೋಡಗರ ಮನಸೂರೆಗೊಂಡಿತು. ದಾರಿಯುದ್ದಕ್ಕೂ ಭಾರತಾಂಬೆಗೆ ಜೈಕಾರ ಹಾಕುತ್ತಾ ಸಾಗಿದ ವಿದ್ಯಾರ್ಥಿಗಳು ಸ್ವಾತಂತ್ರ್ಯೋತ್ಸವ ಅಮೃತ ಘಳಿಗೆಗೆ ಮೆರಗು ನೀಡಿದರು. ಕಿಲೋಮೀಟರ್ ಉದ್ದವಿದ್ದ ಮೆರವಣಿಗೆ ಮಾರ್ಗದುದ್ದಕ್ಕೂ ದೇಶಭಕ್ತಿ ಸಂದೇಶ ರವಾನಿಸಿದರು. ಮಧ್ಯೆ ಮಧ್ಯೆ ದೇಶಭಕ್ತಿ ಗೀತೆ ಗುನುಗುವ ಮೂಲಕ ಮೆರಗು ನೀಡಿದರು.

ಮೆರವಣಿಗೆಯಲ್ಲಿ ಸಚಿವರು: ಪ್ರಭಾತ್ ಪೇರಿಯಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ್ದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ನಾಗೇಶ್ ಚಾಮುಂಡಿಪುರಂ ವೃತ್ತದಿಂದ ವಿದ್ಯಾರ್ಥಿಗಳೊಂದಿಗೆ ಮೆರವಣಿಗೆಯಲ್ಲಿ ಸಾಗಿದರು.

ಮಾದರಿ ಕ್ಷೇತ್ರ: ಭೂತಾಳೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ನಾಗೇಶ್ ಮಾತನಾಡಿ, ರಾಜ್ಯದ 224 ಕ್ಷೇತ್ರಗಳಲ್ಲಿ ಮಾಡದಂತಹ ಕಾರ್ಯಕ್ರಮವನ್ನು ಶಾಸಕ ಎಸ್.ಎ.ರಾಮದಾಸ್ ತಮ್ಮ ಕೆ.ಆರ್.ಕ್ಷೇತ್ರದಲ್ಲಿ ಮಾಡಿದ್ದಾರೆ. ಸಾವಿರಾರು ವಿದ್ಯಾರ್ಥಿಗಳು ಏಕಕಾಲಕ್ಕೆ ತ್ರಿವರ್ಣ ಧ್ವಜ ಹಿಡಿದು ಮೆರವಣಿಗೆಯಲ್ಲಿ ಸಾಗಿದ್ದು ನೋಡುವುದೇ ಆನಂದ. ದೇಶ ಪ್ರೇಮ ಕಡಿಮೆಯಾಗುತ್ತಿರುವ ಆತಂಕ ಎದುರಾಗಿರುವ ಸಂದರ್ಭದಲ್ಲಿ ಸಾವಿರಾರು ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ತ್ರಿವರ್ಣ ಧ್ವಜದೊಂದಿಗೆ ಮೆರವಣಿಗೆಯಲ್ಲಿ ಕರೆದೊಯ್ದು ಪರಿಣಾಮಕಾರಿಯಾಗಿ ದೇಶಭಕ್ತಿ ಮೂಡಿಸುವ ಕಾರ್ಯ ನಡೆಸಿದ್ದಾರೆ. ಸದಾ ಕ್ರಿಯಾಶೀಲತೆಯನ್ನು ವಿಭಿನ್ನ ಕಾರ್ಯ ಕ್ರಮ ಆಯೋಜಿಸುವ ಮೂಲಕ ಗಮನ ಸೆಳೆದಿದ್ದಾರೆ. ದೇಶಭಕ್ತಿ ಮೂಡಿಸುವ ಕಾರ್ಯಕ್ರಮಗಳು ಹೆಚ್ಚಾಗಿ ಆಯೋಜಿಸಬೇಕು ಎಂದು ಸಲಹೆ ನೀಡಿದರು.

ವಿವಿಧ ಕಾರ್ಯಕ್ರಮಗಳು: ಶಾಸಕ ಎಸ್.ಎ. ರಾಮದಾಸ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷದ ಸಂಭ್ರಮಾಚರಣೆಯಲ್ಲಿ ದೇಶದ ಜನತೆ ಇದ್ದಾರೆ. ದೇಶದಾದ್ಯಂತ ಅಮೃತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಕೆ.ಆರ್. ಕ್ಷೇತ್ರದಲ್ಲಿ ಆ.8ರಿಂದ ಅಮೃತ ಸಪ್ತಾಹ ಆಯೋಜಿಸುವ ಮೂಲಕ ವಿವಿಧ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈಗಾಗಲೇ ವಿವಿಧ ಕಾರ್ಯಕ್ರಮಗಳ ಮೂಲಕ ಅಮೃತ ಮಹೋತ್ಸವವನ್ನು ಅರ್ಥಪೂರ್ಣ ವಾಗಿ ಆಚರಿಸಲಾಗುತ್ತಿದೆ ಅದರ ಒಂದು ಭಾಗವಾಗಿ ಇಂದು ಪ್ರಭಾತ್ ಪೇರಿ ಆಯೋಜಿಸಲಾಗಿದೆ. ನಿರೀಕ್ಷೆಗೂ ಮೀರಿದ ಯಶಸ್ಸು ಕಂಡಿದೆ. ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ತ್ರಿವರ್ಣ ಧ್ವಜ ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದಾರೆ. ವಿವಿಧ ಸ್ಪರ್ಧೆಯನ್ನು ನಡೆಸಲಾಗುತ್ತಿದೆ. ಆ.14ರಂದು ಕೆ.ಆರ್. ಕ್ಷೇತ್ರದ ಯುವಜನರಿಂದ ಬೈಕ್ ಜಾಥಾ ನಡೆಸಲಾ ಗುತ್ತಿದೆ ಎಂದು ವಿವರಿಸಿದರು. ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಸದಸ್ಯರಾದ ಬಿ.ವಿ.ಮಂಜು ನಾಥ್, ರೂಪ ಯೋಗೇಶ್, ಚಂಪಕ, ಶಾರದಮ್ಮ, ಶಾಂತಮ್ಮ, ಗೀತಾಶ್ರೀ, ಮುಖಂಡರಾದ ವಡಿವೇಲು, ಶ್ರೀನಿವಾಸ್, ನಾಗೇಂದ್ರ ಪ್ರಸಾದ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಬಿಜೆಪಿಯಿಂದ ಹರ್ ಘರ್ ತಿರಂಗಾ ಯಾತ್ರೆ



ಮೈಸೂರು, ಆ. 12(ಆರ್‌ಕೆ)– ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮನೆ ಮನೆಗಳಲ್ಲಿ ರಾಷ್ಟ್ರಧ್ವಜ ಹಾರಿಸುವಂತೆ ಬಿಜೆಪಿ ಕಾರ್ಯಕರ್ತರು ಮೈಸೂರಲ್ಲಿ ಎತ್ತಿನಗಾಡಿ ಮತ್ತು ಬೈಕ್ ರ್ಯಾಲಿ ನಡೆಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರು.


ಎತ್ತಿನಗಾಡಿ, ಬೈಕ್ ರ್ಯಾಲಿ ಮೂಲಕ ಜನಜಾಗೃತಿ

ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ನೇತೃತ್ವದಲ್ಲಿ ಶಾಸಕ ಎಲ್. ನಾಗೇಂದ್ರ, ಮೇಯರ್ ಸುನಂದಾ ಪಾಲನೇತ್ರ, ಮುಖಂಡರಾದ ಎಂ. ರಾಜೇಂದ್ರ, ಶಿವಕುಮಾರ್, ಮೈವಿ. ರವಿಶಂಕರ್ ಸೇರಿದಂತೆ ಹಲವರು ಬಿಜೆಪಿ ಕಚೇರಿಯಿಂದ ಬೈಕ್ ರ್ಯಾಲಿ ನಡೆಸಿ ರಾಷ್ಟ್ರಧ್ವಜ ಹಿಡಿದು ಅರಿವು ಮೂಡಿಸಿದರು. ಆರ್‌ಟಿಓ ಕಚೇರಿ, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ರೈಲ್ವೇ ಸ್ಟೇಷನ್ ಸರ್ಕಲ್, ಇರ್ವಿನ್ ರಸ್ತೆ, ಅಶೋಕ ರಸ್ತೆ, ಕಾಡಾ ಕಚೇರಿ ಮೂಲಕ ಚಾಮರಾಜ ಜೋಡಿ ರಸ್ತೆಯಲ್ಲಿ ಸಾಗಿದ ಬೈಕ್ ರ್ಯಾಲಿಯು ಮರಳಿ ಬಿಜೆಪಿ ಕಚೇರಿ ಬಳಿ ಅಂತ್ಯಗೊಂಡಿತು.

ಎತ್ತಿನಗಾಡಿ ರ್ಯಾಲಿ: ಬಿಜೆಪಿ ರೈತ ಮೋರ್ಚಾ ಮೈಸೂರು ನಗರಾಧ್ಯಕ್ಷ ಕೆ. ದೇವರಾಜು ನೇತೃತ್ವದ ಕಾರ್ಯಕರ್ತರು ಎಫ್‌ಟಿಎಸ್ ಸರ್ಕಲ್‌ನಿಂದ 10 ಎತ್ತಿನಗಾಡಿಗಳಲ್ಲಿ ರ್ಯಾಲಿ ನಡೆಸಿ ತಿರಂಗಾ ಯಾತ್ರೆ ಕೈಗೊಂಡಿದ್ದರು. ವೀರನಗೆರೆ, ಅಶೋಕ ರಸ್ತೆ, ಮಂಡಿಮೊಹಲ್ಲಾ, ಮಿಷನ್ ಆಸ್ಪತ್ರೆ ರಸ್ತೆ, ಫೌಂಟೇನ್ ಸರ್ಕಲ್ ಮೂಲಕ ಎಫ್‌ಟಿಎಸ್ ಸರ್ಕಲ್‌ವರೆಗೆ ಎತ್ತಿನಗಾಡಿ ರ್ಯಾಲಿ ನಡೆಸಿದ ಕಾರ್ಯಕರ್ತರು ರಾಷ್ಟ್ರಧ್ವಜಗಳನ್ನು ಪ್ರತೀ ಮನೆಗಳಲ್ಲಿ ಹಾರಿಸುವಂತೆ ಅರಿವು ಮೂಡಿಸಿದರು. ಮೇಯರ್ ಸುನಂದಾ ಪಾಲನೇತ್ರ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ. ಶಿವಕುಮಾರ್, ಕಾರ್ಪೊರೇಟರ್ ಅಶ್ವಿನಿ ಶರತ್ ಸೇರಿದಂತೆ ಹಲವರು ಎತ್ತಿನಗಾಡಿ ರ್ಯಾಲಿಯಲ್ಲಿ ಭಾಗವಹಿಸಿದ್ದರು.

ಬೀದಿ ನಾಟಕ: ಮೈಸೂರು ಮಹಾನಗರಪಾಲಿಕೆಯಿಂದ ಮೈಸೂರಿನ ರಾಮಸ್ವಾಮಿ ಸರ್ಕಲ್‌ನಲ್ಲಿ ಇಂದು 75ನೇ ವರ್ಷದ ಸ್ವಾತಂತ್ರ್ಯೋತ್ಸವದ ಅಂಗವಾಗಿ ತಿರಂಗಾ ಕಾರ್ಯಕ್ರಮದ ಬಗ್ಗೆ ಬೀದಿ ನಾಟಕ ಪ್ರದರ್ಶಿಸುವ ಮೂಲಕ ಜನಜಾಗೃತಿ ಮೂಡಿಸಲಾಯಿತು. ಶಾಸಕ ಎಲ್. ನಾಗೇಂದ್ರ, ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಉಪ ಆಯುಕ್ತರಾದ ಎಂ.ಜೆ. ರೂಪಾ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಹರ್ ಘರ್ ತಿರಂಗಾ ಅಭಿಯಾನ ಯಶಸ್ವಿಗೆ ಸಂದೇಶ್ ಸ್ವಾಮಿ ಮನವಿ




ಮೈಸೂರು, ಆ. 12– ದೇಶದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಹರ್ ಘರ್ ತಿರಂಗಾ ಅಭಿಯಾನದಂತೆ ನಾಳೆ (ಆ. 13)ಯಿಂದ ಆ. 15ರವರೆಗೆ ಪ್ರತೀ ಮನೆಯಲ್ಲೂ ತ್ರಿವರ್ಣ ಧ್ವಜ ಹಾರಿಸಿ ಗೌರವಿಸಬೇಕು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ. ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಪ್ರತಿಯೊಬ್ಬ ಭಾರತೀಯನ ಮನದಲ್ಲೂ ರಾಷ್ಟ್ರಪ್ರೇಮ ಸುಪ್ತವಾಗಿದೆ. ಅದು ಜಾಗೃತಗೊಳ್ಳುವುದರ ಜೊತೆಗೆ ವಿಶೇಷ ಸಂದರ್ಭದಲ್ಲಿ ಅಭಿವ್ಯಕ್ತಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಹರ್ ಘರ್ ತಿರಂಗಾ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಎಂದಿದ್ದಾರೆ. ಎಲ್ಲಾ ಸಮುದಾಯದವರು ಇರುವ ನರಸಿಂಹರಾಜ ಕ್ಷೇತ್ರದಲ್ಲೂ ಅಭಿಯಾನ ಯಶಸ್ವಿಯಾಗಬೇಕು. ಪ್ರತಿಯೊಂದು ಮನೆಯಲ್ಲೂ ರಾಷ್ಟ್ರಧ್ವಜ ರಾರಾಜಿಸಬೇಕು. ಇದಕ್ಕೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಅಮೆರಿಕದಲ್ಲಿ ವೇದಿಕೆಯಲ್ಲೇ ಸಲ್ಮಾನ್ ರಶ್ದಿಗೆ ಇರಿತ

ಷಟೌಕ್ವಾ (ಅಮೆರಿಕ): ಪಶ್ಚಿಮ ನ್ಯೂಯಾರ್ಕ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಖ್ಯಾತ ಲೇಖಕ ಸಲ್ಮಾನ್ ರಶ್ದಿ ಅವರ ಮೇಲೆ ಅಪರಿಚಿತ ವ್ಯಕ್ತಿಯೊಬ್ಬ ಹಲ್ಲೆ ಮಾಡಿದ್ದಾನೆ. ಷಟೌಕ್ವಾ ಇನ್‌ಸ್ಟಿಟ್ಯೂಟ್‌ನ ವೇದಿಕೆಯ ಮೇಲೆ ಆಯೋಜಕರು ರಶ್ದಿ ಅವರನ್ನು ಭಾಷಣಕ್ಕೆ ಆಹ್ವಾನಿಸುತ್ತಿದ್ದಂತೆಯೇ ಅಪರಿಚಿತ ವ್ಯಕ್ತಿ ರಶ್ದಿ ಅವರಿಗೆ ಚಾಕುವಿನಿಂದ ಇರಿದಿದ್ದಾನೆ. ತಕ್ಷಣವೇ ರಶ್ದಿ ಕುಸಿದುಬಿದ್ದರು. ಹಲ್ಲೆಕೋರನನ್ನು ಬಂಧಿಸಲಾಗಿದೆ. ರಶ್ದಿ ಅವರ ಸ್ಥಿತಿಯ ಬಗ್ಗೆ ತಕ್ಷಣಕ್ಕೆ ಯಾವುದೇ ವಿವರಗಳು ತಿಳಿದುಬಂದಿಲ್ಲ. ಸಲ್ಮಾನ್ ರಶ್ದಿ ಅವರು ಬರೆದಿರುವ 'ದ ಸಟಾನಿಕ್ ವರ್ಸಸ್' ಕೃತಿಯು 1988ರಲ್ಲಿ ಇರಾನ್‌ನಲ್ಲಿ ನಿಷೇಧಕ್ಕೊಳಗಾಗಿದೆ. ಹಲವು ಮುಸ್ಲಿಮರು ಈ ಕೃತಿಯಲ್ಲಿ ಧರ್ಮನಿಂದನೆಯ ಅಂಶಗಳಿವೆ ಎಂದು ಆರೋಪಿಸಿದ್ದರು. ರಶ್ದಿ ಅವರ ಹತ್ಯೆಗೆ ಆಗ ಫತ್ವಾ ಹೊರಡಿಸಲಾಗಿತ್ತು.

ರಾಜಕಾರಣದಲ್ಲಿ ಯಾರೂ ಸಾಚಾ ಅಲ್ಲ...!

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಟೀಕಿಸಿದ ಉನ್ನತ ಶಿಕ್ಷಣ ಸಚಿವ ಡಾ॥ ಅಶ್ವತ್ಥ ನಾರಾಯಣರಿಗೆ ಶಾಸಕ ಸಾ.ರಾ.ಮಹೇಶ್ 'ರಾಜಕೀಯ ಪಾಠ' ● ಕುಮಾರಸ್ವಾಮಿಯವರು ಸಿಎಂ ಆಗಿದ್ದಾಗ ಮನೆ ದೂರವಿದ್ದರಿಂದ ಹೋಟೆಲ್‌ನಲ್ಲಿ ತಂಗುವ ಅನಿವಾರ್ಯತೆ ಇತ್ತು: ಸಮರ್ಥನೆ



ಮೈಸೂರು,ಆ.12(ಎಂಟಿವೈ)– ಅಧಿಕಾರಕ್ಕೇರಲು ಬೇರೆ ಬೇರೆ ಪಕ್ಷದಿಂದ ನಾಯಕರನ್ನು ಆಪರೇಷನ್ ಕಮಲದ ಮೂಲಕ ಪಡೆದುಕೊಂಡಿರುವ ಬಿಜೆಪಿ ಈಗ ಸತ್ವ ಕಳೆದುಕೊಂಡಿದೆ. ಸಚಿವ ಅಶ್ವಥ್‌ನಾರಾಯಣ್ ಸೇರಿದಂತೆ ಹೊರಗಿನಿಂದ ಬಂದಿರುವ ನಾಯಕರಿಗೆ ಸಂಸ್ಕಾರ ಕಲಿಸುವುದಕ್ಕೆ ಮುಂದಾಗಲಿ ಎಂದು ಶಾಸಕ ಸಾ.ರಾ.ಮಹೇಶ್ ಕಿಡಿಕಾರಿದ್ದಾರೆ.

> “ಮೈತ್ರಿ ಸರ್ಕಾರ ಬೀಳಲು ಕಾಂಗ್ರೆಸ್ ನಾಯಕರು ಎಷ್ಟು ಕಾರಣವೋ ನಿಮ್ಮದೂ ಅಷ್ಟೇ ಪಾತ್ರವಿದೆ. ರಾಜಕಾರಣದಲ್ಲಿ ಯಾರೂ ನೂರಕ್ಕೆ ನೂರು ಸರಿ ಇಲ್ಲ. ನನ್ನನ್ನೂ ಸೇರಿದಂತೆ ಯಾರೂ ಸರಿಯಿಲ್ಲ. ಕುಮಾರಸ್ವಾಮಿ ಏನು, ಡಾ॥ ಅಶ್ವತ್ಥ ನಾರಾಯಣ ಏನು ಎನ್ನುವುದು ರಾಜ್ಯದ ಜನರಿಗೆ ಗೊತ್ತಿದೆ. ಎರಡೂ ರಾಷ್ಟ್ರೀಯ ಪಕ್ಷದವರು ಪ್ರಾದೇಶಿಕ ಪಕ್ಷ ಇರಬಾರದು ಎಂದು ಏನೇನು ಮಾಡಿದ್ದೀರಿ ಎನ್ನುವುದೂ ಗೊತ್ತಿದೆ ಎಂದರು.
> -ಶಾಸಕ ಸಾ.ರಾ.ಮಹೇಶ್

ಮೈಸೂರಿನ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ವಿಶ್ವವಿದ್ಯಾನಿಲಯದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ್, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಟೀಕಿಸುವ ಭರದಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ಕುಮಾರಸ್ವಾಮಿ ಅವರು ಹೋಟೆಲ್‌ನಲ್ಲಿದ್ದುಕೊಂಡು ಆಡಳಿತ ನಡೆಸಿದರು ಎಂದು ಹೇಳಿಕೆ ನೀಡಿದ್ದಾರೆ. ಇದು ಖಂಡನೀಯ. ಸಮ್ಮಿಶ್ರ ಸರ್ಕಾರ ಪತನಕ್ಕಾಗಿ ಆಪರೇಷನ್ ಕಮಲದ ಮೂಲಕ ಕಾಂಗ್ರೆಸ್, ಜೆಡಿಎಸ್ ಶಾಸಕರನ್ನು ಮುಂಬೈಗೆ ಕರೆದುಕೊಂಡು ಹೋಗಿದ್ದ ವೇಳೆ ನೀವೇನು ಗುಡಿಸಿಲಿನಲ್ಲಿ ವಾಸ್ತವ್ಯ ಹೂಡಿದ್ದರೇನು? ಎಂದು ಖಾರವಾಗಿ ಪ್ರಶ್ನಿಸಿದ ಅವರು, ರಾಜಕಾರಣದಲ್ಲಿ ಟೀಕೆ ಮಾಡುವುದು ಸಾಮಾನ್ಯ ಆದರೆ ಅನಗತ್ಯ ವಿಷಯಗಳನ್ನು ಟೀಕೆ ಮಾಡುವುದು ಒಳ್ಳೆ ಬೆಳವಣಿಗೆಯಲ್ಲ. ನಿಮ್ಮ ಟೀಕೆಗೆ ಪ್ರತಿಯಾಗಿ ಉತ್ತರ ಕೊಡುವ ಜನರು ಜೆಡಿಎಸ್‌ನಲ್ಲಿದ್ದಾರೆ. ಆದರೆ, ವರಿಷ್ಠರ ಸೂಚನೆ ಮೇರೆಗೆ ಎಲ್ಲೆ ಮೀರದಂತೆ ಎಲ್ಲರೂ ಸುಮ್ಮನಿದ್ದೇವೆ ಎಂದರು.

ಸಮ್ಮಿಶ್ರ ಸರ್ಕಾರದಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಸಿಎಂ ಅಧಿಕೃತ ನಿವಾಸ ಖಾಲಿ ಇರಲಿಲ್ಲ. ಹಾಗಾಗಿ ಕುಮಾರಸ್ವಾಮಿ ಮಧ್ಯಾಹ್ನದ ವೇಳೆ ವಿಧಾನಸೌಧಕ್ಕೆ ಸನಿಹದಲ್ಲಿದ್ದ ಖಾಸಗಿ ಹೋಟೆಲ್‌ನಲ್ಲಿ ಊಟಕ್ಕೆ ತೆರಳಿ ವಿಶ್ರಾಂತಿ ಪಡೆಯುತ್ತಿದ್ದರು. ಆಡಳಿತದ ಹಿತ ದೃಷ್ಟಿಯಿಂದ ಕುಮಾರಸ್ವಾಮಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡುತ್ತಿದ್ದರು. ಆದರೆ, ಇದೇ ವಿಚಾರ ಮುಂದಿಟ್ಟುಕೊಂಡು ಸಚಿವ ಡಾ॥ ಅಶ್ವಥ್ ನಾರಾಯಣ್ ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಹಾಗಾದರೆ ನಿಮ್ಮ ಪಕ್ಷದ ಮುಖಂಡರುಗಳೇನು ಗುಡಿಸಲಿನಲ್ಲಿ ಇದ್ದಾರಾ? ಎಂದು ಪ್ರಶ್ನಿಸಿದರು.

ಡಾ. ಅಶ್ವಥ್ ನಾರಾಯಣ್ ನನಗೆ ಒಳ್ಳೆಯ ಸ್ನೇಹಿತ. ನಾನೂ ಬಿಜೆಪಿಯಲ್ಲಿ ಇದ್ದವನು. ರಾಜ್ಯ, ರಾಷ್ಟ್ರೀಯ ನಾಯಕರು ಬಂದರೂ ಕಾರ್ಯಕರ್ತನ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದರು. ನಮ್ಮದು ಸಮ್ಮಿಶ್ರ ಸರ್ಕಾರ ಇತ್ತು. ಆಗಿನ ಮಾಜಿ ಮುಖ್ಯಮಂತ್ರಿ ಮನೆ ಖಾಲಿ ಮಾಡಿರಲಿಲ್ಲ. ಕುಮಾರಸ್ವಾಮಿ ಅವರ ಮನೆ ಜೆ.ಪಿ.ನಗರದಲ್ಲಿದೆ. ಆದ್ದರಿಂದ ಕುಮಾರಸ್ವಾಮಿ ಹೋಟೆಲ್ ನಲ್ಲಿದ್ದರು. ಡಾ. ಅಶ್ವತ್ಥ ನಾರಾಯಣ್ ಈ ಹಿಂದೆ ಡಿ.ಕೆ.ಶಿವಕುಮಾರ್ ಹಾಗೂ ಅವರ ಸಹೋದರರ ವಿರುದ್ಧ ಮಾತನಾಡಿದ್ದಾಗ ನಾನು ಅವರಿಗೆ ಕರೆ ಮಾಡಿ ಈ ರೀತಿ ಮಾತನಾಡದಂತೆ ತಿಳಿಸಿದ್ದೆ. ಈಗಲೂ ಅವರೊಂದಿಗೆ ಮಾತನಾಡುತ್ತೇನೆ ಎಂದರು.

ಟೀಕೆ ಮಾಡಿ ಒಕ್ಕಲಿಗರ ಲೀಡರ್ ಆಗುವ ಆಸೆ: ಒಕ್ಕಲಿಗ ಸಮಾಜದ ದೊಡ್ಡ ಲೀಡರ್ ಆಗಬೇಕೆಂದುಕೊಂಡು ಸಚಿವ ಡಾ.ಅಶ್ವಥ್ ನಾರಾಯಣ್ ಅವರು ಕುಮಾರಸ್ವಾಮಿ ವಿರುದ್ಧ ಹೇಳಿಕೆ ನೀಡುತ್ತಿದ್ದಾರೆ. ಆದರೆ ಇದು ಸಾಧ್ಯವಾಗುವುದಿಲ್ಲ. ಕುಮಾರಸ್ವಾಮಿ ಒಕ್ಕಲಿಗ ಸಮುದಾಯ ಮಾತ್ರವಲ್ಲದೇ ಎಲ್ಲಾ ಸಮುದಾಯಗಳಿಗೂ ನಾಯಕ. ಕುಮಾರಸ್ವಾಮಿ ಟೀಕಿಸಿದರೆ ದೊಡ್ಡ ನಾಯಕನಾಗುತ್ತೇನೆ. ಸಚಿವ ಆರ್.ಅಶೋಕ್ ಅವರನ್ನು ಓವರ್‌ಟೇಕ್ ಮಾಡಿ ನಾಯಕನಾಗುವ ಭ್ರಮೆಯಲ್ಲಿದ್ದಾರೆ ಎಂದು ಟೀಕಿಸಿದರು.

ಸಂಸ್ಕಾರ ಇರಬೇಕು: ಮಳೆಯಿಂದ ಮನೆಗಳು ಕುಸಿದರೂ ಎಷ್ಟು ಜನಕ್ಕೆ ಪರಿಹಾರ ಸಿಕ್ಕಿದೆ. ಸಾಲ ಮನ್ನಾದ 100 ಕೋಟಿ ರೂ. ಅನುದಾನ ಬಿಡುಗಡೆ ಆಗಿದ್ದರೂ ರೈತರಿಗೆ ಹಣ ತಲುಪಿಲ್ಲ. ನಾವು ಇದೆಲ್ಲವನ್ನೂ ಮಾತನಾಡುತ್ತಿದ್ದೀವಾ? ಉನ್ನತ ಶಿಕ್ಷಣ ಸಚಿವರಾಗಿ ಇದೇನಾ ನಿಮ್ಮ ಸಂಸ್ಕಾರ? ಟೀಕೆ ಮಾಡಬೇಡಿ ಎಂದು ಹೇಳಲ್ಲ. ಟೀಕೆ, ಭಾಷೆ ಮಾದರಿಯಾಗಿರಬೇಕು ಎಂದರು.

ದಕ್ಷ ಅಧಿಕಾರಿಗಳನ್ನು ನಿಯೋಜಿಸಿ: ಎಸಿಬಿ ರದ್ದುಗೊಳಿಸಿ ಲೋಕಾಯುಕ್ತಕ್ಕೆ ಮಾನ್ಯತೆ ನೀಡಿರುವ ನ್ಯಾಯಾಲಯದ ಆದೇಶ ಸ್ವಾಗತಿಸುತ್ತೇನೆ. ಲೋಕಾಯುಕ್ತಕ್ಕೆ ಕೇವಲ ಮಾನ್ಯತೆ ಕೊಟ್ಟಿರುವುದು ಪೂರ್ಣ ಸಮಾಧಾನ ತಂದಿಲ್ಲ. ಲೋಕಾಯುಕ್ತಕ್ಕೆ ಪರಿಣಾಮಕಾರಿ ಆಗಿರುವ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಆ.19ರಂದು ದಾಖಲೆ ಸಲ್ಲಿಕೆ: ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧದ ತನಿಖೆಯ ಕುರಿತು ಪ್ರತಿಕ್ರಿಯಿಸಿದ ಸಾರಾ ಮಹೇಶ್, ತನಿಖೆಯ ಭಾಗವಾಗಿ ಕೆಲವು ದಾಖಲೆಗಳನ್ನು ಕೇಳಿದ್ದಾರೆ. ಆ.19ರಂದು ಬೆಳಗ್ಗೆ 11.30ಕ್ಕೆ ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಲ್ಲಿಸುತ್ತೇನೆ. ತಾವೇ ತಪ್ಪು ಮಾಡಿ ಮೈಸೂರು ಜನರನ್ನು ಅನಗತ್ಯವಾಗಿ ಕೆಣಕಿದರೆ ಏನಾಗುತ್ತದೆ ಎಂಬುದಕ್ಕೆ ಈ ಪ್ರಕರಣವೇ ಉದಾಹರಣೆ. ಸತ್ಯ ಮೇವ ಜಯತೇ ಎನ್ನುವ ಮಾತು ಈಗ ನಿಜವಾಗಿದೆ. ಈಗಾಗಲೇ ರೋಹಿಣಿ ಸಿಂಧೂರಿಯವರನ್ನು ಸಸ್ಪೆಂಡ್ ಮಾಡಬೇಕಾಗಿತ್ತು. ಈಗಲಾದರೂ ತನಿಖೆ ಚುರುಕುಗೊಂಡಿರುವುದು ಸಂತೋಷ ಎಂದರು. ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ ಸೇರಿದಂತೆ ಹಲವರು ಇದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೈಸೂರು ಮಿತ್ರ

ಇಂದು ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿ

ಮೈಸೂರು, ಆ.12– ನ್ಯಾಷನಲ್ ಕರಾಟೆ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ವತಿಯಿಂದ 'ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್ ಶಿಪ್'–2022ರ ಪಂದ್ಯಾವಳಿಯನ್ನು ಆ.13ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಚಾಮುಂಡಿ ವಿಹಾರ್ ಒಳಾಂಗಣ ಸ್ಟೇಡಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಹಂಸಿ ಎನ್.ಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಪಂದ್ಯಾವಳಿಯನ್ನು ಮಾಜಿ ಸಂಸದ ಆರ್. ಧ್ರುವನಾರಾಯಣ್ ಉದ್ಘಾಟಿಸಲಿದ್ದು, ಮಾಜಿ ಶಾಸಕ ಸಿ.ಎಸ್.ಅರುಣ್ ಮಾಚಯ್ಯ, ಹಿರಿಯ ರಂಗಕರ್ಮಿ ಮಂಡ್ಯ ರಮೇಶ್ ಸೇರಿದಂತೆ ಇತರೆ ಗಣ್ಯರು ಉಪಸ್ಥಿತರಿರುತ್ತಾರೆ.

ಒಂದನೇ ಪುಟದಿಂದ

ನೆರೆ ನೀರು ಬಳಕೆಗೆ ನೂತನ ಜಲ ನೀತಿ

ಎಲ್ಲಾ ಅಚ್ಚುಕಟ್ಟು ಪ್ರದೇಶಗಳಲ್ಲಿ ನೀರಿನ ನಿರ್ವಹಣೆಯ ಸಹಭಾಗಿತ್ವ ಜಾರಿಗೆ ತರಬೇಕು. ಅಂತರ್ಜಲ ಮಟ್ಟ ಕುಸಿಯುವಿಕೆ ಮತ್ತು ಹೆಚ್ಚುತ್ತಿರುವ ಅಂತರ್ಜಲ ಮಲೀನತೆಯು ಕಳವಳಕಾರಿಯಾಗಿದೆ. ಗ್ರಾಮೀಣ ಕುಡಿಯುವ ನೀರು ಮತ್ತು ನೀರಾವರಿ ಅಗತ್ಯಗಳನ್ನು ಪೂರೈಸಲು ಪಂಚಾಯತ್ ಮಟ್ಟದ ಅಂತರ್ಜಲ ಬಜೆಟ್ ಹಾಗೂ ಅಂತರ್ಜಲ, ಕೆರೆ, ಜಲಾನಯನ ನಿರ್ವಹಣೆಯ ಸಹಭಾಗಿತ್ವ ಅಳವಡಿಸಿಕೊಳ್ಳುವುದು, ಈ ನೀತಿಯಲ್ಲಿ ಸೇರಿದೆ ಎಂದರು. ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಅಂತರ್ಜಲ ಬಳಕೆಗಾಗಿ ಮೀಟರಿಂಗ್ ಆಧರಿಸಿ, ನೀರಿನ ದರ ವಿಧಿಸಬೇಕು.

ನಗರ ಮತ್ತು ಗ್ರಾಮೀಣ ನೀರು ಉತ್ಪಾದಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದು, ಭಾರೀ ಮಳೆ ಅವಧಿಯಲ್ಲಿ ಸಮಯೋಜಿತ ಮೇಲ್ವಿಚಾರಣೆ ಮುನ್ಸೂಚನೆ ಮತ್ತು ತಂತ್ರಜ್ಞಾನಗಳಿಂದ ಪ್ರವಾಹ ನಿಯಂತ್ರಣ ಒದಗಿಸುವುದರೊಂದಿಗೆ ಅಣೆಕಟ್ಟು ವ್ಯವಸ್ಥಾಪಕರು ಹಾಗೂ ಪ್ರವಾಹ ನಿಯಂತ್ರಣ ಆಡಳಿತದ ನಡುವೆ ಪರಿಣಾಮಕಾರಿ ಸಂವಹನದ ಮೂಲಕ ಪ್ರವಾಹ ಅಪಾಯಗಳನ್ನು ನಿಯಂತ್ರಿಸಬೇಕೆಂಬುದು ಅಡಕವಾಗಿದೆ.

ಸಮುದ್ರ ಸೇರುವುದಕ್ಕೂ ಮುನ್ನ ಭಾರೀ ನೆರೆಯಿಂದ ದೊಡ್ಡ ಪ್ರಮಾಣದಲ್ಲಿ ಹಾನಿಯಾಗುತ್ತಿದೆ. ಇದನ್ನು ತಡೆಗಟ್ಟುವ ಉದ್ದೇಶದಿಂದಲೇ ಹರಿಯುವ ನೀರನ್ನು ತಡೆದು, ಮರು ಬಳಕೆ ಮಾಡಿಕೊಳ್ಳುವ ತೀರ್ಮಾನಕ್ಕೆ ಬರಲಾಗಿದೆ ಎಂದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರ ನೇಮಕಾತಿಗೆ ಅರ್ಹರು ದೊರೆಯದ ಕಾರಣ ವಯೋಮಿತಿಯಲ್ಲಿ ಸಡಿಲಿಕೆ ಮಾಡಲು ಸಭೆ ಸಮ್ಮತಿಸಿದೆ ಎಂದರು. ಕೋವಿಡ್–19 ಕಾರಣದಿಂದ ಎರಡು ವರ್ಷಗಳ ಕಾಲ ನೇಮಕಾತಿಯಾಗಿಲ್ಲ. ಈ ಸಂದರ್ಭದಲ್ಲಿ ಅರ್ಹತೆ ಇದ್ದರೂ, ಈಗ ಅರ್ಜಿ ಸಲ್ಲಿಸಲು ಅವಕಾಶ ಇಲ್ಲದ ಕಾರಣ ವಯೋಮಿತಿ ಸಡಲಿಕೆ ಮಾಡಲಾಗಿದೆ. ಅದರಂತೆ ಪರಿಶಿಷ್ಟ ಜಾತಿ ವರ್ಗದವರಿಗೆ 47 ವರ್ಷ, ಹಿಂದುಳಿದ ವರ್ಗ–45, ಸಾಮಾನ್ಯ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು 42 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ ಎಂದರು. 15 ಸಾವಿರ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಿದ್ದು, ಇದರ ಜತೆಗೆ ಶಿಕ್ಷಕರ ನೇಮಕಾತಿ ಸಂದರ್ಭದಲ್ಲಿ ಅರ್ಹತಾ ಪರೀಕ್ಷೆಗೆ ನಿಗದಿಯಾಗಿದ್ದ ಶೇ.60ರಷ್ಟು ಅಂಕಗಳನ್ನು ಸಡಿಲಿಕೆ ಮಾಡಿ ಶೇ.50 ಅಂಕಕ್ಕೆ ನಿಗದಿಪಡಿಸಲಾಗಿದೆ. ಇನ್ನು ರಾಜ್ಯದಲ್ಲಿ 128 ಮಹಿಳಾ ಸ್ವಾಸ್ಥ್ಯ ಕೇಂದ್ರಗಳನ್ನು 22.4ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಸಭೆ ಅನುಮತಿ ನೀಡಿದೆ.

300 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇದನ್ನು ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಅದರ ಮೊದಲ ಹಂತದಲ್ಲಿ 128 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇದನ್ನು ಸ್ಥಾಪಿಸಲಾಗುವುದು. ಈ ಕೇಂದ್ರಗಳಲ್ಲಿ ಮಹಿಳೆಯರಿಗೆ ನುರಿತ ಸರ್ಜನ್‌ಗಳು ಅಗತ್ಯವಾದ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಿದ್ದಾರೆ ಎಂದು ಹೇಳಿದರು.

ಹಲವು ಬೃಹತ್ ಕಂಪನಿ ಸ್ಥಾಪನೆ

ರಾಜಧಾನಿ ಬಿಟ್ಟು ಹೊರಗಿನ ಎರಡು ಮತ್ತು ಮೂರನೇ ನಗರದಲ್ಲಿ ಈ ಸಂಸ್ಥೆಗಳು ತಲೆ ಎತ್ತಲಿವೆ. ಮೈಸೂರು ಮತ್ತು ಚಾಮರಾಜನಗರದಲ್ಲಿ ಕೈಗಾರಿಕಾ ವಲಯ ಸ್ಥಾಪಿಸಲಾಗಿದೆ. ಅಷ್ಟೇ ಅಲ್ಲದೆ, ಇನ್ನೂ 1500 ಎಕರೆಯಷ್ಟು ಭೂಮಿಯನ್ನು ಕೆಐಎಡಿಬಿ ಭೂ ಸ್ವಾಧೀನ ಮಾಡಿಕೊಳ್ಳಲು ಮುಂದಾಗಿದೆ. ಈ ನಗರಗಳಿಗೆ ರಸ್ತೆ, ರೈಲು ಮತ್ತು ವಿಮಾನದ ಸಂಪರ್ಕ ಇರುವುದರಿಂದ ಉದ್ಯಮಿದಾರರು ಬಂಡವಾಳ ಹೂಡಲು ಆಸಕ್ತಿ ತೋರಿದ್ದಾರೆ ಎಂದರು.

ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಇರುವ ವಿಪುಲ ಅವಕಾಶಗಳನ್ನು ಜಪಾನ್ ಸಂಸ್ಥೆಗಳಿಗೆ ಮನವರಿಕೆ ಮಾಡಿದ ನಂತರ ಅವರು ಬಂಡವಾಳ ಹೂಡಲು ಆಸಕ್ತಿ ತೋರಿದ್ದಾರೆ. ರಾಜ್ಯ ಸರ್ಕಾರ ಕೈಗಾರಿಕೆಗಳ ಬೆಳವಣಿಗೆ ಮತ್ತು ಉತ್ತೇಜನಕ್ಕೆ ಜಾರಿ ಮಾಡಿರುವ 2020–25ರ ಕೈಗಾರಿಕಾ ನೀತಿ ಇಡೀ ದೇಶಕ್ಕೆ ಮಾದರಿಯಾಗಿದ್ದು, ವಿಶ್ವದ ಮುಂಚೂಣಿಯಲ್ಲಿರುವ ಉದ್ಯಮಿಗಳು ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿವೆ ಎಂದರು.

ರಕ್ಷಣೆ, ಆಹಾರ ಸಂಸ್ಕರಣೆ, ಬಾಹ್ಯಾಕಾಶ, ಐಟಿಬಿಟಿ, ವಾಣಿಜ್ಯ ಮತ್ತು ಕೈಗಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಫುಲ ಅವಕಾಶಗಳಿವೆ. ಬಂಡವಾಳ ಹೂಡುವ ಉದ್ಯಮಿಗಳಿಗೆ ರಾಜ್ಯ ಸರ್ಕಾರ ಎಲ್ಲ ರೀತಿಯ ಸವಲತ್ತುಗಳನ್ನು ಕಲ್ಪಿಸಿಕೊಡಲಿದೆ ಎಂದು ಉದ್ದಿಮೆದಾರರಿಗೆ ಅಭಯ ನೀಡಲಾಗಿದೆ ಎಂದು ತಿಳಿಸಿದರು.

ಉದ್ಯಮ ಕ್ಷೇತ್ರದಲ್ಲಿ ಕರ್ನಾಟಕ ಮತ್ತು ಜಪಾನ್ ನಡುವಿನ ಔದ್ಯಮಿಕ ಸಂಬಂಧ ಉತ್ತಮವಾಗಿದೆ. ವಿಶೇಷವಾಗಿ, ಜಪಾನ್‌ಗೆ ಸಂಬಂಧಿಸಿದಂತೆ, ತುಮಕೂರಿನ ವಸಂತನರಸಪುರದಲ್ಲಿ ಜಪಾನೀಸ್ ಕೈಗಾರಿಕಾ ಟೌನ್‌ಶಿಪ್ ಸ್ಥಾಪಿಸಲಾಗಿದೆ. ಅದಕ್ಕಾಗಿ 519.55 ಎಕರೆ ಭೂಮಿ ಮೀಸಲಿಡಲಾಗಿದ್ದು, ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಜಪಾನಿನ ಕಂಪನಿಗಳಿಂದ ನೇರ ಹೂಡಿಕೆಗೆ ಎಲ್ಲಾ ರೀತಿಯ ಸಹಕಾರ ಒದಗಿಸಲಾಗುವುದು ಎಂದು ನಿರಾಣಿ ಮಾಹಿತಿ ನೀಡಿದರು. ಅತಿ ಹೆಚ್ಚು ವಿದೇಶಿ ನೇರ ಬಂಡವಾಳ ಆಕರ್ಷಿಸುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದು, ದೇಶದ ಒಟ್ಟಾರೆ ವಿದೇಶಿ ನೇರ ಹೂಡಿಕೆಯಲ್ಲಿ ನಮ್ಮ ರಾಜ್ಯದ ಪಾಲು ಶೇ.42 ರಷ್ಟಿದೆ. ಬೆಂಗಳೂರು ಮಾತ್ರವಲ್ಲದೆ 2ನೇ ಹಂತದ ನಗರಗಳಾದ ಮೈಸೂರು, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಕಲಬುರಗಿ ಅದೇ ರೀತಿ 3ನೇ ಹಂತದ ನಗರಗಳಾದ ಶಿವಮೊಗ್ಗ, ತುಮಕೂರು, ಬಳ್ಳಾರಿ, ಬೀದರ್, ಬಾಗಲಕೋಟೆ ಸೇರಿದಂತೆ ಎಲ್ಲಾ ಕಡೆ ಬಂಡವಾಳ ಹೂಡಿಕೆಗೆ ಉದ್ಯಮಿಗಳು ಮುಂದೆ ಬರುತ್ತಿದ್ದಾರೆ. ಉದ್ಯಮಿಗಳಿಗೆ ನಮ್ಮ ಸರ್ಕಾರ ಸದಾ ಬೆಂಗಾವಲಿಗೆ ಇರುತ್ತದೆ ಎಂದು ಉದ್ಯಮಿಗಳಿಗೆ ರಾಜ್ಯ ನಿರಾಣಿ ಆಶ್ವಾಸನೆ ನೀಡಿದರು.

ಜೆಟ್ರೊದ ಗ್ಲೋಬಲ್ ಸ್ಟ್ರಾಟಜಿ, ನೈರುತ್ಯ ಏಷ್ಯಾದ ಹಿರಿಯ ನಿರ್ದೇಶಕರಾದ ಕಝುಹಿಕೊ ಒಜಾವಾ ಮತ್ತು ಸಂಸ್ಥೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾದ ಕಝುಯುಕಿ ನಕಾಜೊ ಅವರನ್ನು ಭೇಟಿ ಮಾಡಿ ಮಾತುಕತೆ ಮಾಡಿದ್ದೇವೆ.

ಎಸಿಬಿ ಬಂದ್‌ಗೆ ಸಿಎಂ ಸಹಮತ

ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಅಡ್ವೊಕೇಟ್ ಜನರಲ್ ಅವರಿಗೆ ಹೇಳಿದ್ದೇವೆ. ಇವರು ಕೊಡುವ ವರದಿ ಆಧರಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದರು. ಎಸಿಬಿ ರದ್ದು ಮಾಡುವ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಅನೌಪಚಾರಿಕವಾಗಿ ಚರ್ಚಿಸಿದ್ದು, ಬಿಜೆಪಿ ಪ್ರಣಾಳಿಕೆಯಲ್ಲಿ ಕೊಟ್ಟಂತ ಭರವಸೆಗೆ ಬದ್ಧವಾಗಿ ತೀರ್ಮಾನ ಮಾಡಲಾಗುವುದು ಎಂದು ಹೇಳಿದರು. ಬಿಜೆಪಿ ಪ್ರಣಾಳಿಕೆಯಲ್ಲಿ ತಿಳಿಸಿದ್ದರೂ, ಈ ವಿಚಾರ ನ್ಯಾಯಾಲಯದಲ್ಲಿ ಇದ್ದುದರಿಂದ ಯಾವುದೇ ತೀರ್ಮಾನ ಕೈಗೊಂಡಿರಲಿಲ್ಲ. ಈಗ ನ್ಯಾಯಾಲಯವೇ ಎಸಿಬಿಯನ್ನು ರದ್ದುಗೊಳಿಸಿದೆ. ಅಗತ್ಯವಿದ್ದರೆ ಅಧಿವೇಶನದಲ್ಲಿ ಕಾನೂನು ತಿದ್ದುಪಡಿ ವಿಧೇಯಕಗಳನ್ನು ಮಂಡಿಸುವುದಾಗಿಯೂ ಮಾಹಿತಿ ನೀಡಿದರು.

ಕಾಡಾನೆ ದಾಳಿಗೆ ಕೇರಳ ಮೂಲದ ರೈತ ಬಲಿ

ಮೇಲೂ ದಾಳಿಗೆ ಮುಂದಾಗಿದ್ದು, ಆನೆ ಕೆಡವಿದ ಶೆಡ್‌ನಲ್ಲಿ ಅವಿತುಕೊಂಡಿದ್ದರಿಂದ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸರಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ರೈತನ ಶವವನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಶವ ಹಸ್ತಾಂತರಿಸಲಾಯಿತು. ಈ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪ್ರತಿಭಟನೆ: ಘಟನೆಯಿಂದ ರೊಚ್ಚಿಗೆದ್ದ ಎತ್ತಿಗೆ ಗ್ರಾಮಸ್ಥರು ಕಾಡಂಚಿನ ಪ್ರದೇಶದ ಜನ–ಜಾನುವಾರುಗಳಿಗೆ ಸೂಕ್ತ ಭದ್ರತೆ ಇಲ್ಲ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದರು. ವನ್ಯಪ್ರಾಣಿಗಳು ಕಾಡಿನಿಂದ ಹೊರ ಬಾರದಂತೆ ಅರಣ್ಯ ಇಲಾಖೆ ಮುನ್ನೆಚ್ಚರಿಕೆ ಕ್ರಮಕೈಗೊಂಡಿಲ್ಲ. ಜನ ಜಾನುವಾರುಗಳು ಹಾಗೂ ರೈತರ ಜಮೀನಿನ ಮೇಲೆ ಕಾಡು ಪ್ರಾಣಿಗಳು ಆಗಾಗ್ಗೆ ದಾಳಿ ನಡೆಸುತ್ತಿದ್ದರೂ, ಅರಣ್ಯ ಇಲಾಖೆ ಕ್ರಮಕ್ಕೆ ಮುಂದಾಗದೆ ಕಣ್ಮುಚ್ಚಿ ಕುಳಿತಿದೆ. ಇದೀಗ ಕಾಡಾನೆ ದಾಳಿಯಿಂದ ರೈತ ಸಾವನ್ನಪ್ಪಿ, ಹಲವು ಗಂಟೆಗಳೇ ಕಳೆದರೂ ಇಲಾಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಘೋಷಣೆ ಕೂಗಿ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಹೆಡಿಯಾಲ ಎಸಿಎಫ್ ಪರಮೇಶ್, ಪ್ರತಿಭಟನಾಕಾರರ ಮನವೊಲಿಸಲು ಯತ್ನಿಸಿದ್ದರಾದರೂ, ಪ್ರತಿಭಟನೆ ಮುಂದುವರೆಸಿದ ಪ್ರತಿಭಟನಾಕಾರರು ಅರಣ್ಯ ಇಲಾಖೆ ವಿರುದ್ಧ ಧಿಕ್ಕಾರ ಕೂಗಿದರು. ವ್ಯಕ್ತಿ ಮೇಲೆ ಹುಲಿ ದಾಳಿ ನಡೆಸಿ, ಒಂದು ವಾರ ಕಳೆದಿದ್ದರೂ, ಹುಲಿ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ. ಅಲ್ಲದೆ ಕಾಡು ಪ್ರಾಣಿಗಳ ಹಾವಳಿ ತಡೆಗೆ ಕಂದಕ, ವಿದ್ಯುತ್ ಸೋಲಾರ್ ಬೇಲಿಯನ್ನು ಸಮರ್ಪಕವಾಗಿ ಅಳವಡಿಸಿಲ್ಲ. ಕಾಡಾನೆ ಹೊರಬರುವ ಜಾಗದಲ್ಲಿ ಮಣ್ಣು ಹಾಕಿಸಬೇಕು. ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಎಂದು ಪಟ್ಟು ಹಿಡಿದರು.

ಮನವಿಗೆ ಸ್ಪಂದಿಸಿದ ಎಸಿಎಫ್ ಪರಮೇಶ್, ಮೃತರ ಕುಟುಂಬಕ್ಕೆ 7.5 ಲಕ್ಷ ರೂ. ಪರಿಹಾರ ನೀಡಲಾಗುವುದು. ಕಂದಕಗಳಲ್ಲಿ ಮಣ್ಣು ತುಂಬಿರುವ ಕಡೆಗಳಲ್ಲಿ ಕೂಡಲೇ ಜೆಸಿಬಿ ಯಂತ್ರದ ಸಹಾಯದಿಂದ ಮಣ್ಣು ತೆಗೆಸಲಾಗುವುದು. ಕಾಡು ಪ್ರಾಣಿಗಳು ಹೊರಬರದಂತೆ ಕ್ರಮ ವಹಿಸಲಾಗುವುದು ಎಂದು ಭರವಸೆ ಬಳಿಕ ಪ್ರತಿಭಟನೆ ಹಿಂಪಡೆಯಲಾಯಿತು. ಈ ವೇಳೆ ಗ್ರಾಮದ ಮುಖಂಡರಾದ ಪ್ರಕಾಶ್, ಶಿವಲಿಂಗಯ್ಯ, ಶಿವರಾಜು ಅರಸು, ಸುರೇಶ್, ಪುಟ್ಟಸ್ವಾಮಿ, ಮಹದೇವಸ್ವಾಮಿ, ಬಸವಣ್ಣ, ಇಂದ್ರ, ಕೆಬಿಡಿ ಎಚ್.ಎಲ್.ಸುರೇಶ್, ನಾಗಮಲ್ಲಪ್ಪ, ರಘು, ಉಮೇಶ್, ಪ್ರಕಾಶ್, ಮಹೇಶ್, ಬಸವರಾಜು, ಮೆಹಬೂಬ್, ನುಗು ವಲಯ ಅರಣ್ಯಾಧಿಕಾರಿ ನಿವೇದಿತಾ, ಸಿಪಿಐ ಎನ್.ಆನಂದ್, ಉಪ ನಿರೀಕ್ಷಕರಾದ ಶ್ರವಣ್‌ದಾಸ್‌ರೆಡ್ಡಿ, ಜಯಪ್ರಕಾಶ್, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಸಿಬ್ಬಂದಿ, ಗ್ರಾಮಸ್ಥರು ಹಾಜರಿದ್ದರು.

ಖಾದಿ ತ್ರಿವರ್ಣ ಧ್ವಜಕ್ಕೆ ಎಲ್ಲಿಲ್ಲದ ಭಾರೀ ಬೇಡಿಕೆ

ಐಎಸ್‌ಐ ಮಾರ್ಕ್ ಬಾವುಟಕ್ಕೆ ಅಧಿಕ ಒಲವು ● ಬೇಡಿಕೆಗನುಗುಣವಾಗಿ ಲಭ್ಯವಾಗದ ಬಾವುಟ







ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.12– ಸ್ವಾತಂತ್ರ್ಯ ಮಹೋತ್ಸವದ ಅಮೃತ ಮಹೋತ್ಸವದ ಸಂಭ್ರಮಾಚರಣೆ ವೇಳೆ ಖಾದಿ ಬಟ್ಟೆಯಿಂದ ತಯಾರಾದ ತ್ರಿವರ್ಣ ಧ್ವಜಕ್ಕೆ ಎಲ್ಲಿಲ್ಲದ ಬೇಡಿಕೆ ವ್ಯಕ್ತವಾಗಿದ್ದು, ಬೇಡಿಕೆಗೆ ಅನುಗುಣವಾಗಿ ಖಾದಿ ಧ್ವಜ ಪೂರೈಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

75ನೇ ವರ್ಷದ ಸಂಭ್ರಮಾಚರಣೆಯಲ್ಲಿ ಸಾಮಾನ್ಯ ನಾಗರೀಕರೂ ಪಾಲ್ಗೊಳ್ಳುತ್ತಿರುವುದರಿಂದ ದೇಶಭಕ್ತಿ ಪ್ರದರ್ಶಿಸಲು ಒಂದು ವರ್ಷ ಖಾದಿ ಬಟ್ಟೆಯಿಂದ ತಯಾರಾದ ಧ್ವಜವನ್ನೇ ಬಳಸಲು ಆಸಕ್ತಿ ತೋರಿರುವುದರಿಂದ ಖಾದಿ ಧ್ವಜಕ್ಕೆ ಬೇಡಿಕೆ ಹೆಚ್ಚಿದೆ. ಉತ್ತರ ಕರ್ನಾಟಕದಲ್ಲಿ ಖಾದಿ ಗ್ರಾಮೋದ್ಯೋಗ ಸಂಘದ ಮೂಲಕ ಖಾದಿ ಧ್ವಜ ತಯಾರಾಗುತ್ತಿರುವುದನ್ನು ಹೊರತುಪಡಿಸಿದರೆ, ಬೇರೆಲ್ಲೂ ಖಾದಿ ಧ್ವಜ ತಯಾರಿಕೆ ಘಟಕವಿಲ್ಲ. ಈ ಹಿನ್ನೆಲೆಯಲ್ಲಿ ಬೇಡಿಕೆಗೆ ಅನುಗುಣವಾಗಿ ಧ್ವಜ ಪೂರೈಕೆಯಾಗದ ಕಾರಣ ಇದೀಗ ಪಾಲಿಸ್ಟರ್ ಹಾಗೂ ಚೈನಾಸಿಲ್ಕ್ ಬಟ್ಟೆಯಿಂದ ತಯಾರಾದ ಧ್ವಜದ ಮೊರೆ ಹೋಗಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಸಾವಿರಕ್ಕೂ ಹೆಚ್ಚು ಖಾದಿ ಬಾವುಟ ಮಾರಾಟ: ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಖಾದಿ ಬಂಡಾರ, ಬಲ್ಲಾಳ್ ವೃತ್ತದಲ್ಲಿರುವ ಖಾದಿ ಬಂಡಾರ್, ಕುವೆಂಪುನಗರದ ಖಾದಿ ಬಂಡಾರದಲ್ಲಿ ಖಾದಿ ಧ್ವಜ ಖರೀದಿಗೆ ಜನ ಹೆಚ್ಚು ಒಲವು ತೋರಿದ್ದಾರೆ. ಖಾದಿ ಧ್ವಜ ತನ್ನದೇ ಆದ ಮಹತ್ವ ಹೊಂದಿದ್ದು, ದೇಶ ಭಕ್ತಿಯನ್ನು ಇಮ್ಮಡಿಗೊಳಿಸುವ ಸಂಕೇತವೂ ಆಗಿದೆ. ಬಾವುಟದ ಗತ್ತನ್ನು ಬಿಂಬಿಸುವ ಖಾದಿ ತ್ರಿವರ್ಣ ಧ್ವಜ ದೇಶದ ಪ್ರತೀಕವೂ ಆಗಿದೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬಸ್ಥರು, ಅಪ್ಪಟ ದೇಶ ಭಕ್ತರು ಖಾದಿ ಬಾವುಟವನ್ನೇ ನಿರೀಕ್ಷಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹಿಂದೆಂದಿಗಿಂತಲೂ ಈ ಬಾರಿ ಖಾದಿ ಬಾವುಟದ ಮಾರಾಟ ಬಲುಜೋರಾಗಿದೆ. ಧನ್ವಂತರಿ ರಸ್ತೆಯಲ್ಲಿರುವ ಖಾದಿ ಬಂಡಾರ(ಖಾದಿ ವಸ್ತ್ರಾಲಯ)ದಲ್ಲಿ ಕಳೆದ 15 ದಿನದಿಂದ ಖಾದಿ ಧ್ವಜ ಮಾರಾಟವಾಗಿದೆ. ಇನ್ನು 200 ಧ್ವಜವಷ್ಟೇ ದಾಸ್ತಾನು ಇದ್ದು, ಆ.15ರೊಳಗೆ ಮಾರಾಟವಾಗುವುದು ಖಚಿತವಾಗಿದೆ.

ಮನೆ ಮೇಲೆ ಹಾರಿಸುವವರೂ ಖರೀದಿಸುತ್ತಿದ್ದಾರೆ: ಖಾದಿ ವಸ್ತ್ರಾಲಯದ ವ್ಯವಸ್ಥಾಪಕ ಬಿ.ಎಸ್.ಮಲ್ಲಿಕಾರ್ಜುನ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಇಷ್ಟು ವರ್ಷ ಖಾದಿ ವಸ್ತ್ರಾಲಯದಿಂದ ಸರ್ಕಾರಿ ಕಚೇರಿ, ಶಾಲಾ–ಕಾಲೇಜುಗಳ ಮುಖ್ಯಸ್ಥರು, ಗ್ರಾ.ಪಂ ಕಚೇರಿ ಸಿಬ್ಬಂದಿಗಳು ಮಾತ್ರ ಖಾದಿ ಧ್ವಜ ಖರೀದಿಸುತ್ತಿದ್ದರು. ಇದರಿಂದ ಪ್ರತಿವರ್ಷ 250 ರಿಂದ 300 ಖಾದಿ ಧ್ವಜ ಮಾರಾಟವಾಗುತ್ತಿತ್ತು. ಆದರೆ ಈ ಬಾರಿ 75ನೇ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ 'ಹರ್ ಘರ್ ತಿರಂಗಾ' ಕಾರ್ಯಕ್ರಮ ಘೋಷಿಸಿರುವುದರಿಂದ ಈ ವರ್ಷ ಮನೆ ಮೇಲೆ ಬಾವುಟ ಹಾರಿಸುವುದಕ್ಕೂ ಖಾದಿ ಧ್ವಜವನ್ನೇ ತೆಗೆದುಕೊಳ್ಳಲು ಬರುತ್ತಿದ್ದಾರೆ. ಇದರಿಂದ ಈ ಬಾರಿ ವಿವಿಧ ಅಳತೆಯ ಒಂದು ಸಾವಿರ ಖಾದಿ ಧ್ವಜ ಮಾರಾಟವಾಗಿದೆ.

ದಾರವಾಡ ಜಿಲ್ಲೆಯ ಗರಗ ಕ್ಷೇತ್ರಿಯ ಸಂಘದಲ್ಲಿ ನೂರಾರು ಮಹಿಳೆಯರು ಕೈಮಗ್ಗದ ಮೂಲಕ ತಯಾರಿಸಿದ ಖಾದಿ ಧ್ವಜವನ್ನು ಮೈಸೂರಿನ ಖಾದಿ ಬಂಡಾರಕ್ಕೆ ತರಿಸಲಾಗುತ್ತದೆ. ಅಲ್ಲಿ ಗೌರವಯುತವಾಗಿ ಕೇಂದ್ರ ಸರ್ಕಾರ ಸೂಚಿಸಿರುವ ಮಾನದಂಡ ಅನುಸರಿಸಿ ಖಾದಿ ಧ್ವಜ ತಯಾರಿಸಲಾಗುತ್ತದೆ. ಹಾಗಾಗಿ ಖಾದಿ ಧ್ವಜಕ್ಕೆ ಎಲ್ಲಿಲ್ಲದ ಪ್ರೀತಿ ಹಾಗೂ ಗೌರವ ವ್ಯಕ್ತವಾಗುತ್ತಿದೆ. ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ಬಾವುಟ ಮಾರಾಟ ಪೂರ್ಣ ಪ್ರಮಾಣದಲ್ಲಿ ಸ್ಥಗಿತಗೊಂಡಿತ್ತು. ಈ ಬಾರಿ ಮಾರಾಟ ಅತ್ಯುತ್ತಮವಾಗಿದೆ. 2X3 ಅಳತೆಯ ಧ್ವಜಕ್ಕೆ 925 ರೂ., 3X4.1/2 ಅಳತೆಯ ಬಾವುಟಕ್ಕೆ 1750 ರೂ., 6X4 ಅಳತೆಯ ಬಾವುಟಕ್ಕೆ 2600 ರೂ. ದರ ನಿಗದಿ ಮಾಡಲಾಗಿದೆ. ಹರ್ ಘರ್ ತಿರಂಗಾ ಕಾರ್ಯಕ್ರಮ ಇನ್ನು ಎರಡು ತಿಂಗಳ ಮುನ್ನವೇ ಘೋಷಿದ್ದರೆ ಖಾದಿ ಬಾವುಟ ತಯಾರಿಕೆ ಚುರುಕಾಗುತ್ತಿತ್ತು. ಕಡಿಮೆ ಅವಧಿಯಲ್ಲಿಯೇ ತಯಾರಾದ ಧ್ವಜಗಳು ಪೂರೈಕೆಯಾಗಿರುವುದರಿಂದ ಬೇಡಿಕೆ ಅನುಗುಣವಾಗಿ ಖಾದಿ ಧ್ವಜ ಪೂರೈಸಲು ಸಾಧ್ಯವಾಗುತ್ತಿಲ್ಲ ಎಂದರು.

ಚಿಕ್ಕ ಬಾವುಟದ ಕೊರತೆ: ತ್ರಿವರ್ಣ ಧ್ವಜ ಮಾರಾಟ ಮಾಡುವ ಜ್ಯುಪಿಟರ್ ಸ್ಟೋರ್ಸ್ ಮಾಲೀಕ ಆನಂದ್ ಮಾತನಾಡಿ, ಎರಡು ವರ್ಷದ ಬಳಿಕ ಈ ಬಾರಿ ತ್ರಿವರ್ಣ ಧ್ವಜ ಮಾರಾಟ ಉತ್ತಮ ವಾಗಿದೆ. ಪಾಲಿಸ್ಟರ್ ಬಟ್ಟೆಯಿಂದ ತಯಾರಾದ ಬಾವುಟ ಮಾರಾಟ ಮಾಡುತ್ತಿದ್ದೇವೆ. 1ರಿಂದ 5ನೇ ನಂಬರ್‌ವರೆಗೂ ಬಾವುಟ ತಯಾರಾಗಿದ್ದು, ಗ್ರಾಹಕರು ತಮಗಿಷ್ಟ ವಾದ ಅಳತೆಯ ಬಾವುಟ ಖರೀದಿ ಸುತ್ತಿದ್ದಾರೆ. ಈ ಧ್ವಜವು 30 ರೂ.ನಿಂದ 50, 80, 120, 180 ರೂ. ವರೆಗೆ ಮಾರಾಟ ಮಾಡಲಾಗುತ್ತಿದೆ. ಬೇಡಿಕೆ ಅನುಗುಣವಾಗಿ ತಯಾರಕರು ಧ್ವಜ ತಯಾರಿಸಲು ಸಾಧ್ಯವಾಗುತ್ತಿಲ್ಲ. ಈ ಬಾರಿ 5 ರೂ. ಹಾಗೂ 10 ರೂ. ದರದ ಧ್ವಜದಲ್ಲಿ ಕೊರತೆ ಉಂಟಾಗಲಿದೆ. ಇದರಿಂದ ಮಕ್ಕಳಿಗೆ ಧ್ವಜ ಸಿಗುವುದು ಕಷ್ಟ ಎನಿಸುತ್ತದೆ. ಎಲ್ಲರೂ ಬಾವುಟ ತಯಾರಿಸಲು ಸಾಧ್ಯವಿಲ್ಲ. ಕೆಲವೇ ಕೆಲವರು ಮಾತ್ರ ತಯಾರಿಸುತ್ತಾರೆ. ದಿನಕ್ಕೆ 100 ಧ್ವಜ ತಯಾರಿಸಿ ಅಂಗಡಿಗಳಿಗೆ ಸರಬರಾಜು ಮಾಡುತ್ತಿದ್ದಾರೆ ಎಂದು ವಿವರಿಸಿದರು.

ಪಾಲಿಸ್ಟರ್ ಬಾವುಟದ ಮಾರಾಟ ಬಲು ಜೋರು

ಖಾದಿ ಧ್ವಜದ ದರ ಹೆಚ್ಚಾಗಿರು ವುದರಿಂದ ಬಹುತೇಕರು ಪಾಲಿಸ್ಟರ್ ಹಾಗೂ ಚೈನಾ ಸಿಲ್ಕ್ ಬಟ್ಟೆಯಿಂದ ತಯಾರಾದ ಧ್ವಜಗಳ ಮೊರೆ ಹೋಗಿದ್ದಾರೆ. ಅದರಲ್ಲೂ ರಾಜಕೀಯ ಪಕ್ಷಗಳು ಹಾಗೂ ಸಂಘ–ಸಂಸ್ಥೆಗಳು ಸಾರ್ವಜನಿಕರಿಗೆ ಹಂಚುವುದಕ್ಕೆ ಪಾಲಿಸ್ಟರ್ ಬಟ್ಟೆಯಿಂದ ತಯಾರಾದ ಧ್ವಜಗಳನ್ನೇ ಖರೀದಿಸಿವೆ. ಇದರಿಂದ ಮೈಸೂರಿನ ಹಲವು ಮಳಿಗೆಗಳಲ್ಲಿ ಪಾಲಿಸ್ಟರ್ ಬಟ್ಟೆಯ ತ್ರಿವರ್ಣ ಧ್ವಜಗಳೇ ಹೆಚ್ಚಾಗಿ ಮಾರಾಟಗೊಳ್ಳುತ್ತಿವೆ.

'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ

ಗುಲ್ಬರ್ಗಾ ಮೈಸ್ಟಿಕ್ಸ್, ಬೆಂಗಳೂರು ಬ್ಲಾಸ್ಟರ್ಸ್ ಭರ್ಜರಿ ಜಯ





ಮೈಸೂರು, ಆ.12– ಇಲ್ಲಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಶುಕ್ರವಾರ ನಡೆದ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯಲ್ಲಿ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಗುಲ್ಬರ್ಗಾ ಮೈಸ್ಟಿಕ್ಸ್ ಹಾಗೂ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್ ತಂಡ ಜಯ ಗಳಿಸಿದೆ.

ಗುಲ್ಬರ್ಗಾಕ್ಕೆ ಸುಲಭ ಜಯ: ದೇವದತ್ ಪಡಿಕ್ಕಲ್, ರೋಹನ್ ಪಾಟೀಲ್ ಅವರ ಅರ್ಧ ಶತಕಗಳ ನೆರವಿನಿಂದ ಗುಲ್ಬರ್ಗ ಮೈಸ್ಟಿಕ್ಸ್ ಹುಬ್ಬಳ್ಳಿ ಟೈಗರ್ಸ್ ವಿರುದ್ಧ 9 ವಿಕೆಟ್ ಜಯ ಗಳಿಸಿದೆ.

146 ರನ್ ಗೆಲುವಿನ ಗುರಿ ಬೆನ್ನತ್ತಿದ ಗುಲ್ಬರ್ಗ ಮೈಸ್ಟಿಕ್ಸ್ 16.4 ಓವರ್‌ಗಳಲ್ಲಿ ಇನ್ನೂ 20 ಎಸೆತ ಬಾಕಿ ಇರುವಂತೆಯೇ 1 ವಿಕೆಟ್ ಕಳೆದುಕೊಂಡು ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ದೇವದತ್ ಪಡಿಕ್ಕಲ್ ಹಾಗೂ ರೋಹನ್ ಪಾಟೀಲ್ ಮೊದಲ ವಿಕೆಟ್‌ಗೆ 91 ರನದ ಜೊತೆಯಾಟವಾಡುವ ಮೂಲಕ ಉತ್ತಮ ಅಡಿಪಾಯ ಹಾಕಿಕೊಂಡರು. ಈ ವೇಳೆ 62 ರನ್ ಗಳಿಸಿದ್ದ ಪಡಿಕ್ಕಲ್ ವಿಕೆಟ್ ಒಪ್ಪಿಸಿದರು. ಬಳಿಕ ಒಂದಾದ ರೋಹನ್ ಹಾಗೂ ಜಸ್ವಂತ್ ಆಚಾರ್ಯ ಗೆಲುವಿನ ಔಪಚಾರಿಕತೆ ಮುಗಿಸಿದರು. ಅಂತಿಮವಾಗಿ ರೋಹನ್ 61, ಆಚಾರ್ಯ 17 ರನ್ ಗಳಿಸಿದರು. ಟೈಗರ್ಸ್ ನಾಯಕ ಅಭಿಮನ್ಯು ಮಿಥುನ್ 1ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ಟೈಗರ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 145 ರನ್ ಗಳಿಸಿತು. ತಂಡದ ಪರ ಲವನೀತ್ ಸಿಸೋಡಿಯಾ 30, ತಾಹ 15, ತುಷಾರ್ ಸಿಂಗ್ 42 ಹಾಗೂ ನವೀನ್ 24 ರನ್ ಗಳಿಸಿದರು. ಗುಲ್ಬರ್ಗ ಪರ ಅಭಿಲಾಶ್ ಶೆಟ್ಟಿ, ಮನೋಜ್ ಭಾಂಡಗೆ ಮತ್ತು ರಿತೇಶ್ ಭಟ್ಕಳ್ ತಲಾ 2, ವಿದ್ವತ್ ಕಾವೇರಪ್ಪ ಮತ್ತು ಕೋದಂಡ ಅಜಿತ್ ಕಾರ್ತಿಕ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ದೇವದತ್ ಪಡಿಕ್ಕಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬೆಂಗಳೂರಿಗೆ ಭರ್ಜರಿ ಜಯ: ನಾಯಕ ಮಯಾಂಕ್ ಅಗರ್ವಾಲ್ ಅವರ ಅಮೋಘ ಶತಕದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್ ಶಿವಮೊಗ್ಗ ಸ್ಟ್ರೈಕರ್ಸ್ ವಿರುದ್ಧ ವಿಜೆಡಿ ನಿಯಮದನ್ವಯ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಮಳೆ ಬಂದ ಕಾರಣ ಪಂದ್ಯವನ್ನು 19 ಓವರ್‌ಗಳಿಗೆ ಸೀಮಿತಗೊಳಿಸಲಾಗಿದ್ದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ಸ್ಟ್ರೈಕರ್ಸ್ 2 ವಿಕೆಟ್ ನಷ್ಟಕ್ಕೆ 173ರನ್ ಗಳಿಸಿತ್ತು. ತಂಡದ ಪರ ರೋಹನ್ ಕದಮ್ 82, ಶರತ್ ಬಿ.ಆರ್ 51, ಕೆ.ಗೌತಮ್ 18, ಡಿ.ಅವಿನಾಶ್ 13 ರನ್ ಗಳಿಸಿದರು. ಬೆಂಗಳೂರು ಪರ ಜೆ.ಸುಚಿತ್, ಎಲ್.ಆರ್.ಕುಮಾರ್ ತಲಾ ಒಂದೊಂದು ವಿಕೆಟ್ ಪಡೆದರು.

174 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬೆಂಗಳೂರು ಬ್ಲಾಸ್ಟರ್ಸ್ 15.4 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 176 ರನ್ ಗಳಿಸುವ ಮೂಲಕ ಜಯ ಸಾಧಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಮಯಾಂಕ್ ಅಗರ್ವಾಲ್, ಎಲ್.ಆರ್. ಚೇತನ್ ಮೊದಲ ವಿಕೆಟ್‌ಗೆ 69 ರನ್ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಬಿರುಸಿನ 34ರನ್ ಗಳಿಸಿದ ಚೇತನ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಮಿಂಚಿನ ಬ್ಯಾಟಿಂಗ್ ನಡೆಸಿದ ಮಯಾಂಕ್ ಅಗರ್ವಾಲ್ ಶಿವಮೊಗ್ಗ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಅಂತಿಮವಾಗಿ 49 ಎಸೆತಗಳಲ್ಲಿ 6 ಸಿಕ್ಸರ್, 10 ಬೌಂಡರಿ ಒಳಗೊಂಡ ಅಜೇಯ 102 ರನ್ ಗಳಿಸಿದ ಮಯಾಂಕ್ ತಂಡಕ್ಕೆ ಜಯ ತಂದಿತ್ತರು. ಇವರಿಗೆ ಉತ್ತಮ ಸಾಥ್ ನೀಡಿದ ಅನಿಶ್ 35ರನ್ ಗಳಿಸಿದರು. ಅಲ್ಲದೇ ಇವರಿಬ್ಬರು ಮುರಿಯದ 2ನೇ ವಿಕೆಟ್‌ಗೆ 105 ರನ್ ಜೊತೆಯಾಟವಾಡಿದರು. ಶಿವಮೊಗ್ಗ ಪರ ದೇವಯ್ಯ 1 ವಿಕೆಟ್ ಪಡೆದರು. ಮಯಾಂಕ್ ಅಗರ್ವಾಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕಾಂಗ್ರೆಸ್ ಪಕ್ಷ ದೇಶಕ್ಕೆ ಅನೇಕ ಕೊಡುಗೆಗಳನ್ನು ನೀಡಿದೆ : ಕೆ.ಮರೀಗೌಡ



ಮೈಸೂರು, ಆ. 12: ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿದ್ದು ದೇಶವನ್ನು ಸ್ವಾವಲಂಬಿ ರಾಷ್ಟ್ರವನ್ನಾಗಿ ಮಾಡಲು ಕಾಂಗ್ರೆಸ್ ಪಕ್ಷ ಅನೇಕ ಕೊಡುಗೆಗಳನ್ನು ನೀಡಿದೆ ಎಂದು ಜಿ.ಪಂ. ಮಾಜಿ ಅಧ್ಯಕ್ಷ ಕೆ. ಮರೀಗೌಡ ತಿಳಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಮಹದೇವಪುರದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಪಾದಯಾತ್ರೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಆಡಳಿತ ಅವಧಿಯಲ್ಲಿ ಎಲ್ಲ ವರ್ಗದ ಜನರ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದ್ದಾರೆ.

ರಾಜೀವ್‌ಗಾಂಧಿಯವರು ಪ್ರಧಾನಿಮಂತ್ರಿಯಾಗಿದ್ದಾಗ ಈ ದೇಶಕ್ಕೆ ಮಾಹಿತಿ ತಂತ್ರಜ್ಞಾನವನ್ನು ಜಾರಿಗೆ ತಂದರು. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಸೂಚನೆಯ ಮೇರೆಗೆ ಅಂದಿನ ಕೇಂದ್ರದ ಕಾಂಗ್ರೆಸ್ ಸರ್ಕಾರ ದೇಶದಲ್ಲಿ ಮಹಾತ್ಮಾಗಾಂಧಿ ಉದ್ಯೋಗ ಭರವಸೆ ಯೋಜನೆಯನ್ನು ಜಾರಿಗೆ ತಂದಿದ್ದರಿಂದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಎಂಎಲ್‌ಎ, ಎಂ.ಪಿ. ಕ್ಷೇತ್ರಗಳಲ್ಲಿ ಈಗಲೂ ಕಾಮಗಾರಿಗಳು ನಡೆಯುತ್ತಿವೆ, ಉದ್ಯೋಗ ಸೃಷ್ಟಿಯಾಗುತ್ತಿವೆ. ಆದರೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಈ ಯೋಜನೆಗೆ ಸರಿಯಾಗಿ ಹಣವನ್ನೇ ಬಿಡುಗಡೆ ಮಾಡುತ್ತಿಲ್ಲ ಎಂದು ಆರೋಪಿಸಿದ ಅವರು ರಾಜ್ಯದ ಬಿಜೆಪಿ ಸರ್ಕಾರ ಭ್ರಷ್ಟಾಚಾರ ಹಗರಣಗಳಲ್ಲಿ ಮುಳುಗಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಕಾಲಹರಣ ಮಾಡುತ್ತಿದ್ದಾರೆ. ಇಂತಹ ಭ್ರಷ್ಟ ಸರ್ಕಾರವನ್ನು ಕಿತ್ತೊಗೆದು 2023ಕ್ಕೆ ಕಾಂಗ್ರೆಸ್ ಪಕ್ಷವನ್ನು ಪ್ರತಿಯೊಬ್ಬರು ಬೆಂಬಲಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಜವರಪ್ಪ, ಚಾಮುಂಡೇಶ್ವರಿ ಕ್ಷೇತ್ರದ ಪರಿಶಿಷ್ಟ ಘಟಕದ ಅಧ್ಯಕ್ಷ ಲಕ್ಷ್ಮಣ್‌ಪ್ರಭು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ. ಗುರುಸ್ವಾಮಿ, ಜೆ. ಸತೀಶ್‌ಕುಮಾರ್, ಗ್ರಾಪಂ. ಮಾಜಿ ಅಧ್ಯಕ್ಷರಾದ ಬುಲೆಟ್ ಮಹದೇವು, ಚೂಡಾಮಣಿ, ಮುಖಂಡರಾದ ಕೃಷ್ಣಕುಮಾರ್ ಸಾಗರ್, ಶಿವಕುಮಾರ್, ಅಶ್ವಿನಿ ರೇವಣ್ಣ, ಧನಗಳ್ಳಿ ಬಸವರಾಜ್, ಬಿ. ರವಿ, ಮಂಜುನಾಥ್, ನಾಗರಾಜ್, ಮಂಗರಾಜ್, ನಾರಾಯಣ, ಅನಿತ, ಆರ್. ರಮೇಶ್ ಹಾಜರಿದ್ದರು.



ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ ಅಖಿಲ ಕರ್ನಾಟಕ ಶ್ರೀ ಸಿದ್ದರಾಮಯ್ಯನವರ ಅಭಿಮಾನಿಗಳ ಬ್ರಿಗೇಡ್ ವತಿಯಿಂದ ಹಿನಕಲ್ ಗ್ರಾಮದಲ್ಲಿರುವ ವಿಮಲ ಟರ್ಮಿನಲ್ ವೃದ್ಧಾಶ್ರಮದ ಅಶಕ್ತರಿಗೆ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಬ್ರಿಗೇಡ್‌ನ ರಾಜ್ಯಾಧ್ಯಕ್ಷ ಹಿನಕಲ್ ಉದಯ್, ಉಪಾಧ್ಯಕ್ಷ ಕುಂಬ್ರಹಳ್ಳಿ ಮಹದೇವು, ಕಾರ್ಯದರ್ಶಿ ಮಾಕನಹುಂಡಿ ಶಿವು, ಖಜಾಂಚಿ ಸಚಿನ್ ದೊಡ್ಡೇಗೌಡ, ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಆರೀಫ್ ಪಾಷಾ, ಮುಖಂಡರಾದ ನಜರ್‌ಬಾದ್ ನಟರಾಜ್, ದಕ್ಷಿಣಮೂರ್ತಿ, ಮರಡಿಹುಂಡಿ ಪುಟ್ಟಸ್ವಾಮಿ, ಮಹೇಶ್, ವೆಂಕಟೇಶ್, ಹರೀಶ್, ಹೂಟಗಳ್ಳಿ ಚಂದ್ರು, ಮಯೂರ್ ಮಲ್ಲಣ್ಣ, ಕೆ.ಆರ್. ಬ್ಯಾಂಕ್ ನಿರ್ದೇಶಕ ಬಸಪ್ಪ ಇನ್ನಿತರರಿದ್ದರು.

ಕಬ್ಬಿನ ಎಫ್‌ಆರ್‌ಪಿ ದರ, ವಿದ್ಯುತ್ ಕಾಯ್ದೆ ಖಾಸಗೀಕರಣ ವಿರೋಧಿಸಿ

ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ವಾಹನ ತಡೆ

ಗಂಟೆ ಕಾಲ ಸಾಲುಗಟ್ಟಿ ನಿಂತ ವಾಹನಗಳು



ಮೈಸೂರು, ಆ.12(ಆರ್‌ಕೆಬಿ)– ಕಬ್ಬಿನ ಎಫ್‌ಆರ್‌ಪಿ ದರ, ವಿದ್ಯುತ್ ಕಾಯ್ದೆ ಖಾಸಗೀಕರಣ ವಿರೋಧಿಸಿ ಕಬ್ಬು ಬೆಳೆಗಾರರು ಶುಕ್ರವಾರ ಮೈಸೂರು–ಬೆಂಗಳೂರು ಸಿಗ್ನಲ್ ಬಳಿ ರಾಷ್ಟ್ರೀಯ ಹೆದ್ದಾರಿ ತಡೆ (ಕೊಲಂಬಿಯಾ ಆಸ್ಪತ್ರೆ ವೃತ್ತ) ನಡೆಸಿದರು. ಇದರಿಂದಾಗಿ ಬೆಂಗಳೂರು–ಮೈಸೂರು ನಡುವೆ ಸಂಚರಿಸುವ ವಾಹನಗಳು ಒಂದು ಗಂಟೆ ಕಾಲ ಸಾಲುಗಟ್ಟಿ ನಿಂತಿದ್ದವು.

ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ರೈತರು ಕೇಂದ್ರ ಮತ್ತು ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಖಂಡಿಸಿ, ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕುರುಬೂರು ಶಾಂತಕುಮಾರ್, ಕಬ್ಬಿಗೆ ಬಳಸುವ ರಸಗೊಬ್ಬರ, ಪೊಟಾಷ್ ಚೀಲಕ್ಕೆ 900 ರೂ., ಡಿಎಪಿ ಬೆಲೆ ರೂ.350 ಏರಿಕೆಯಾಗಿದೆ ಕಟಾವು ಕೂಲಿ 400 ರೂ., ಬೀಜದ ದರ ಎಕರೆಗೆ ರೂ.500 ಏರಿಕೆಯಾಗಿದೆ. ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರ ಕಬ್ಬಿನ ದರ ಕೇವಲ 150 ರೂ ಏರಿಕೆ ಮಾಡಿ ಟನ್‌ಗೆ ರೂ.3,050 ನಿಗದಿ ಮಾಡಿ ಕಬ್ಬು ಬೆಳೆಗಾರರಿಗೆ ಅನ್ಯಾಯ ಮಾಡಿದೆ. ಸರ್ಕಾರ ಈ ದರವನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರದ ವಿದ್ಯುತ್ ಖಾಸಗೀಕರಣದಿಂದ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನಿಲ್ಲುತ್ತದೆ, ಖಾಸಗೀಕರಣ ಕೈಬಿಡಬೇಕು. ಅತಿವೃಷ್ಟಿ ಮಳೆ ಹಾನಿ, ಬೆಳೆ ನಷ್ಟ ಪರಿಹಾರ ಕೂಡಲೇ ರೈತರಿಗೆ ನೀಡಬೇಕು ಎಂದು ಆಗ್ರಹಿಸಿದರು. ಮೊಸರು, ಮಜ್ಜಿಗೆ, ಹಪ್ಪಳ, ಕೃಷಿ ಉಪಕರಣಗಳು, ಹನಿ ನೀರಾವರಿ ಉಪಕರಣಗಳು, ರಸಗೊಬ್ಬರ, ಕೀಟನಾಶಕಗಳ ಮೇಲೆ ವಿಧಿಸಿರುವ ಜಿಎಸ್‌ಟಿ ರದ್ದುಗೊಳಿಸಬೇಕು. ಈ ವಿಚಾರದಲ್ಲಿ ಮೌನ ವಹಿಸಿರುವ ರಾಜ್ಯದ ಸಂಸದರು ರೈತ ದ್ರೋಹದ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ರೈತರು ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ದೆಹಲಿ ಮಾದರಿ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು. ಕಳೆದ ಐದು ವರ್ಷಗಳಲ್ಲಿ ಕೇಂದ್ರಸರ್ಕಾರ 9.90 ಲಕ್ಷಕೋಟಿ ಉದ್ದಿಮೆಗಳ ಸಾಲ ಮನ್ನಾ ಮಾಡಿದೆ. ದೇಶದ ರೈತ ಕೊರೊನಾ ಲಾಕ್‌ಡೌನ್ ಸಮಸ್ಯೆ, ಅತಿವೃಷ್ಟಿ ಹಾನಿ ಸಂಕಷ್ಟ ಅನುಭವಿಸುತ್ತಿದ್ದಾನೆ. ಇಂತಹ ಕಷ್ಟ ಕಾಲದಲ್ಲಿ ರೈತರ 5.50 ಲಕ್ಷ ಕೋಟಿ ಸಾಲ ಮನ್ನಾ ಮಾಡಲು ಸರ್ಕಾರಕ್ಕೆ ಯಾಕೆ ಸಾಧ್ಯವಾಗುತ್ತಿಲ್ಲ. ಬಂಡವಾಳಶಾಹಿಗಳ ಉದ್ದಿಮೆದಾರರ ಮರ್ಜಿಯಲ್ಲಿ ಸರ್ಕಾರ ಸಾಗುತ್ತಿದೆ ಎಂಬುದು ರುಜುವತ್ತಾಗುತ್ತಿದೆ ಎಂದು ಆರೋಪಿಸಿದರು.

ರೈತರಿಗೆ ಕೃಷಿ ಸಾಲ ನೀಡುವಾಗ, ಬ್ಯಾಂಕುಗಳು ಸಿಬಿಲ್ ಸ್ಕೋರ್ ಪರಿಗಣನೆ ಮಾಡಿ ಸಾಲ ನೀಡಬೇಕೇ, ಬೇಡವೇ ಎಂಬ ನೀತಿ ಕೈಬಿಡಬೇಕು. ಕೃಷಿ ಉತ್ಪನ್ನಗಳಿಗೆ ಖಾತರಿ ಕನಿಷ್ಠ ಬೆಂಬಲ ಬೆಲೆ ಕಾನೂನು ಶೀಘ್ರ ಜಾರಿಗೆ ತರಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಂಘದ ತಾಲೂಕು ಅಧ್ಯಕ್ಷ ಲಕ್ಷ್ಮೀಪುರ ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ವರಕೋಡು ನಾಗೇಶ್, ಕಾಟೂರು ಮಹದೇವಸ್ವಾಮಿ, ಮಹದೇವ್, ಬಸವರಾಜು, ಮಹದೇವಸ್ವಾಮಿ, ಶ್ರೀರಾಮ್, ರಾಜು, ಭಾಗ್ಯಮ್ಮ, ಸಾಕಮ್ಮ ಶಿವಣ್ಣ ಮಾಲಿಂಗನಾಯಕ್, ಬಸವರಾಜಪ್ಪ, ಮಂಜು ಲಿಂಗಣ್ಣ ಇನ್ನಿತರರು ಉಪಸ್ಥಿತರಿದ್ದರು.

ಕಬ್ಬಿನ ಎಫ್ಆರ್‌ಪಿ ದರ ಪುನರ್ ಪರಿಶೀಲನೆಗೆ ಒತ್ತಾಯಿಸಿ

ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಹೆದ್ದಾರಿ ತಡೆ





ಕಬ್ಬಿನ ಎಫ್ಆರ್‌ಪಿ ದರ ಪುನರ್ ಪರಿಶೀಲನೆಗೆ ಒತ್ತಾಯಿಸಿ ತಿ.ನರಸೀಪುರ ಹಾಗೂ ನಂಜನಗೂಡಿನಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ತಿ.ನರಸೀಪುರ, ಆ.12– ಕಬ್ಬಿನ ಎಫ್ಆರ್‌ಪಿ ದರ ಪುನರ್ ಪರಿಶೀಲಿಸಿ ಪ್ರತಿ ಟನ್‌ಗೆ 3500 ರೂ. ನಿಗದಿ ಮಾಡಬೇಕು ಹಾಗೂ ಉಪ ಉತ್ಪನ್ನಗಳ ಲಾಭ ಸೇರಿಸಿ ಹೆಚ್ಚುವರಿ ಎಎಸ್‌ಪಿ ಬೆಲೆ ನಿಗದಿಗೊಳಿಸಬೇಕೆಂದು ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಶುಕ್ರವಾರ ಗರ್ಗೇಶ್ವರಿ ಬಳಿ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್ ಮಾತನಾಡಿ, ಕಬ್ಬಿಗೆ ಬಳಸುವ ರಸಗೊಬ್ಬರ, ಪೊಟ್ಯಾಶ್, ಬಿತ್ತನೆ ಬೀಜದ ಬೆಲೆ ಏರಿಕೆಯಾಗಿದೆ. ಆದರೆ ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರ ಉತ್ತರ ಪ್ರದೇಶ ಸರ್ಕಾರಕ್ಕಿಂತ ಕಡಿಮೆ ಬೆಲೆ ನಿಗದಿ ಮಾಡಿದೆ. ಇದು ರೈತರಿಗೆ ಬಗೆದ ದ್ರೋಹ ಎಂದು ಆರೋಪಿಸಿದರು.

ವಿದ್ಯುತ್ ಖಾಸಗೀಕರಣ ಮಾಡಲು ಹೊರಟಿರುವ ಕೇಂದ್ರ ಸರ್ಕಾರದ ನಿಯಮದಿಂದ ರೈತರು ತೀವ್ರ ತೊಂದರೆಗೆ ಒಳಗಾಗುತ್ತಾರೆ. ಸರ್ಕಾರ ರೈತರ ಯಾವುದೇ ಬೆಳೆಗಳಿಗೆ ದರ ನಿಗದಿ ಮಾಡಿಲ್ಲ. ಟನ್ ಕಬ್ಬಿಗೆ 15 ರೂ. ಏರಿಕೆ ಮಾಡುವ ಮೂಲಕ ರೈತರ ಶೋಷಣೆಗೆ ಮುಂದಾಗಿದೆ. ರೈತ ಒಂದು ಟನ್ ಕಬ್ಬು ಬೆಳೆಯಲು 4500 ರೂ. ಖರ್ಚು ಮಾಡುತ್ತಾನೆ. ಸರ್ಕಾರ ರೈತರ ಹಿತ ಕಾಯದೇ ಟನ್ ಕಬ್ಬಿಗೆ 3050 ರೂ. ನಿಗದಿ ಮಾಡಿ ರೈತನ ಜೀವದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಕಿಡಿಕಾರಿದರು.

ಒಂದು ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದ್ದರಿಂದ ಸಾರ್ವಜನಿಕರು ತೀವ್ರ ಸಂಕಷ್ಟಕ್ಕೆ ಒಳಗಾದರು. ರಸ್ತೆ ಸಂಚಾರದಲ್ಲಿ ಭಾರೀ ವ್ಯತ್ಯಯ ಉಂಟಾಗಿ ಎರಡೂ ಕಡೆ ಕಿಮೀಗಟ್ಟಲೆ ವಾಹನಗಳು ನಿಲ್ಲುವಂತಾಯಿತು.

ಪ್ರತಿಭಟನಾನಿರತರ ಬಂಧನ, ಬಿಡುಗಡೆ: ರಸ್ತೆ ತಡೆಯಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾದ ಹಿನ್ನೆಲೆಯಲ್ಲಿ ಪ್ರತಿಭಟನೆ ಅಂತ್ಯಗೊಳಿಸುವಂತೆ ಪೊಲೀಸರು ರೈತ ಮುಖಂಡರ ಮನವೊಲಿಸಲು ಪ್ರಯತ್ನಿಸಿದರು. ಆದರೆ ಪಟ್ಟು ಬಿಡದ ರೈತರು ರಸ್ತೆ ತಡೆ ಮುಂದುವರೆಸಿದರಿಂದ ರೈತ ಮುಖಂಡರನ್ನು ಬಂಧಿಸಿದ ಪೊಲೀಸರು ರಸ್ತೆ ತಡೆ ತೆರವುಗೊಳಿಸಿ, ನಂತರ ಅವರನ್ನು ಬಿಡುಗಡೆಗೊಳಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ಟೌನ್ ಅಧ್ಯಕ್ಷ ಕಿರಗಸೂರು ಪ್ರಸಾದ್ ನಾಯಕ್, ಜಿಲ್ಲಾ ಕಾರ್ಯದರ್ಶಿ ಪರಿಮಮೂರ್ತಿ, ಅಪ್ಪಣ್ಣ ಹುಪ್ಪ ಪುಟ್ಟಸ್ವಾಮಿ, ವಾಚ್ ಕುಮಾರ್, ಯೋಗೇಶ್, ನಿಂಗರಾಜು, ನಿಲಸೋಗೆ ನಾಗರಾಜು, ರವಿ, ಸಂತೋಷ್, ಕುರುಬೂರು ಲೋಕೇಶ್, ಶಾಂತರಾಜು, ವಿ.ಸುರೇಶ್ ಸೇರಿದಂತೆ ನೂರಾರು ಮಂದಿ ರೈತರು ಭಾಗವಹಿಸಿದ್ದರು.

ನಂಜನಗೂಡು: ಕಬ್ಬಿನ ಎಫ್ಆರ್‌ಪಿ ದರ ಪುನರ್ ಪರಿಶೀಲಿಸುವಂತೆ ಆಗ್ರಹಿಸಿ ಪಟ್ಟಣದಲ್ಲಿ ರೈತರು ರಸ್ತೆತಡೆ ನಡೆಸಿ ಪ್ರತಿಭಟನೆ ನಡೆಸಿದರು. ನಗರದ ಮೈಸೂರು–ಗುಂಡ್ಲುಪೇಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಹೆದ್ದಾರಿ ತಡೆದು ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹೆದ್ದಾರಿ ತಡೆಯಿಂದ ಅರ್ಧ ಗಂಟೆ ಕಾಲ ಹೆದ್ದಾರಿ ಸಂಚಾರ ಅಸ್ತವ್ಯಸ್ತ ವಾಗಿತ್ತು. ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷ ಹಾಡ್ಯ ರವಿ ಮಾತನಾಡಿದರು. ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್ ಸೇರಿದಂತೆ ರೈತರು ಹಾಜರಿದ್ದರು.

ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ಹೆಚ್.ಡಿ.ಕೋಟೆ, ಆ.12– ಚುನಾವಣೆ ವೇಳೆ ಆಡಿದ ಮಾತಿನಂತೆ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ತಾಲೂಕಿನ ಗ್ರಾಮಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಕೊತ್ತನಹಳ್ಳಿ ಗ್ರಾಮದಲ್ಲಿ ನೀರಾವರಿ ಇಲಾಖೆಯಿಂದ 50 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಅನುದಾನ ತಂದು ಪರಿಶಿಷ್ಟ ಜಾತಿ ಹಾಗೂ ಪಂಗಡ ವರ್ಗದ ಬೀದಿಗಳಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿ ಮಾಡಲಾಗಿದೆ. ಅದೇ ರೀತಿ ಸಾಮಾನ್ಯ ವರ್ಗದ ಬೀದಿಗಳಲ್ಲಿಯೂ ಸಹ ಕಾಂಕ್ರೀಟ್ ರಸ್ತೆ ಮಾಡಲು ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಿ 17 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಲಾಗಿದೆ. ಮುಂದಿನ ದಿನಗಳಲ್ಲಿ ತಾಲೂಕಿನ ಎಲ್ಲಾ ವರ್ಗದ ಬೀದಿಗಳೂ ಅಭಿವೃದ್ಧಿ ಕಾಣಲಿದೆ ಎಂದರು.

ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಉತ್ತಮ ಒಡನಾಟ ಇಟ್ಟುಕೊಂಡಿದ್ದು, ತಾಲೂಕಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತರುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಇದೇ ಸಂದರ್ಭ ಗ್ರಾಪಂ ಸದಸ್ಯರಾದ ನಾಗನಾಯಕ, ನಾಗೇಶ, ಮಂಜು, ಮೌಲನ್, ಮುಖಂಡರಾದ ನಾಗನಹಳ್ಳಿ ಪ್ರದೀಪ, ಅಶೋಕ್, ಪುಟ್ಟೇಗೌಡ, ಲಿಂಗೇಗೌಡ, ಸುರೇಶ್, ನಾಗರಾಜು, ಶ್ರೀನಿವಾಸ್, ಸಣ್ಣೇಗೌಡ, ತಾರಕ ನೀರಾವರಿ ಇಲಾಖೆ ಸಹಾಯಕ ಕಾರ್ಯ ಪಾಲಕ ಅಭಿಯಂತರ ರಾಮೇಗೌಡ, ಸಹಾಯಕ ಇಂಜಿನಿಯರ್ ಮಂಜುನಾಥ್, ಪಿಡಿಓ ಸಂತೋಷ್ ನಾಗ್ ಇತರರಿದ್ದರು.

ಹುರ ಗ್ರಾಮದ ಕೆರೆಗೆ ಬಾಗಿನ ಅರ್ಪಣೆ



ಹುಲ್ಲಹಳ್ಳಿ(?) [ವರುಣಾ?]

ವ್ಯಲ್ಯಕ್ಕಂಡಿ, ಆ.12– ಸತತ ಮಳೆಯಿಂದ ಇಲ್ಲಿಗೆ ಸಮೀಪದ ಹುರ ಗ್ರಾಮದ ಕೆರೆ ಭರ್ತಿಯಾದ ಹಿನ್ನೆಲೆಯಲ್ಲಿ ಗ್ರಾಪಂ ಅಧ್ಯಕ್ಷ ಚಂದ್ರು ಕೆರೆಗೆ ಬಾಗಿನ ಅರ್ಪಿಸಿದರು.

ಹುರ ಗ್ರಾಮದ ಕೆರೆ ತುಂಬಿ ಕೋಡಿ ಬಿದ್ದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಗ್ರಾಮದ ಗಣಪತಿ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಕೆರೆಗೆ ಗ್ರಾಪಂ ಅಧ್ಯಕ್ಷ ಚಂದ್ರು ಹಾಗೂ ಗ್ರಾಮಸ್ಥರು ಬಾಗಿನ ಅರ್ಪಿಸಿದರು.

ಬಳಿಕ ಮಾತನಾಡಿದ ಗ್ರಾಪಂ ಅಧ್ಯಕ್ಷ ಚಂದ್ರು, ಸತತ ಮಳೆಯಿಂದಾಗಿ ಹಲವು ವರ್ಷಗಳ ಬಳಿಕ ಕೆರೆ ಭರ್ತಿಯಾಗಿರುವುದು ಸಂತಸದ ವಿಚಾರ. ಆದರೆ ಮತ್ತೊಂದೆಡೆ ರೈತರ ಫಸಲು ಹಾಗೂ ಮನೆ ಕುಸಿದು ಬಿದ್ದಿದ್ದು, ಸರ್ಕಾರ ಸೂಕ್ತ ಪರಿಹಾರ ನೀಡ ಬೇಕು ಎಂದು ಒತ್ತಾಯಿಸಿದ ಅವರು, ಕೆರೆ ತುಂಬಿರುವುದರಿಂದ ರೈತರ ಕೃಷಿ ಚಟು ವಟಿಕೆಗೆ ಅನುಕೂಲವಾಗಲಿದೆ. ಅಲ್ಲದೇ ಜನ ಜಾನುವಾರುಗಳಿಗೆ ಕುಡಿಯಲು ನೀರು ಅಭಾವ ತಪ್ಪಿದೆ ಎಂದರು. ಈ ವೇಳೆ ಗ್ರಾಮದ ಮುಖಂಡರು ಹಾಜರಿದ್ದರು.

ಕೊಪ್ಪದಲ್ಲಿ ನೂತನ ವಾಣಿಜ್ಯ ಮಳಿಗೆಗಳ ಉದ್ಘಾಟನೆ



ಬೈಲಕುಪ್ಪೆ, ಆ.12– ಬೈಲಕುಪ್ಪೆ ಮತ್ತು ಕೊಪ್ಪ ಗ್ರಾಪಂಗಳು ವಾಣಿಜ್ಯ ವ್ಯಾಪಾರದಲ್ಲಿ ಮುನ್ನುಗ್ಗುತ್ತಿರುವುದನ್ನು ನೋಡಿದರೆ ಮುಂದಿನ ದಿನಗಳಲ್ಲಿ ಪಿರಿಯಾಪಟ್ಟಣವನ್ನು ಮೀರಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದಲ್ಲಿ 14 ಮತ್ತು 15ನೇ ಹಣಕಾಸು, ಜೊತೆಗೆ ಸ್ವಂತ ಸಂಪನ್ಮೂಲದಿಂದ ಒಟ್ಟಾರೆ 29 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ನೂತನ ವಾಣಿಜ್ಯ ಮಳಿಗೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕ ಕೆ.ಮಹದೇವ್ ಮಾತನಾಡಿ, ನೂತನ ಮಳಿಗೆಗಳಿಂದ ಬರುವ ಲಾಭವನ್ನು ಪಂಚಾಯತಿ ಅಭಿವೃದ್ಧಿಗೆ ಮೀಸಲಿಡಬೇಕು. ನಾನು ಶಾಸಕನಾದ ಮೇಲೆ ಕೊಪ್ಪ ಗ್ರಾಮಕ್ಕೆ 10 ಕೋಟಿಗೂ ಅಧಿಕ ಹಣ ಮಂಜೂರು ಮಾಡಿಸಿದ್ದೇನೆ. ಮುಂಬರುವ ದಿನಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬರುವ ಎಲ್ಲಾ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಿ ಎಂದರು.

ಇದೇ ವೇಳೆ ಕೊಪ್ಪ ಗ್ರಾಪಂ ಸದಸ್ಯರನ್ನು ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಕೆ.ಮಹದೇವ್ ಸನ್ಮಾನಿಸಿದರು. ತಾಪಂ ಇಓ ಕೃಷ್ಣಕುಮಾರ್, ಕೃಷಿ ಅಧಿಕಾರಿ ಪ್ರಸಾದ್, ಕಾರ್ಯಪಾಲ ಅಭಿಯಂತರ ಜಯಂತ್, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಕೊಪ್ಪ ಗ್ರಾಪಂ ಅಧ್ಯಕ್ಷ ರೇಣುಕಾಸ್ವಾಮಿ, ಉಪಾಧ್ಯಕ್ಷೆ ಸಿಂಧು, ಸದಸ್ಯರಾದ ಬಸವರಾಜ್, ರಾಮಚಂದ್ರ, ನಾರಾಯಣ, ಕೃಷ್ಣಹರಿಣಿ, ದ್ರಾಕ್ಷಾಯಿಣಿ, ಶಾಂತಮ್ಮ, ಶೀಲ, ನೀಲಮ್ಮ, ಸೈಯದ್ ರಿಯಾಜ್, ಅಕ್ಕಯಮ್ಮ, ಮಲ್ಲಮ್ಮ, ಜಾಫರ್ ಷರೀಫ್, ಪೂರ್ಣಿಮಾ, ಬಿಜೆಪಿ ತಾಲೂಕು ಅಧ್ಯಕ್ಷ ಎಂ.ಎಂ. ರಾಜೇಗೌಡ ಮುಖಂಡ ಟಿ.ಈರಯ್ಯ, ಬೈಲಕುಪ್ಪೆ ಎಸ್ಐ ಎಸ್.ಯು.ಬಸವರಾಜು ಮತ್ತಿತರರಿದ್ದರು.

ಹುಲ್ಲಹಳ್ಳಿ ನಾಲೆ ಒತ್ತುವರಿ; ಡಿಸಿ ಆದೇಶದ ಮೇರೆಗೆ ಸರ್ವೇ



ತಿ.ನರಸೀಪುರ, ಆ.12– ಪಟ್ಟಣದ ಪುರಸಭಾ ವ್ಯಾಪ್ತಿಯ ಹುಲ್ಲಹಳ್ಳಿ ನಾಲೆ ಒತ್ತುವರಿಯಾಗಿ ಅಕ್ರಮ ವಾಣಿಜ್ಯ ಮಳಿಗೆ ತಲೆ ಎತ್ತಿದೆ ಎಂಬ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಶುಕ್ರವಾರ ಸರ್ವೇ ಕಾರ್ಯ ನಡೆಸಲಾಯಿತು.

ಪಟ್ಟಣದ ಗುರುಭವನದ ಪಕ್ಕ ಹಾದು ಹೋಗಿರುವ ಹುಲ್ಲಹಳ್ಳಿ ನಾಲೆ ಮುಚ್ಚಿ ಈಗ ಸರ್ಕಾರದಿಂದ ರಸ್ತೆ ನಿರ್ಮಾಣ ಮಾಡಲಾಗಿದೆ. ಆದರೆ ಹುಲ್ಲಹಳ್ಳಿ ನಾಲಾ ವ್ಯಾಪ್ತಿಗೆ ಬರುವ ಇತರೆಡೆ ಒತ್ತುವರಿ ಮಾಡಿ ಪುರಸಭಾ ಸದಸ್ಯರೊಬ್ಬರು ಕಟ್ಟಡ ನಿರ್ಮಾಣ ಮಾಡಿಕೊಂಡಿದ್ದಾರೆಂಬ ಆರೋಪ ಎದುರಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಪುರಸಭಾ ಸದಸ್ಯರಾದ ಎಸ್.ಕೆ.ಕಿರಣ್ ಹಾಗೂ ಟಿ.ಎಂ.ನಂಜುಂಡಸ್ವಾಮಿ ನಡುವೆ ಪರಸ್ಪರ ಪತ್ರಿಕಾ ಹೇಳಿಕೆಗಳು ನಡೆದು, ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಸದಸ್ಯ ಕಿರಣ್ ಮೇಲೆ ಹಲ್ಲೆ ಸಹ ನಡೆದಿತ್ತು. ಈ ಪ್ರಕರಣ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೂ ತಲುಪಿತ್ತು. ಘಟನೆ ತೀವ್ರ ಸ್ವರೂಪ ಪಡೆಯುತ್ತಿದ್ದ ಬೆನ್ನಲ್ಲೇ ಇಂದು ವಿವಾದಿತ ಪ್ರದೇಶದ ಸರ್ವೇ ಕಾರ್ಯ ತಾಲೂಕು ಸರ್ವೇಯರ್ ವಿಜಯ ಕುಮಾರ್ ನೇತೃತ್ವದಲ್ಲಿ ನಡೆಸಲಾಯಿತು. ಹುಲ್ಲಹಳ್ಳಿ ನಾಲೆ ಹಾದು ಹೋಗಿರುವ ವಿನಾಯಕ ಕಾಲೋನಿ ಹಾಗೂ ಅದಕ್ಕೆ ಹೊಂದಿಕೊಂಡಂತಿದ್ದ ಲಿಂಕ್ ರಸ್ತೆಯಲ್ಲೂ ಸರ್ವೇ ನಡೆಯಿತು.

ಆತಂಕದಲ್ಲಿ ನಿವಾಸಿಗಳು: ಉದ್ದೇಶಿತ ಸರ್ವೇ ಕಾರ್ಯ ನಡೆಸಲು ಇಂದು ದಿನಾಂಕ ನಿಗದಿಯಾಗಿತ್ತು. ವಿವಾದಿತ ಪ್ರದೇಶದಲ್ಲಿ ಪೊಲೀಸರು ಬಂದೋಬಸ್ತ್ ಮಾಡಿದ್ದರು. ಪೊಲೀಸರ ವಾಹನ ವಿನಾಯಕ ಕಾಲೋನಿಗೆ ಪ್ರವೇಶಿಸುತ್ತಿದ್ದಂತೆ ಸರ್ವೇ ಕಾರ್ಯ ಆರಂಭಗೊಂಡಿತಾದರೂ, ನಿವಾಸಿಗಳು ಆತಂಕಕ್ಕೊಳಗಾದರು. ಅಕ್ರಮ ಖಾತೆ ಮಾಡಿಸಿಕೊಂಡು ವಾಣಿಜ್ಯ ಕಟ್ಟಡ ನಿರ್ಮಿಸಿದ್ದರೆನ್ನಲಾದ ಸ್ಥಳ, ಇತರೆ ಕಟ್ಟಡಗಳ ಆಸುಪಾಸಿನಲ್ಲಿರುವುದರಿಂದ ನಮ್ಮ ಮನೆಗಳಿಗೂ ತೊಂದರೆಯಾಗಬಹುದೆಂಬ ಆತಂಕ ನಿವಾಸಿಗಳಲ್ಲಿ ಕಂಡು ಬಂತು.

ಸರ್ವೇ ಕಾರ್ಯದಲ್ಲಿ ರಾಜ್ಯಸ್ವ ನಿರೀಕ್ಷಕ ಸರ್ವೇಶ್, ಪುರಸಭೆ ಕಂದಾಯಾಧಿಕಾರಿ ಪುಟ್ಟಸ್ವಾಮಿ, ಸಹಾಯಕರಾದ ರಾಜೇಶ್, ರಾಜು ಮತ್ತಿತರರಿದ್ದರು. ಅಪರಾಧ ವಿಭಾಗದ ಎಸ್ಐ ಮಹೇಶ್ ಕುಮಾರ್, ಪಚ್ಚೇಗೌಡ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ರಸ್ತೆ, ಚರಂಡಿ, ಕಾಂಪೌಂಡ್ ಕಾಮಗಾರಿಗೆ ಚಾಲನೆ




ನಂಜನಗೂಡು, ಆ.12– ಪಟ್ಟಣದಲ್ಲಿ 7.4 ಕೋಟಿ ವೆಚ್ಚದಲ್ಲಿ ಮಿನಿ ವಿಧಾನ ಸೌಧದ ಕಾಂಪೌಂಡ್, ರಸ್ತೆ, ಕೊರೆ ಹುಂಡಿ, ಚಾಮಲಾಪುರದ ಹುಂಡಿ ಬಡಾವಣೆಗಳಲ್ಲಿ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಬಿ.ಹರ್ಷವರ್ಧನ್ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಶಾಸಕನಾಗಿ ನಾನು ಕಳೆದ 4 ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ನಾನು ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳೊಂದಿಗೆ ಸಾರ್ವಜನಿಕರ ಬಳಿ ಮತಯಾಚಿಸುತ್ತೇನೆ. ಚುನಾವಣೆ ಸಂದರ್ಭ ಕ್ಷೇತ್ರದ ರಸ್ತೆಗಳು ಸಂಪೂರ್ಣ ಹದಗೆಟ್ಟಿದ್ದನ್ನು ಅರಿತು ಶಾಸಕನಾದ ಬಳಿಕ ಕ್ಷೇತ್ರಕ್ಕೆ ಸರ್ಕಾರದಿಂದ 600 ಕೋಟಿಗೂ ಹೆಚ್ಚು ಅನುದಾನ ತಂದು ಎಲ್ಲಾ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಿದ್ದೇನೆ. ಪಟ್ಟಣದ ಹಲವು ವಾರ್ಡ್‌ಗಳ ರಸ್ತೆಗಳು ಹದ್ದಗೆಟ್ಟಿರುವುದು ನನ್ನ ಗಮನಕ್ಕೆ ಬಂದಿದ್ದು, ಅದನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸುತ್ತಿದ್ದೇನೆ. ಇದೀಗ ಮೂಡ ವತಿಯಿಂದ ಪಟ್ಟಣಕ್ಕೆ 7.40 ಕೋಟಿ ಅನುದಾನ ನೀಡಲಾಗಿದೆ. ಸಾರ್ವಜನಿಕರು ಗುಣಮಟ್ಟದ ಕಾಮಗಾರಿಗೆ ಸಹಕರಿಸಬೇಕು ಎಂದರು.

ಈ ವೇಳೆ ನಗರಸಭಾಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಸದಸ್ಯರಾದ ಸಿದ್ದರಾಜು, ಮಹದೇವಪ್ರಸಾದ್, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ನಗರಸಭಾ ಆಯುಕ್ತ ರಾಜಣ್ಣ, ಬಿಜೆಪಿ ತಾಲೂಕು ಪ್ರಧಾನ ಕಾರ್ಯದರ್ಶಿ ವಳಗರೆ ಪುಟ್ಟಸ್ವಾಮಿ ಸೇರಿದಂತೆ ಇತರರಿದ್ದರು.

ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಗೊಂಡ ಮುಖಂಡರು

ನಂಬಿ ಬಂದವರನ್ನು ನಾನು ಯಾವತ್ತು ಕೈ ಬಿಟ್ಟಿಲ್ಲ: ಸಾರಾ



ಭೇರ್ಯ, ಆ.12– ಹಲವು ಮುಖಂಡರು ಕಾಂಗ್ರೆಸ್ ತೊರೆದು ಜೆಡಿಎಸ್‌ನತ್ತ ಒಲವು ತೋರುತ್ತಿರುವುದರಿಂದ ಪಕ್ಷ ಸಂಘಟನೆ ಮತ್ತಷ್ಟು ಬಲಿಷ್ಠವಾಗಿದೆ. ನನ್ನ ನಂಬಿ ಬಂದವರನ್ನು ನಾನು ಯಾವತ್ತು ಕೈ ಬಿಟ್ಟಿಲ್ಲ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಬಾಚಹಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ತೊರೆದ ಕುರುಬ ಸಮಾಜದ ಹಲವು ಯುವಕರು ಹಾಗೂ ಮುಖಂಡರನ್ನು ತೆನೆ ಹೊತ್ತ ರೈತ ಮಹಿಳೆ ಶಾಲು ಹೊದಿಸಿ ಜೆಡಿಎಸ್ ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ಪಕ್ಷದ ತತ್ವ ಸಿದ್ಧಾಂತ ಒಪ್ಪಿ ಇತರೆ ಪಕ್ಷಗಳ ಮುಖಂಡರು ಜೆಡಿಎಸ್‌ನತ್ತ ಮುಖ ಮಾಡುತ್ತಿರುವುದು ಪಕ್ಷದ ಸಂಘಟನೆಗೆ ಮತ್ತಷ್ಟು ಬಲ ಬಂದಿದೆ. ಮುಂಬರುವ ಜಿಪಂ ಹಾಗೂ ತಾಪಂ ಚುನಾವಣೆಯಲ್ಲಿ ಪಕ್ಷ ಹೆಚ್ಚಿನ ಸ್ಥಾನ ಗಳಿಸಲು ಕ್ಷೇತ್ರಾದ್ಯಂತ ಪ್ರವಾಸ ಕೈಗೊಂಡಿದ್ದೇನೆ ಎಂದರು.

ರಾಜ್ಯದಲ್ಲಿ ಜೆಡಿಎಸ್ ಬೆಂಬಲವಿಲ್ಲದೇ ಯಾವುದೇ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬುದನ್ನು ರಾಜ್ಯದ ಜನರು ನಗರಪಾಲಿಕೆ ಚುನಾವಣೆಯಲ್ಲಿ ಮನದಟ್ಟು ಮಾಡಿಕೊಟ್ಟಿದ್ದಾರೆ. ಇದನ್ನರಿತು ವಿವಿಧ ಪಕ್ಷದ ಮುಖಂಡರು ಜೆಡಿಎಸ್‌ನತ್ತ ಮುಖ ಮಾಡುತ್ತಿದ್ದಾರೆ ಎಂದರು.

ಕುರುಬ ಸಮಾಜದ ಮುಖಂಡರು ಮಾತನಾಡಿ, ಶಾಸಕ ಸಾ.ರಾ.ಮಹೇಶ್ ಅಭಿವೃದ್ಧಿ ಕಾರ್ಯ ಹಾಗೂ ಜಾತಿಬೇಧವಿಲ್ಲದೆ ಮಾಡುತ್ತಿರುವ ರಾಜಕೀಯ ಸೇವೆ ನೋಡಿ ಅವರನ್ನು ಬೆಂಬಲಿಸುವ ಉದ್ದೇಶದಿಂದ ನಾವು ಜೆಡಿಎಸ್ ಸೇರುತ್ತಿದ್ದೇವೆ ಎಂದರು.

ಇದೇ ವೇಳೆ ಗ್ರಾಮದ ರಘು, ಟೈಲರ್ ಚಿಕ್ಕೇಗೌಡ, ಪ್ರಕಾಶ್, ಕುಮಾರ್, ಯ.ಕಾಳೇಗೌಡ, ಯ.ಪುಟ್ಟಸ್ವಾಮಿಗೌಡ, ಚಿಕ್ಕೇಗೌಡ, ಹರೀಶ, ಬಿ.ಎಸ್.ಚಂದ್ರು, ಮಂಜು ಬಿ.ಎಸ್., ಗಾಡಿ ಮಂಜು, ಪುನೀತ್, ಸಣ್ಣಚಿಕ್ಕೇಗೌಡ, ಮಹದೇವ, ಚಲುವರಾಜು, ಶಿವರಾಜು, ಪ್ರದೀಪ್, ಅನಿಲ್ ಕುಮಾರ್, ಗೋವಿಂದೇಗೌಡ, ಯೋಗೇಶ, ಹರೀಶ್ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಸೇರ್ಪಡೆಯಾದರು.

ಈ ವೇಳೆ ಸಾಲಿಗ್ರಾಮ ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ದ್ವಾರಕೀಶ್, ತಾಪಂ ಮಾಜಿ ಅಧ್ಯಕ್ಷ ರವಿ, ಮಾಜಿ ಸದಸ್ಯ ನಾಗಣ್ಣ, ಮೇಲೂರು ಗ್ರಾಪಂ ಅಧ್ಯಕ್ಷ ನರೇಂದ್ರ, ಭೇರ್ಯ ಗ್ರಾಪಂ ಉಪಾಧ್ಯಕ್ಷ ಬಿ.ಕೆ.ಶಿವಕುಮಾರ್, ಸದಸ್ಯರಾದ ಬಿ.ಕೆ.ಕುಮಾರ್, ಮುಖಂಡರಾದ ನಾಗಣ್ಣ, ಚಿದಂಬರನಾಯಕ, ಚೆಲುವರಾಜ್, ಲೋಕೇಶ್, ತನು, ಮಂಜೇಗೌಡ, ಲಾಲೂ ಸಾಬ್, ಯಶವಂತ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಪಿರಿಯಾಪಟ್ಟಣ ತಾಲೂಕು ಬಿಜೆಪಿ ಯುವ ಘಟಕದಿಂದ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಬೈಕ್ ರ್‍ಯಾಲಿಗೆ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ, ಮುಖಂಡರಾದ ಸೋಮಶೇಖರ್, ಆರ್.ಟಿ.ಸತೀಶ್, ಹೆಚ್.ಸಿ.ಬಸವರಾಜ್, ವಿಕ್ರಂರಾಜ್ ಸೇರಿದಂತೆ ನೂರಾರು ಕಾರ್ಯಕರ್ತರಿದ್ದರು.

ಜಾನುವಾರು ಸಾಗಿಸುತ್ತಿದ್ದ ಐವರ ಬಂಧನ

ನಂಜನಗೂಡು, ಆ.12– ಟಾಟಾ ಏಸ್‌ನಲ್ಲಿ ಅಕ್ರಮವಾಗಿ ಜಾನುವಾರು ಸಾಗಿಸುತ್ತಿದ್ದ ಐವರು ಆರೋಪಿಗಳನ್ನು ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹುಣಸೂರಿನಿಂದ ಕೇರಳಕ್ಕೆ ಟಾಟಾ ಏಸ್ ವಾಹನದಲ್ಲಿ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಶುಕ್ರವಾರ ಮುಂಜಾನೆ ದಾಳಿ ನಡೆಸಿದ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು, ಪಟ್ಟಣದ ಹುಲ್ಲಹಳ್ಳಿ ರಸ್ತೆಯ ಆದರ್ಶ ಶಾಲೆ ಮುಂಭಾಗ ವಾಹನ ತಡೆದು ಪರಿಶೀಲಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಈ ವೇಳೆ ಮೊಹಮ್ಮದ್ ಫೈರುಜ್, ಷಫೀರ್ ಸೇರಿದಂತೆ ಐವರನ್ನು ಬಂಧಿಸಿ ವಾಹನದಲ್ಲಿದ್ದ 11 ಜಾನುವಾರುಗಳನ್ನು ರಕ್ಷಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಪಿಐ ಶಿವನಂಜಶೆಟ್ಟಿ, ಸಿಬ್ಬಂದಿಗಳಾದ ಚೇತನ್, ಸುರೇಶ್ ಇನ್ನಿತರರಿದ್ದರು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ನಂಜನಗೂಡು, ಆ.12– ರಸ್ತೆ ಬದಿ ನಿಂತಿದ್ದ ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ದೊಡ್ಡ ಕೌಲಂದೆ ಗ್ರಾಮದ ಬಳಿ ಸಂಭವಿಸಿದೆ.

ತಾಲೂಕಿನ ಬದನವಾಳು ಗ್ರಾಮದ ನಿವಾಸಿ ಹಾಗೂ ನೆಸ್ಲೆ ಫ್ಯಾಕ್ಟರಿ ನೌಕರ ಹರೀಶ್(36) ಸಾವನ್ನಪ್ಪಿದವರು. ಇವರು ಗುರುವಾರ ರಾತ್ರಿ ರಸ್ತೆ ಬದಿ ಬೈಕ್ ನಿಲ್ಲಿಸಿಕೊಂಡು ನಿಂತಿದ್ದಾಗ ವೇಗವಾಗಿ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಹರೀಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ದೊಡ್ಡಕೌಲಂದೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಳಿಕ ಶವವನ್ನು ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ.

ಲೀಲಾವತಿ ನಿಧನ



ಸರಗೂರು, ಆ.12– ಪಟ್ಟಣದ ಲಾರಿ ಚಿನ್ನಪ್ಪನವರ ಸೊಸೆ, ವಿಜಯ ಟ್ರಾನ್ಸ್ ಪೋರ್ಟ್ ಮಾಲೀಕ ಎಸ್.ವಿ. ಯೋಗೇಶ್ ಅವರ ಪತ್ನಿ, ಲೀಲಾವತಿ (68) ಶುಕ್ರವಾರ ನಿಧನರಾದರು. ಮೃತರು ಪತಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ವೀರಶೈವ ಸಮಾಜದ ರುದ್ರಭೂಮಿಯಲ್ಲಿ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸೀತಾರಾಮಂ (ತೆ): ಬೆ.10ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಮ.1.30ಕ್ಕೆ, ಲಾಲ್ ಸಿಂಗ್ ಚಡ್ಡಾ (ಹಿಂ): ಸಂ.4.05ಕ್ಕೆ, ರಾ.9.45ಕ್ಕೆ, ರಕ್ಷಾಬಂಧನ್ (ಹಿಂ): ರಾ.7.25ಕ್ಕೆ.
ಸ್ಕ್ರೀನ್ 2	ರವಿ ಬೋಪಣ್ಣ (ಕ): ಬೆ.11ಕ್ಕೆ, ಮ.1.40ಕ್ಕೆ, ರಕ್ಷಾಬಂಧನ್ (ಹಿಂ): ಸಂ.4.30ಕ್ಕೆ, ವಿಕ್ರಾಂತ್‌ರೋಣ (3ಡಿ)(ಕ): ಸಂ.6.55ಕ್ಕೆ, ಗಾಳಿಪಟ–2 (ಕ): ರಾ.10ಕ್ಕೆ.
ಸ್ಕ್ರೀನ್ 3	ಎನ್ನ ತಾನ್ ಕೇಸ್ ಕೊಡು (ಮ): ಬೆ.10.20ಕ್ಕೆ, ವಿರುಮನ್ (ತ): ಮ.1.05ಕ್ಕೆ, ಸಂ.4.05ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಸಂ.6.55ಕ್ಕೆ, ಥಲ್ಲುಮಾಲ (ಮ): ರಾ.10ಕ್ಕೆ.
ಸ್ಕ್ರೀನ್ 4	ಗಾಳಿಪಟ–2 (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಮಾಚೆರ್ಲಾ ನಿಯೋಜಕ ವರ್ಗಂ (ತೆ): ರಾ.9.55ಕ್ಕೆ

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಳಿಪಟ–2 (ಕ): ಬೆ.10.05ಕ್ಕೆ, ವಿಕ್ರಾಂತ್‌ರೋಣ (3ಡಿ)(ಕ): ಮ.1.10ಕ್ಕೆ, ರಾ.7.05ಕ್ಕೆ, ರವಿ ಬೋಪಣ್ಣ (ಕ): ಸಂ.4.15ಕ್ಕೆ, ಮಾಚೆರ್ಲಾ ನಿಯೋಜಕ ವರ್ಗಂ (ತೆ): ರಾ.10.10ಕ್ಕೆ.
ಸ್ಕ್ರೀನ್ 2	ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.9.50ಕ್ಕೆ, ರಕ್ಷಾಬಂಧನ್ (ಹಿಂ): ಮ.1.15ಕ್ಕೆ, ಗಾಳಿಪಟ–2 (ಕ): ಮ.3.40ಕ್ಕೆ, ಸಂ.6.45ಕ್ಕೆ, ವಿರುಮನ್ (ತ): ರಾ.10ಕ್ಕೆ.
ಸ್ಕ್ರೀನ್ 3	ರಕ್ಷಾಬಂಧನ್ (ಹಿಂ): ಬೆ.9.55ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ರವಿ ಬೋಪಣ್ಣ (ಕ): ಬೆ.10.50ಕ್ಕೆ, ವಿರುಮನ್ (ತ): ಮ.1.40ಕ್ಕೆ, ರಕ್ಷಾಬಂಧನ್ (ಹಿಂ): ಸಂ.4.45ಕ್ಕೆ, ರಾ.10.30ಕ್ಕೆ, ಸೀತಾರಾಮಂ (ತೆ): ರಾ.7.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಕ್ಷಾಬಂಧನ್ (ಹಿಂ): ಬೆ.10.50ಕ್ಕೆ, ಸೀತಾರಾಮಂ (ತೆ): ಮ.1ಕ್ಕೆ, ರವಿ ಬೋಪಣ್ಣ (ಕ): ಸಂ.4ಕ್ಕೆ, ಥಲ್ಲುಮಾಲ (ಮ): ಸಂ.6.35ಕ್ಕೆ, ವಿರುಮನ್ (ತ): ರಾ.9.25ಕ್ಕೆ.
ಸ್ಕ್ರೀನ್ 2	ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.10.30ಕ್ಕೆ, ಸಂ.4ಕ್ಕೆ, ರಾ.9.15ಕ್ಕೆ, ರಕ್ಷಾಬಂಧನ್ (ಹಿಂ): ಸಂ.1.45ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 3	ಗಾಳಿಪಟ–2 (ಕ): ಬೆ.10.15ಕ್ಕೆ, ಮ.1.05ಕ್ಕೆ, ಮ.3.55ಕ್ಕೆ, ಸಂ.6.45ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ರಾ.9.35ಕ್ಕೆ.
ಸ್ಕ್ರೀನ್ 4	ವಿಕ್ರಾಂತ್ ರೋಣ (ಕ): ಬೆ.10.30ಕ್ಕೆ, ರವಿಬೋಪಣ್ಣ (ಕ): ಮ.1.25ಕ್ಕೆ, ವಿರುಮನ್ (ತ): ಸಂ.4ಕ್ಕೆ, ಸಂ.6.50ಕ್ಕೆ, ಗಾಳಿಪಟ–2 (ಕ): ರಾ.9.40ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಬೆ.9.10ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ರವಿ ಬೋಪಣ್ಣ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ವಿಕ್ರಾಂತ್ ರೋಣ (3ಡಿ)(ಕ): ಮ.3.50ಕ್ಕೆ, ರಾ.10.10ಕ್ಕೆ, ವಿರುಮನ್ (ತ): ಬೆ.9.30ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ಥಲ್ಲುಮಾಲ (ಮ): ಸಂ.4.10ಕ್ಕೆ, ಮಾರ್ಚೆಲಾ ನಿಯೋಜಕ ವರ್ಗಂ (ತೆ): ರಾ.9.40ಕ್ಕೆ, ಕಾರ್ತಿಕೇಯ–2(ತೆ): ಮ.12.20ಕ್ಕೆ, ರಕ್ಷಾಬಂಧನ್ (ಹಿಂ): ಬೆ.10.25ಕ್ಕೆ, ಮ.1.40ಕ್ಕೆ, ಸಂ.4.20ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ, ಲಾಲ್‌ಸಿಂಗ್ ಚಡ್ಡಾ (ಹಿಂ): ಬೆ.8.50ಕ್ಕೆ, ಮ.12.15ಕ್ಕೆ, ಮ.12.55ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿರುಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲಾಲ್‌ಸಿಂಗ್ ಚೆಡ್ಡಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರವಿ ಬೋಪಣ್ಣ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗಾಳಿಪಟ–2 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ರಕ್ಷಾಬಂಧನ್ (ಹಿಂ)	4 ಪ್ರದರ್ಶನಗಳು
ಸಂಗಂ	
ರವಿ ಬೋಪಣ್ಣ (ಕ)	4 ಪ್ರದರ್ಶನಗಳು
ಲಿಡೋ	
ಲಾಲ್‌ಸಿಂಗ್ ಚೆಡ್ಡಾ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
ಲಾಲ್‌ಸಿಂಗ್ ಚೆಡ್ಡಾ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ.ಮೈ.ನ.ಪ್ರಾ/ವಕ–4/2022–23 ದಿನಾಂಕ 11.08.2022

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರ ನಗರ ವಿಶ್ವಸ್ಥ ಮಂಡಳಿ ವತಿಯಿಂದ ಶ್ರೀಮತಿ ಎಚ್.ಎಂ. ಗೌರಮ್ಮ ರವರಿಗೆ ಜಯಲಕ್ಷ್ಮಿಪುರಂ 2ನೇ ಬ್ಲಾಕ್ ಬಡಾವಣೆಯಲ್ಲಿ ನಿವೇಶನ ಸಂಖ್ಯೆ 110 ಅಳತೆ 60*90 ಅಡಿಗಳು ನಿವೇಶನ ದಿ.23.09.1971ರಲ್ಲಿ ಮಂಜೂರಾಗಿರುತ್ತದೆ. ದಿನಾಂಕ : 01.02.1973 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ನಂತರ ಶ್ರೀಮತಿ ಹೆಚ್.ಎಂ. ಗೌರಮ್ಮ ರವರು ಶ್ರೀ ಎಂ.ಸಿ.ಮಲ್ಲಿಕಾರ್ಜುನ ಶುದ್ಧ ಕ್ರಯಕ್ಕೆ ಮಾರಾಟ ಮಾಡಿದ್ದು, ಇವರಿಂದ ಶ್ರೀ ಮೈಸೂರು ಶ್ರೀನಿವಾಸ ಅಯ್ಯಂಗಾರ್ ಶೇಷಾದ್ರಿ ರವರಿಗೆ ಶುದ್ಧ ಕ್ರಯಪತ್ರ ಸಂಖ್ಯೆ. 2968, ದಿ: 08.09.1988 ರಂದು ಶುದ್ಧ ಕ್ರಯಕ್ಕೆ ನೊಂದಾಯಿಸಿರುತ್ತಾರೆ. ದಿನಾಂಕ: 01.07.2019ರಂದು ಪ್ರಾಧಿಕಾರದಿಂದ ವರ್ಗಾವಣೆ ಪತ್ರ ಪಡೆದುಕೊಂಡಿರುತ್ತಾರೆ.

ಕ್ರಯದಾರರಾದ ಶ್ರೀ ಮೈಸೂರು ಶ್ರೀನಿವಾಸ ಅಯ್ಯಂಗಾರ್ ಶೇಷಾದ್ರಿ ರವರು ಹಕ್ಕುಪತ್ರ ಪಡೆಯಲು ಕೋರಿರುವುದರಿಂದ ಸದರಿಯವರ ಹೆಸರಿಗೆ ವರ್ಗಾವಣೆ ಪತ್ರ ಹಾಗೂ ಹಕ್ಕು ಪತ್ರ ನೀಡಲು ಯಾರಿಂದಾದರು ತಕರಾಕು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಭಿವೃದ್ಧಿ ಪ್ರಾಧಿಕಾರ. ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸಹಿ/–ವಿಶೇಷ ತಹಸೀಲ್ದಾರ್ ವಲಯ ಕಛೇರಿ – 4
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ವಸತಿ ಬಡಾವಣೆಯನ್ನಾಗಿ ಅಭಿವೃದ್ಧಿಪಡಿಸಲು ಸ್ವತ್ತಿನ ಮಾಲೀಕರಾದ, ಬೆಂಗಳೂರು ನಗರ, ಅಗರ, ಹೆಚ್.ಎಸ್.ಆರ್ ಲೇಔಟ್, 1ನೇ ಸೆಕ್ಟರ್, RTO ಕಛೇರಿ ಹತ್ತಿರ, 22 ಮೇನ್, 3ನೇ ಅಡ್ಡ ರಸ್ತೆ, ಮನೆ ನಂಬರ್ 2755 ರ ನಿವಾಸಿಯಾದ, ಹೆಚ್.ಸಿ. ಶಾಂತಯ್ಯ.ಬಿನ್. ಹೆಚ್.ಬಿ. ಚಿಕ್ಕಯ್ಯ ರವರ ಜೊತೆ ಜಂಟಿ ಅಭಿವೃದ್ಧಿ ಕರಾರನ್ನು ಮಾಡಿಕೊಳ್ಳಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (7) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಾಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ' ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಎಂದು ಪರಿಗಣಿಸಲಾಗುವುದು.

<u>ಷೆಡ್ಯೂಲ್</u>: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಕಳಲವಾಡಿ ಗ್ರಾಮದ ಸರ್ವೆ ನಂಬರ್.190/1 ರಲ್ಲಿನ ಹತ್ತು ಎಕರೆ ಎಂಟು ಗುಂಟೆ, ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾ ಗಿರುವ ಜಮೀನಿನ ಪೈಕಿ ಒಂಬತ್ತು ಎಕರೆ ಮೂವತ್ತು ಗುಂಟೆ (9.30.00.00) ವಿಸ್ತೀರ್ಣದ ಜಮೀನಿಗೆ ಚಕ್ಕುಬಂದಿ– ಪೂರ್ವಕ್ಕೆ–ಸರ್ವೆ ನಂಬರ್: 22, ಪಶ್ಚಿಮಕ್ಕೆ –ಸರ್ವೆ ನಂಬರ್: 190/2 ಮತ್ತು 37, ಉತ್ತರಕ್ಕೆ : ಸರ್ವೆ ನಂಬರ್: 22, ದಕ್ಷಿಣಕ್ಕೆ – ಸರ್ವೆ ನಂಬರ್: 44 ಮತ್ತು 43.

ಸಹಿ/–ಎಂ.ಎನ್.ಪ್ರಕಾಶ್ ಕಾಳಪ್ಪ
ವಕೀಲರು

ಮೈಸೂರು, ದಿ:12.08.2022